ವಿಶ್ವಕಾರ್ಮಿಕರೆ ಒಂದಾಗಿ

ಏಕರಂಗ

ಮೇ ವಿಶೇಷಾಂಕ 82

ಸರ್ವಾಧಿಕಾರದ ವಿರುದ್ಧ ಏಕರೂಪ ಹೋರಾಟ ನಡೆಸ



NSA ESMA ರದ್ದಾಗಲಿ


ಜುಲೈ 4 ರಾಷ್ಟ್ರೀಯ ಸಮಾವೇಶ

ನವಂಬರ 23 ಪಾರ್ಲಿಮೆಂಟ ಚಲೋ

ಜನವರಿ 19 ಸಾರ್ವತ್ರಿಕ ಮುಷ್ಕರ



ನ್ಯೂಟ್ರಾನ ಬಾಂಬ ಬೇಡ



ರೇಗನ ... ನಾಶವಾಗಲಿ



ವಿಶ್ವಶಾಂತಿ ಚಿರಾಯುವಾಗಲಿ

ಭಾರತ ಕಮ್ಯುನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ]
ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 4 ಸಂಚಿಕೆ: 20-21 ಮೇ 30, 1982 ಬೆಲೆ : ರೂ. 1-50

ಮುಖಪುಟ ವಿನ್ಯಾಸ—ವಸಂತ

ಶುಭಾಶಯಗಳು

ಪ್ರತಿಸಲದಂತೆ ಈ ಸಲವೂ ಐಕ್ಯರಂಗ ವಿಶೇಷಾಂಕ ನಿಮ್ಮೆದುರಿಗಿದೆ. ಈ ವಿಶೇಷ ಸಂಚಿಕೆಯನ್ನು ಹೊರತರುತ್ತಿರುವ ಸಂದರ್ಭದಲ್ಲಿ ಐಕ್ಯರಂಗ ಓದುಗರಿಗೆ ಸಂಪಾದಕ ಮಂಡಳಿ ಶುಭಾಶಯ ಕೋರುತ್ತದೆ.

ಈ ವಿಶೇಷಾಂಕವನ್ನು ಹೊರತರುವಲ್ಲಿ ಅನೇಕರು ಸಹಕರಿಸಿದ್ದಾರೆ. ಜಾಹೀರಾತುಗಳನ್ನು ಕೊಟ್ಟು ಪ್ರೋತ್ಸಾಹಿಸಿದ್ದಾರೆ. ಲೇಖನ, ಕಥೆ-ಕವನ ಕಳಿಸಿಕೊಟ್ಟಿರುವ ನಮ್ಮ ಮಿತ್ರರಿಗೆ ನಾವು ಋಣಿ. ಅಂದವಾದ ಮುಖಪುಟದ ವಿನ್ಯಾಸವನ್ನು ವಸಂತರವರು ರೂಪಿಸಿದ್ದಾರೆ. ಇವರಿಗೆಲ್ಲ ನಾವು ಕೃತಜ್ಞತೆ ಸಲ್ಲಿಸುತ್ತೇವೆ.

ಐಕ್ಯರಂಗ ವಿಶೇಷಾಂಕ ಹೊರಬರುವಲ್ಲಿ ವಿಶೇಷವಾಗಿ ಶ್ರಮಿಸಿದವರು ರವಿ ಟ್ರೇಡರ್ಸ್‌ನ ಕಾರ್ಮಿಕ ಬಾಂಧವರು. ಈ ಕಾರ್ಮಿಕ ಬಾಂಧವರಿಗೂ, ರವಿ ಟ್ರೇಡರ್ಸ್‌ನ ಮಾಲೀಕರಿಗೂ ನಾವು ಚಿರಋಣಿ.

ಕಳೆದ ಒಂದು ವರುಷದ ಅವಧಿಯಲ್ಲಿ ಓದುಗರು, ಚಂದಾದಾರರು, ಹೋರಾಟಗಾರರು ನಮ್ಮೊಡನೆ ಸಹಕರಿಸಿದ್ದಾರೆ. ಇದೇ ಸಹಕಾರವನ್ನು ಮುಂದೆಯೂ ಅಪೇಕ್ಷಿಸಿ ಅವರಿಗೂ ನಮ್ಮ ವಂದನೆ ಸಲ್ಲಿಸುತ್ತೇವೆ.

ಈ ಬಾರಿ ಪ್ರಕಟಣೆಗೆ ಬಂದ ಹಲವಾರು ಲೇಖನ, ಕವಿತೆಗಳನ್ನು ಸ್ಥಳಾಭಾವದಿಂದಲೂ, ತಡವಾಗಿ ತಲುಪಿದ್ದರ ಕಾರಣವಾಗಿಯೂ ಪ್ರಕಟಿಸಲಾಗಿಲ್ಲ. ನಾವು ಅವರೆಲ್ಲರ ಕ್ಷಮೆ ಕೋರುತ್ತೇವೆ.

ಮತ್ತೊಮ್ಮೆ ಓದುಗರಿಗೆ ಶುಭಾಶಯ ಕೋರುತ್ತ, ನಮ್ಮ ಪರಿಶ್ರಮದ ಫಲವಾದ ಈ ವಿಶೇಷ ಸಂಚಿಕೆಯನ್ನು ಆದರದಿಂದ ಸ್ವಾಗತಿಸುವಿರೆಂದು ಅಪೇಕ್ಷಿಸುತ್ತೇವೆ.

ಪ. ಬಂಗಾಲದಲ್ಲಿ ಎಡರಂಗದ ಜಯಭೇರಿ

ಮೇ 19 ರಂದು ನಡೆದ ಚುನಾವಣೆಯಲ್ಲಿ ಪ. ಬಂಗಾಲದಲ್ಲಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ನೇತೃತ್ವದ ಎಡರಂಗ ಪ್ರಚಂಡ ವಿಜಯ ಗಳಿಸಿದೆ. ಇಂದಿರಾ ಗಾಂಧಿ ಮತ್ತಿತರರು ಎಡರಂಗದ ವಿರುದ್ಧ ದುರುದ್ದೇಶಪೂರಿತ ಅನೇಕ ಅಪಾದನೆಗಳನ್ನು ಮಾಡಿದ್ದರೂ, ಪ. ಬಂಗಾಲದ ಜನತೆ ಜನಾನುರಾಗಿ ಎಡರಂಗವನ್ನು ಮತ್ತೆ ಅಧಿಕಾರಕ್ಕೆ ತಂದಿದೆ.

ಎಡರಂಗಕ್ಕೆ ಮಹತ್ತರ ವಿಜಯ ತಂದಿರುವುದಕ್ಕೆ, ಸಿ. ಪಿ. ಐ (ಎಂ) ಕರ್ನಾಟಕ ರಾಜ್ಯ ಘಟಕ ಮತ್ತು ರಾಜ್ಯದ ದುಡಿಯುವ ಜನತೆ ಪ. ಬಂಗಾಲದ ಮತದಾರರನ್ನು ಅಭಿನಂದಿಸಿವೆ.

ಸಿ. ಪಿ. ಐ (ಎಂ) ರಾಜ್ಯ ಘಟಕದ ಕಾರ್ಯದರ್ಶಿ ಕಾಂ। ಎಂ. ಕೆ. ಭಟ್ ಅವರು, ಸಿ. ಪಿ. ಐ. (ಎಂ.) ಪ. ಬಂಗಾಲ ಘಟಕದ ಕಾರ್ಯದರ್ಶಿ, ಎಡರಂಗದ ಛೇರ್‌ಮನ್ ಕಾಂ। ಪ್ರಮೋದ್ ದಾಸ್‌ಗುಪ್ತಾ ಅವರಿಗೆ ಮತ್ತು ಮತ್ತೆ ಮುಖ್ಯಮಂತ್ರಿಯಾಗಿ ಚುನಾಯಿತರಾಗಿರುವ ಕಾಂ। ಜ್ಯೋತಿ ಬಸು ಅವರಿಗೆ ಸಂದೇಶವನ್ನು ಕಳಿಸಿ ಚುನಾವಣೆಯ ಪ್ರಚಂಡ ವಿಜಯಕ್ಕಾಗಿ ಅಭಿನಂದಿಸಿದ್ದಾರೆ.

ಮುಂದಿನ ಐದು ವರ್ಷಗಳ ಅವಧಿಯಲ್ಲಿ ಜನತೆಯನ್ನು ಬಾಧಿಸುತ್ತಿರುವ ಸಮಸ್ಯೆಗಳತ್ತ ತೀವ್ರ ಗಮನಹರಿಸಿ ಎಡರಂಗ ಇನ್ನೂ ಹೆಚ್ಚಿನ ಜನ ಬೆಂಬಲ ಗಳಿಸಲೆಂದು ಐಕ್ಯರಂಗ ಆಶಿಸುತ್ತದೆ.

●

[23-5-82ರ ಪತ್ರಿಕೆ ಪ್ರಕಟವಾಗಿಲ್ಲವಾದ್ದರಿಂದ ಮತ್ತು 30-5-82ರ ಈ ಪತ್ರಿಕೆ ವಿಶೇಷಾಂಕವಾಗಿರುವದರಿಂದ ಚುನಾವಣೆ ಫಲಿತಾಂಶದ ಪೂರ್ತಿವಿವರ ನಮ್ಮ ಓದುಗರಿಗೆ ನೀಡಲಾಗಿಲ್ಲ. ಈ ವಿವರವನ್ನು ಮತ್ತು ವಿವಿಡೆಡೆಗಳಿಂದ ಬಂದಿರುವ ಸುದ್ಧಿ-ಸಮಾಚಾರಗಳನ್ನು ಯಥಾ ಪ್ರಕಾರ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುತ್ತೇವೆ. ಓದುಗರು ಸಹಕರಿಸಬೇಕಾಗಿ ಕೋರಿಕೆ]

ಕಾರ್ಮಿಕ ವರ್ಗದ ಮುಂದಿರುವ ಕರ್ತವ್ಯ

—ಎಂ. ಕೆ.

ಕಾರ್ಮಿಕ ವರ್ಗ ಮತ್ತು ಸಮಾಜವಾದ :

"ಉತ್ಪಾದನೆಯು ಸಾಮಾಜಿಕವಾಗಿದ್ದು, ಅದನ್ನು ಕೊಳ್ಳೆ ಹೊಡೆಯುವುದು ಕೆಲವರು" ಎಂಬ ಉತ್ಪಾದನಾ ಮತ್ತು ವಿತರಣಾ ವ್ಯವಸ್ಥೆಯಿರುವ ಬಂಡವಾಳಶಾಹಿ ಪದ್ಧತಿಯನ್ನು ಬದಲಾಯಿಸಿ "ಉತ್ಪಾದನೆಯು ಸಾಮಾಜಿಕ, ಅದನ್ನು ಹಂಚಿಕೊಳ್ಳುವುದೂ ಸಾಮಾಜಿಕವಾಗಿ" ಎಂಬ ಉತ್ಪಾದನಾ ಮತ್ತು ವಿತರಣಾ ವ್ಯವಸ್ಥೆಯಿರುವ ಸಮಾಜವಾದಿ ಪದ್ಧತಿಯನ್ನು ರೂಪಿಸುವುದರಲ್ಲಿ ಕಾರ್ಮಿಕ ವರ್ಗಕ್ಕೆ ನಾಯಕತ್ವದ ಅಗ್ರಗಣ್ಯ ಸ್ಥಾನವಿದೆ. ಕಾರ್ಮಿಕ ವರ್ಗಕ್ಕೆ ನಾಯಕತ್ವದ ಸ್ಥಾನ ದೊರೆತಿರುವುದು ಅದರ ಸಂಖ್ಯಾಬಲದಿಂದಲ್ಲ. ಸಾಮಾಜಿಕವಾಗಿ, ಚಾರಿತ್ರಿಕವಾಗಿ, ತಾತ್ವಿಕವಾಗಿ ಮತ್ತು ಕ್ರಾಂತಿಯ ತಂತ್ರ ವಿಧಾನದಲ್ಲಿ ಕಾರ್ಮಿಕರ ವರ್ಗವು ತನ್ನ ಈ ಸ್ಥಾನವನ್ನು ಪಡೆಯುತ್ತದೆ.

ಸಮಾಜವಾದಿ ಸಮಾಜ ಸ್ಥಾಪನೆಯಾಗಬೇಕಾದರೆ ಸಂಪತ್ತಿನ ಸಮಾನ ವಿತರಣೆಯಾಗಬೇಕು. ಸಂಪತ್ತಿನ ಸಮಾನ ವಿತರಣೆಯಾಗಬೇಕಾದರೆ, ಖಾಸಗಿ ಆಸ್ತಿ ಒಡೆತನವನ್ನು ಹೋಗಲಾಡಿಸಿ, ಉತ್ಪಾದನಾ ಸಾಧನಗಳನ್ನು ಸಮಾಜದ ಸ್ವತ್ತನ್ನಾಗಿ ಮಾಡಬೇಕು. ಸ್ವಂತ ಆಸ್ತಿ ಪದ್ಧತಿ ಹೋಗಲಾಡಿಸುವಂತೆ ನಡೆಸುವ ಹೋರಾಟದಿಂದ ಕಾರ್ಮಿಕ (ನಿಜವಾದ ಅರ್ಥದಲ್ಲಿ ಕಾರ್ಮಿಕ ಎಂದರೆ ಭೂಮಿ ಮತ್ತು ಇನ್ನಿತರ ಉತ್ಪಾದನಾ ಸಾಧನಗಳನ್ನು ಕಳಕೊಂಡು, ತನ್ನ ಶರೀರ ಶ್ರಮವನ್ನು ಮಾರಿ ಬದುಕುವವ—ಆತನಲ್ಲಿರುವುದು ತನ್ನ ಶರೀರ ಶ್ರಮ ಮಾತ್ರ-ಅದೂ ಮಾರಾಟಕ್ಕಾಗಿರುವ ಸರಕು ಆಗುತ್ತದೆ) ತನ್ನ ಕೂಲಿ ಸಂಕಲೆಯ ಹೊರತು ಮತ್ತೇನನ್ನೂ ಕಳಕೊಳ್ಳುವುದಿಲ್ಲ. ಆದರೆ ರೈತರು ಮತ್ತಿತರ ಸ್ವಂತ ಆಸ್ತಿ ಮನೋಭಾವನೆ ಇರುವವರಿಗೆ ಸ್ವಂತ ಆಸ್ತಿ ಹೋಗುವುದೆಂಬ ಭಯವಿರುವುದರಿಂದ (ಇವರು ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಬಹಳಷ್ಟು ಶೋಷಣೆಗೊಳಗಾಗಿ, ತಮ್ಮಲ್ಲಿರುವ ಉತ್ಪಾದನಾ ಸಾಧನಗಳನ್ನು ಕಳಕೊಳ್ಳುವಂತಾಗುವುದಾದರೂ) ಸಮಾಜವಾದಕ್ಕಾಗಿ ನಡೆಯುವ ಹೋರಾಟದಲ್ಲಿ ಮುಂಚೂಣಿ ಪಾತ್ರ ವಹಿಸುವುದು ಸಾಧ್ಯವಾಗುವುದಿಲ್ಲ. ಇವರಿಗೆ ಕಾರ್ಮಿಕ ವರ್ಗವು ನೇತೃತ್ವವನ್ನಿತ್ತು, ಇವರೆಲ್ಲರ ಸಮಸ್ಯೆ ಪರಿಹಾರವು ಸಮಾಜವಾದಿ ವ್ಯವಸ್ಥೆಯಲ್ಲಿ ಮಾತ್ರ ಸಾಧ್ಯವೆಂಬ ತಿಳುವಳಿಕೆಯನ್ನಿತ್ತು, ಹಳ್ಳಿಯ ಬಡವರನ್ನೂ ಸಮಾಜವಾದಿ ಹೋರಾಟಕ್ಕಿಳಿಸಬೇಕು.

ಬಂಡವಾಳಶಾಹಿ ಉತ್ಪಾದನಾ ವ್ಯವಸ್ಥೆಯು ಬೆಳೆದಂತೆಲ್ಲಾ ಕಾರ್ಮಿಕ ವರ್ಗವು ಸಾಮಾಜಿಕವಾಗಿ ಹೆಚ್ಚು ಹೆಚ್ಚಾಗಿ ಒಂದುಗೂಡುತ್ತದೆ. ಒಂದೇ ಕಡೆ ನೂರಾರು, ಸಹಸ್ರಾರು ಕಾರ್ಮಿಕರು ಒಂದೇ ತೆರನಾದ ಉತ್ಪಾದನಾ ಕೆಲಸದಲ್ಲಿ ಭಾಗವಹಿಸುವುದರಿಂದ ಅವರಲ್ಲಿ ಸಾಮಾಜಿಕ ಮತ್ತು ಸಂಘಟನಾ ಜಾಗೃತಿಯನ್ನುಂಟು ಮಾಡುವುದು ಸುಲಭ ಮತ್ತು ಸ್ವಾಭಾವಿಕವಾಗಿರುತ್ತದೆ. ವರ್ಗ ಹೋರಾಟದ ಪ್ರಜ್ಞೆ ಬೆಳೆಸುವುದು ಮತ್ತು ಅದನ್ನು ಕಾರ್ಯರೂಪಕ್ಕಿಳಿಸುವುದರ ರಣರಂಗ ಬಂಡವಾಳಶಾಹಿ ಉತ್ಪಾದನಾ ಕೇಂದ್ರಗಳಾಗಬಲ್ಲುದು. ಆದರೆ ಸಾಮಾಜಿಕವಾಗಿ ಚದುರಿ, ಹರಡಿಕೊಂಡಿರುವ ಹಳ್ಳಿಯ ಬಡವರು, ಮುಖ್ಯವಾಗಿ ರೈತರನ್ನು ಸಂಘಟಿಸುವುದು ಕಷ್ಟದ ಕೆಲಸ. ಕಾರ್ಮಿಕ ವರ್ಗ ಸಾಮಾಜಿಕವಾಗಿ ಹೆಚ್ಚು ಮುಂದುವರಿದಿರುವುದರಿಂದ ಸಮಾಜವಾದಕ್ಕಾಗಿ ನಡೆಯುವ ಹೋರಾಟದಲ್ಲಿ ಅದಕ್ಕೆ ನಾಯಕತ್ವದ ಸ್ಥಾನ ಸಿಗುತ್ತದೆ.

ಬಂಡವಾಳಶಾಹಿ ಉತ್ಪಾದನಾ ವ್ಯವಸ್ಥೆಯು ಹೆಚ್ಚು ಬೆಳೆದಂತೆಲ್ಲಾ ಕಾರ್ಮಿಕ ವರ್ಗವು ಅತ್ಯಂತ ಆಯಕಟ್ಟಿನ ಪ್ರದೇಶಗಳಲ್ಲಿರುತ್ತದೆ. ಸಮಾಜವಾದಕ್ಕಾಗಿ ಸ್ವಂತ ಆಸ್ತಿಪದ್ಧತಿ ನಾಶಕ್ಕಾಗಿ ನಡೆಯುವ ಕ್ರಾಂತಿಕಾರಿ ಹೋರಾಟದ ಸಂದರ್ಭ ತಾನು ಅತ್ಯಂತ ಆಯಕಟ್ಟಿನ ಜಾಗಗಳಲ್ಲಿರುವುದರಿಂದ ಕಾರ್ಮಿಕ ವರ್ಗವು ನಿರ್ಣಯದ ಪಾತ್ರವನ್ನು ವಹಿಸುವುದು ಸಾಧ್ಯವಾಗುತ್ತದೆ. ಈ ಎಲ್ಲ ಕಾರಣಗಳಿಂದಲೇ ಸಮಾಜವಾದಕ್ಕಾಗಿ ನಡೆಯುವ ಹೋರಾಟದಲ್ಲಿ ಕಾರ್ಮಿಕ ವರ್ಗಕ್ಕೆ ನಾಯಕತ್ವದ ಸ್ಥಾನ ದೊರೆಯುತ್ತದೆಯೇ ಹೊರತು ಸಂಖ್ಯಾಬಲದಿಂದಲ್ಲ.

ಕಾರ್ಮಿಕ ವರ್ಗ ಮತ್ತು ರಾಜಕೀಯ

ಸಮಾಜದ ಚಾರಿತ್ರಿಕ ಬೆಳವಣಿಗೆಯಲ್ಲಿ, ಸಮಾಜವಾದಿ ಸಮಾಜದ ಸ್ಥಾಪನೆಯಲ್ಲಿ ಕಾರ್ಮಿಕ ವರ್ಗಕ್ಕೆ ಮುಂಚೂಣಿ ಪಾತ್ರವಿದೆ ಹಾಗೆಂದಾಕ್ಷಣ ಕಾರ್ಮಿಕ ವರ್ಗದಲ್ಲಿ ಈ ಪ್ರಜ್ಞೆ ತನ್ನಿಂದ ತಾನಾಗಿ ಬೆಳೆದು ಬಂದು, ತಮ್ಮನ್ನು ತಾವೇ ಸಂಘಟಿಸಿಕೊಂಡು ಕ್ರಾಂತಿಯನ್ನು ಸಾಧಿಸುತ್ತಾರೆಂದು ತಿಳಿಯುವುದು ತಪ್ಪು. ಕಾರ್ಮಿಕ ವರ್ಗನನ್ನು ಬಂಡವಾಳಶಾಹಿ ಸಿದ್ಧಾಂತ, ತತ್ವ ಮತ್ತು ಮೌಲ್ಯಗಳ ಪ್ರಭಾವದೊಳಕ್ಕೆ ಸಿಲುಕಿ ಹಾಕಿಸಲು ಆಳುವ ವರ್ಗಗಳಿಂದ ಸತತ ಪ್ರಯತ್ನವು ನಡೆಯುತ್ತದೆ. ಆದುದರಿಂದ ಕಾರ್ಮಿಕ ವರ್ಗದ ದೃಷ್ಟಿಕೋಣವನ್ನಿರಿಸಿ, ಕಾರ್ಮಿಕ ವರ್ಗದ ಸಿದ್ಧಾಂತದ ಆಧಾರದಲ್ಲಿ, ಕಾರ್ಮಿಕ ವರ್ಗವನ್ನು ಸಂಘಟಿಸುವುದಕ್ಕಾಗಿ ಕಾರ್ಮಿಕ ವರ್ಗದ್ದೆ ಒಂದು ರಾಜಕೀಯ ಪಕ್ಷವು ಬೇಕು. ಅಂತಹ ಸಿದ್ಧಾಂತವೇ ಮಾರ್ಕ್ಸ್‌ವಾದ. ಕಾರ್ಮಿಕ ವರ್ಗದ ಪಕ್ಷ ಕಮ್ಯೂನಿಸ್ಟ್ ಪಕ್ಷ. ಕಾರ್ಮಿಕ ವರ್ಗವನ್ನು ಒಂದಾಗಿಸಿ, ಉಳಿದೆಲ್ಲಾ ಶೋಷಿತ ಜನತೆಗೆ ಕಾರ್ಮಿಕರ ವರ್ಗವು ನೇತೃತ್ವವನ್ನೀಯುತ್ತಾ, ಎಲ್ಲಾ ಶೋಷಿತ ಜನತೆಯ ಕ್ರಾಂತಿಕಾರಿ ವರ್ಗ ಹೋರಾಟಗಳ ಮೂಲಕ ಮುನ್ನಡೆಯುವಂತೆ ಮಾಡುವುದೇ ಕಮ್ಯೂನಿಸ್ಟ್ ಪಕ್ಷದ ಗುರಿಯಾಗಿರುತ್ತದೆ.

ತಮ್ಮ ತಕ್ಷಣದ ಆರ್ಥಿಕ ಬೇಡಿಕೆಗಳನ್ನು ಪಡೆಯುವುದಕ್ಕಾಗಿ ಕಾರ್ಮಿಕ ಸಂಘಟನೆಗಳನ್ನು ರಚಿಸಿಕೊಂಡು ಹೋರಾಡುವುದು ವರ್ಗ ಮತ್ತು ರಾಜಕೀಯ ಪ್ರಜ್ಞೆ ಮೂಡಿಸುವುದರಲ್ಲಿ ಪ್ರಾಥಮಿಕ ಹಂತವಾಗಿದೆ. ಆರ್ಥಿಕ ಬೇಡಿಕೆಗಳಿಗಾಗಿ ಹೋರಾಡುವ ಪ್ರಾಥಮಿಕ ಪ್ರಜ್ಞೆಯ ಹಂತದಿಂದ ವರ್ಗ ಪ್ರಜ್ಞೆ, ಸಮಾಜವಾದಿ ಪ್ರಜ್ಞೆ, ಅಥವಾ ಕ್ರಾಂತಿಕಾರಿ ಪ್ರಜ್ಞೆಯ ಹಂತಕ್ಕೆ ಅದನ್ನು ಬೆಳೆಸುವುದು ಕಾರ್ಮಿಕ ವರ್ಗದ ರಾಜಕೀಯ ಪಕ್ಷದ ಕರ್ತವ್ಯವಾಗಿದೆ. ಒಂದು ಕಾರಖಾನೆಯ ಕಾರ್ಮಿಕರು ಒಂದಾಗಬೇಕು; ಎಲ್ಲ ಕಾರಖಾನೆಗಳ ಕಾರ್ಮಿಕರು ಒಂದಾಗಬೇಕು; ಕಾರ್ಮಿಕ ವರ್ಗವೆಲ್ಲಾ ಒಂದಾಗಿ ಎಲ್ಲಾ ಶೋಷಿತ ಜನತೆಯ ಸಮಸ್ಯೆಗಳ ಬಗ್ಗೆಯೂ ಹೋರಾಡುತ್ತಾ, ಅವರಿಗೆ ಬೆಂಬಲ, ನೇತೃತ್ವವನ್ನೀಯುತ್ತಾ, ಸಮಾಜ ಬದಲಾಯಿಸುವ ದಿಕ್ಕಿನಲ್ಲಿ ಮುನ್ನಡೆಯುವಂತೆ ಮಾಡುವುದೇ ಕ್ರಾಂತಿಕಾರಿ ಪ್ರಜ್ಞೆಯನ್ನು ಬೆಳೆಸುವುದಾಗಿದೆ. ಹಾಗೆಯೇ ಜಗತ್ತಿನಾದ್ಯಂತ ಕಾರ್ಮಿಕ ವರ್ಗ ಒಂದಾಗಿ, ಜಾಗತಿಕ ಬಂಡವಾಳಶಾಹಿ ವ್ಯವಸ್ಥೆಯನ್ನು ಕಿತ್ತುಹಾಕಿ ಜಗತ್ತಿನಾದ್ಯಂತ ಸಮಾಜವಾದಿ ವ್ಯವಸ್ಥೆಯನ್ನು ಜಾರಿಗೆ ತರಬೇಕು. ಆದುದರಿಂದಲೇ ಕಾರ್ಮಿಕರ ವರ್ಗದ ಅಂತರಾಷ್ಟ್ರೀಯತೆ-ಜಗತ್ತಿನ ಕಾರ್ಮಿಕ ವರ್ಗ ಒಂದಾಗಿ ಹೋರಾಡುವ ದೃಷ್ಟಿ ಕಾರ್ಮಿಕ ವರ್ಗಕ್ಕಿರಬೇಕು. ರಾಷ್ಟ್ರೀಯ ಚೌಕಟ್ಟಿನೊಳಗೆ ಸಮಾಜವಾದಕ್ಕಾಗಿ ಹೋರಾಡುವುದರೊಂದಿಗೆ ಅಂತರಾಷ್ಟ್ರೀಯ ಕರ್ತವ್ಯಗಳನ್ನು ನೆರವೇರಿಸಬೇಕು.

ಕಾರ್ಮಿಕ ವರ್ಗಕ್ಕೆ ರಾಜಕೀಯ ಪ್ರಜ್ಞೆ ನೀಡುವ ಕೆಲಸಕ್ಕೆ ಅನೇಕ ಎಡರು ತೊಡರುಗಳಿವೆ. ಕಾರ್ಮಿಕ ವರ್ಗಕ್ಕೆ ರಾಜಕೀಯ ಬೇಡ ಎನ್ನುವವರು ಕಾರ್ಮಿಕ ವರ್ಗವು ಇಂದಿನ ಶೋಷಣೆಯಿಂದ ಕೂಡಿದ ವ್ಯವಸ್ಥೆಯನ್ನು ಒಪ್ಪಿಕೊಳ್ಳಬೇಕೆನ್ನುವ ಬಂಡವಾಳಶಾಹಿ ವ್ಯವಸ್ಥೆಯ ಪ್ರತಿಪಾದಕರಾಗಿದ್ದಾರೆ.

(27ನೇ ಪುಟ ನೋಡಿ)

ಭಾರತದ ಕಾರ್ಮಿಕ ವರ್ಗದ ಸಂಕ್ಷಿಪ್ತ ಚರಿತ್ರೆ (1850-1947)

—ವಿರಾಜ್

ಆಧುನಿಕ ಕಾರ್ಮಿಕ ವರ್ಗ ಮತ್ತು ಅದರ ಚಳುವಳಿ ಕೈಗಾರಿಕಾ ಕ್ರಾಂತಿಯ ಶಿಶು. ಕೈಗಾರಿಕಾ ಕ್ರಾಂತಿ ಇಂಗ್ಲೆಂಡಿನಲ್ಲಿ ಆರಂಭವಾಗಿ ಉಳಿದ ದೇಶಗಳಿಗೆ ಹಬ್ಬತೊಡಗಿತು. ಆದರೆ ಇದೇ ಸಮಯದಲ್ಲಿ ಭಾರತ ವಸಾಹತುವಾದದ್ದರಿಂದ, ಕೈಗಾರಿಕಾ ಕ್ರಾಂತಿ ಮತ್ತು ಬಂಡವಾಳಶಾಹಿ ಬೆಳವಣಿಗೆ ಇಲ್ಲಿ ಸುತ್ತು ಬಳಸಿದ ದಾರಿಯಲ್ಲಿ ನಿಧಾನವಾಗಿ ಆಯಿತು. ಬ್ರಿಟೀಷರ ಆಗಮನದಿಂದ ಭಾರತದ ಸಾಂಪ್ರದಾಯಕ ಆರ್ಥಿಕತೆ ನಾಶವಾಯಿತು. ಭಾರತ-ಬ್ರಿಟನ್ನಿನ ಬಾಲಂಗೋಚಿ ಆಯಿತು. ಕಚ್ಚಾ ವಸ್ತುಗಳ ರಫ್ತು, ಸಿದ್ಧವಸ್ತುಗಳ ಆಮದು—ಹೀಗೆ ಇಬ್ಬಗೆಯಲ್ಲಿ ಭಾರತ ಬಡವಾಯಿತು.

ಆಧುನಿಕ ಕಾರ್ಮಿಕ ವರ್ಗದ ಜನನ

ತಕ್ಷಣ ಬ್ರಿಟೀಷರು ಯಾವುದೇ ಹೊಸ ಕೈಗಾರಿಕೆ ಆಧಾರಿತ ಆರ್ಥಿಕತೆಯಾಗಲಿ, ಉತ್ಪಾದನಾ ಪದ್ಧತಿಯನ್ನಾಗಲಿ ಜಾರಿಗೆ ತರಲಿಲ್ಲ. ಅವರಿಗೆ ಅದರ ಅಗತ್ಯವಿರಲಿಲ್ಲ. ಇಲ್ಲಿ ಅವರ ಆಳ್ವಿಕೆ ಬಲಪಡಿಸಲು ಆರಂಭಿಸಿದ ರೈಲ್ವೇ ಭಾರತದ ಆಧುನಿಕ ಕೈಗಾರಿಕೆಯ ಹರಿಕಾರನಾಯಿತು. ರೈಲ್ವೇ ನಿರ್ಮಾಣದಲ್ಲಿ ಪಾಲುಗೊಂಡ ಕಾರ್ಮಿಕರು ಭಾರತದ ಆಧುನಿಕ ಕಾರ್ಮಿಕ ವರ್ಗದ ಆದಿ ಪುರುಷರು. ಸೆಣಬು, ಟೀ, ರಬ್ಬರು ಇತ್ಯಾದಿ ಕ್ಷೇತ್ರಗಳಲ್ಲಿ ಆಗಲೇ ಸ್ವಲ್ಪಮಟ್ಟಿನ ಬೆಳವಣಿಗೆ ನಡೆದಿದ್ದು ರೈಲ್ವೇ ಬೆಳವಣಿಗೆಯಿಂದ ಇದು ತೀವ್ರಗತಿಯಲ್ಲಿ ನಡೆಯಿತು. ರೈಲ್ವೇ ಆಧಾರಿತ ಕಲ್ಲಿದ್ದಲು ಮತ್ತು ಇಂಜನೀಯರಿಂಗ್ ಕೈಗಾರಿಕೆಗಳು ಬೆಳೆದವು. ಸೆಣಬು ಮುಂತಾದ ಕ್ಷೇತ್ರಗಳಲ್ಲಿ ಬ್ರಿಟೀಷ್ ಬಂಡವಾಳವೂ ಹರಿಯತೊಡಗಿತು. ಬ್ರಿಟೀಷ್ ಕಂಪನಿಗಳ ಏಜಂಟರಾಗಿ, ಆಶ್ರಿತರಾಗಿ ಹಣ ಸಂಪಾದಿಸಿದ ಜಮೀನುದಾರರು, ಬನಿಯಾಗಳು ಈ ಹಣವನ್ನು ಕೈಗಾರಿಕೆಗಳಲ್ಲಿ ಮುಖ್ಯವಾಗಿ ಹತ್ತಿ ಗಿರಣಿಗಳಲ್ಲಿ ತೊಡಗಿಸತೊಡಗಿದರು. ಇವರು ಭಾರತದ ಬೂರ್ಜ್ವಾ ವರ್ಗದ (ಬಂಡವಾಳಶಾಹಿ ವರ್ಗದ) ಆದಿಪುರುಷರು.

ಇವೆಲ್ಲದರಿಂದ ಕಾರ್ಮಿಕ ವರ್ಗ ಸಂಖ್ಯಾಬಲದಲ್ಲಿ ಬೆಳೆಯಿತು. 1890ರ ಹೊತ್ತಿಗೆ ಕಾರ್ಮಿಕ ವರ್ಗದ ಸಂಖ್ಯೆ ಮೂರುವರೆ ಲಕ್ಷವಾಗಿತ್ತು.

ಯುರೋಪಿಯನ್ ದೇಶಗಳಲ್ಲಿ ಮತ್ತು ಭಾರತದಲ್ಲಿ ಕಾರ್ಮಿಕ ವರ್ಗದ ಜನನದಲ್ಲಿ ಒಂದು ಮುಖ್ಯ ವ್ಯತ್ಯಾಸವಿದೆ. ಯುರೋಪಿನಲ್ಲಿ ಬಂಡವಾಳಶಾಹಿ ಬೆಳೆದಾಗ ನಾಶಹೊಂದಿದ ಕೈಕಸಬುದಾರರು, ಕುಶಲ ಕರ್ಮಿಗಳು ಹೆಚ್ಚು ಕಡಿಮೆ ಕೂಡಲೇ ಕಾರ್ಖಾನೆಗಳಿಗೆ ತಮ್ಮ ನೈಪುಣ್ಯ ಇನ್ನೂ ಇರುವಾಗಲೇ ಸೇರಿದರು. ಇವರು ಆಗಲೇ ನಗರವಾಸಿಗಳಾಗಿದ್ದು, ಕೂಡಲೇ ಸಂಘಟಿತರಾಗಿ ಬಂಡವಾಳಶಾಹಿ ಬೆಳೆದ ಗತಿಯಲ್ಲೇ ತಮ್ಮ ಚಳುವಳಿಯನ್ನು ಬೆಳೆಸಿದರು. ಆದರೆ ಭಾರತದಲ್ಲಿ ಕೈಗಾರಿಕೆ ಸ್ಥಾಪನೆ ಮತ್ತು ಹಳೆಯ ಆರ್ಥಿಕತೆ ನಾಶದ ಮಧ್ಯೆ ದೊಡ್ಡ ಕಾಲಾಂತರವಿತ್ತು. ಕುಶಲಕರ್ಮಿಗಳು ಕೈಕಸಬುದಾರರು ಹಳ್ಳಿಯ ಸಾಂಪ್ರದಾಯಕ ಆರ್ಥಿಕತೆ ನಾಶವಾದಾಗ, ಹಳ್ಳಿಯಲ್ಲಿ ಹೊರೆಯಾಗಿ ಅತ್ಯಂತ ಕೆಳವರ್ಗಕ್ಕೆ ಸೇರಿದರು. ಕೈಗಾರಿಕೆಗಳು ಆರಂಭವಾದಾಗ ನಗರಗಳಿಗೆ ವಲಸೆ ಬಂದು ಕಾರ್ಮಿಕರಾದವರು ಇವರೇ. ಕಾರ್ಮಿಕರಾಗಿ ನಗರ ಪ್ರವೇಶಿಸಿದಾಗ ಇವರ ಅತ್ಯಂತ ದರಿದ್ರ ಸ್ಥಿತಿ, ಭಾರತದಂತಹ ವೈವಿಧ್ಯತೆಯ ದೇಶದಲ್ಲಿ ದೂರದ ನಗರಗಳಲ್ಲಿ ಇವರು ಅನುಭವಿಸಬೇಕಾದ ಪರಕೀಯತೆ, ಒಬ್ಬಂಟಿತನ ಇವರು ತಮ್ಮೊಂದಿಗೆ ಬಿದ್ದು ಸಾಮಾಜಿಕ, ಧಾರ್ಮಿಕ ಅಂಧಶ್ರದ್ಧೆ, ಜಾತೀಯತೆ, ಇವೆಲ್ಲ ಕಾರ್ಮಿಕ ಚಳುವಳಿಯ ಆರಂಭದ ಬೆಳವಣಿಗೆಯ ಹಂತದಲ್ಲಿ ಸಾಕಷ್ಟು ಸಮಸ್ಯೆ ತಂದಿತಲ್ಲದೆ, ಇಂದಿಗೂ ಅದರ ಪರಿಣಾಮ ಮುಂದುವರಿದಿದೆ.

ಆಧುನಿಕ ಕೈಗಾರಿಕೆಯ ಆರಂಭದ ಅವಧಿಯಲ್ಲಿ ಕಾರ್ಮಿಕರ ಪರಿಸ್ಥಿತಿ, ಯುರೋಪಿನ ಬಂಡವಾಳಶಾಹಿಯ ಮೊದಲ ದಿನಗಳಿದ್ದಕ್ಕಿಂತಲೂ ದಯನೀಯವಾಗಿತ್ತು. 16 ರಿಂದ 18 ಗಂಟೆಗಳ ಕಾಲ ದುಡಿಸುವುದು ಸಾಮಾನ್ಯವಾಗಿತ್ತು. ಹೆಂಗಸರನ್ನೂ, 5 ರಿಂದ 7 ವರ್ಷದ ಹಸುಳೆಗಳನ್ನು 10–15 ಗಂಟೆ ಕಾಲ ಮಧ್ಯೆ ಬಿಡುವಿಲ್ಲದೆ ದುಡಿಸುವುದು ಸಾಮಾನ್ಯವಾಗಿತ್ತು. ಈ ದುಡಿತದಿಂದ ಕುಸಿದುಬಿದ್ದವರನ್ನು ಹೊರದಬ್ಬಿ ಬೇರೆಯವರನ್ನು ನೇಮಿಸಿಕೊಳ್ಳುವುದೂ ಸರ್ವೇಸಾಮಾನ್ಯ. ಈ ನರಕದಿಂದತಪ್ಪಿಸಿಕೊಳ್ಳಲು ಓಡಿಹೋದ ಕಾರ್ಮಿಕರನ್ನು ಶಿಕ್ಷಿಸುವ, ದಂಡ ಹೇರುವ 'ವ್ಯವಸ್ಥೆ' ಸಹ ಇತ್ತು. ಇವೇ ಮುಂತಾದ ನ್ಯೂನ್ಯತೆಗಳಿಂದ, ಚಾರಿತ್ರಿಕ ಕಾರಣಗಳಿಂದ ಕಾರ್ಮಿಕ ವರ್ಗ ದೇಶದ ನಾಯಕತ್ವ ವಹಿಸುವಲ್ಲಿ ಬಂಡವಾಳಶಾಹಿ ವರ್ಗಕ್ಕಿಂತ ಹಿಂದೆ ಬಿತ್ತು. ಅಲ್ಲದೆ ಸಾಮ್ರಾಜ್ಯಶಾಹಿ ವಿರೋಧಿ ಸ್ವಾತಂತ್ರ್ಯ ಹೋರಾಟದಲ್ಲಿ ಬಂಡವಾಳಶಾಹಿ ವರ್ಗದ ನಾಯಕತ್ವದಲ್ಲಿ ಭಾಗವಹಿಸಬೇಕಾಯಿತು.

ಕಾರ್ಮಿಕ ಚಳುವಳಿಯ ಆರಂಭ (1850–1900)

ಇಂತಹ ಅಮಾನುಷ, ತೀರ ಪ್ರತಿಕೂಲ ಪರಿಸ್ಥಿತಿಯಲ್ಲಿ ಕೆಲಸ ಮಾಡುತ್ತಿದ್ದ, ಹುಟ್ಟಿ ಬೆಳೆದ ಕಾರ್ಮಿಕ ವರ್ಗ ತನ್ನ ವರ್ಗ ಸ್ವಭಾವಕ್ಕನುಸಾರ ಮೊದಲಿನಿಂದ ಶೋಷಣೆಗೆ ಪ್ರತಿರೋಧ ಒಡ್ಡುತ್ತಾ ಬಂದಿದೆ. ಭಾರತೀಯ ಕಾರ್ಮಿಕ ವರ್ಗದ ಚಳುವಳಿಯ ವಿಕಾಸವನ್ನು ಕೂಲಂಕುಸವಾಗಿ ಅವಲೋಕಿಸಿದರೆ ಈ ಕೆಳಗಿನ 4 ಘಟ್ಟಗಳನ್ನು ಸ್ಪಷ್ಟವಾಗಿ ಕಾಣಬಹುದು.

1) ಕಾರ್ಮಿಕ ಚಳುವಳಿಯ ಆರಂಭದ ಹಂತ (1850-1900)

2) ಟ್ರೇಡ್ ಯೂನಿಯನ್‌ಗಳ ರಚನೆಗೆ ತಯಾರಿ ಹಂತ (1900–1914)

3) ಸಂಘಟಿತ ಟ್ರೇಡ್ ಯೂನಿಯನ್‌ಗಳ ಕಾರ್ಮಿಕ ವರ್ಗ ರಾಜಕೀಯ ಪ್ರಜ್ಞೆ ಪಡೆದು ರಾಜಕೀಯ ಚಳುವಳಿಗಿಳಿದ ಮೂರನೆಯ ಹಂತ (1915–47)

4) ಬದಲಾದ ರಾಜಕೀಯ ಸನ್ನಿವೇಶದಲ್ಲಿ ಅತ್ಯಂತ ಉನ್ನತ ಮಟ್ಟದ ಸಂಘಟಿತ ಆರ್ಥಿಕ ಮತ್ತು ರಾಜಕೀಯ ಹೋರಾಟಗಳ ಉನ್ನತ ಮಟ್ಟದ ರಾಜಕೀಯ ದೃಷ್ಟಿಕೋನದ ಹಂತ (1947 ರಿಂದೀಚೆಗೆ)

ಮೊದಲ ಹಂತ :

ಈ ಹಂತದಲ್ಲಿ ಕಾರ್ಮಿಕರು ನಿಜವಾದ ಅರ್ಥದಲ್ಲಿ ಟ್ರೇಡ್ ಯೂನಿಯನ್‌ಗಳನ್ನು ಕಟ್ಟಿಕೊಳ್ಳಲಿಲ್ಲ. ಆದರೆ ಹಲವು ಹೋರಾಟಗಳು ನಡೆದವು. ಈ ಸಮಯದಲ್ಲಿ ಕಾರ್ಮಿಕರನ್ನು ಸಂಘಟಿಸಿದವರು ಕಾರ್ಮಿಕರ ದುರ್ದಶೆ ಕಂಡು ಮರುಗಿದ ಸುಶಿಕ್ಷಿತ ಮಾನವತಾವಾದಿಗಳು, ಸಾಮಾಜಿಕ ಸುಧಾರಕರು ಹಾಗೂ ಸಮಾಜಸೇವಕರು. ಇವರಲ್ಲಿ ಪ್ರಮುಖರಾದವರು : ಬಂಗಾಳದಲ್ಲಿ ಶಶಿಪಾದ ಬ್ಯಾನರ್ಜಿ, ಮಹಾರಾಷ್ಟ್ರದಲ್ಲಿ ನಾರಾಯಣ ಲೋಖಂಡೆ, ಸೋರಬಜಿ ಬೆಂಗಾಲಿ ಮುಂತಾದವರು. ಬ್ಯಾನರ್ಜಿ ಬ್ರಾಹ್ಮೋ ಸಮಾಜಕ್ಕೆ ಸೇರಿದ್ದು 1874 ರಿಂದಲೇ 'ಭಾರತ್ ಶ್ರಮಜೀವಿ' ಎಂಬ ಮಾಸಿಕ ತರುತ್ತಿದ್ದರು. ಬ್ಯಾನರ್ಜಿಯವರು 'ವರ್ಕಿಂಗ್ ಮೆನ್ಸ್ ಕ್ಲಬ್' ಎಂಬ ಸಂಸ್ಥೆಯನ್ನೂ ಲೋಖಂಡೆಯವರು 'ಮುಂಬಯಿ ಮಿಲ್ ಕಾರ್ಮಿಕರ ಸಂಘ'ವನ್ನು ಕಟ್ಟಿದ್ದರು. ಆದರೆ ಈ ಸಂಘಗಳು ಸಮಾಜಸೇವೆ (ಕಾರ್ಮಿಕರಿಗೆ ಅಕ್ಷರಾಭ್ಯಾಸಕ್ಕೆ ರಾತ್ರಿ ಶಾಲೆಗಳು, ಸಾಂಸ್ಕೃತಿಕ ಚಟುವಟಿಕೆಗಳು, ಇತ್ಯಾದಿ)ಯಲ್ಲಿ ನಿರತವಾಗಿದ್ದವೇ ಹೊರತು ಆರ್ಥಿಕ ಹೋರಾಟಗಳನ್ನೇನೂ ನಡೆಸಲಿಲ್ಲ. ಮಿಲ್ ಕಾರ್ಮಿಕರ ಸಂಘ ಮಾತ್ರ ವಾರಕ್ಕೆ ರಜಾದಿನ, ಊಟದ ಬಿಡುವು ಕೊಡಲು ಕೆಲವು ಮನವಿ ಪತ್ರಗಳನ್ನು ಅರ್ಪಿಸಿತ್ತು.

ಆರ್ಥಿಕ ಕಾರಣಗಳಿಗೆ ಈ ಅವಧಿಯಲ್ಲಿ ಹೋರಾಟ ನಡೆಯಲಿಲ್ಲವೆಂದಲ್ಲ ಆದರೆ ಇವು ಸಾಮಾನ್ಯವಾಗಿ ಅಸಂಘಟಿತ ಸ್ವಯಂಸ್ಫೂರ್ತ ಕೆಲಸ ನಿಲುಗಡೆಗಳಾಗಿದ್ದವು. ಹೋರಾಟಗಳು ಮುಖ್ಯವಾಗಿ ಮಾಲೀಕರು ಕೆಲಸದಲ್ಲಿ ತಪ್ಪಿಗಾಗಿ ದಂಡ ಹೇರಿದಾಗ ಮತ್ತು ಕೂಲಿ ಕಡಿಮೆ ಮಾಡಲು ಪ್ರಯತ್ನಿಸಿದಾಗ ಅಂದರೆ ಶೋಷಣೆ ಇನ್ನೂ ತೀವ್ರ ಮಾಡಲು ಪ್ರಯತ್ನಿಸಿದಾಗ ನಡೆದವು. 1880 ಮತ್ತು 1890ರ ಮಧ್ಯೆ 25 ದೊಡ್ಡ ಮುಷ್ಕರಗಳು ನಡೆದವು. ಇದರಲ್ಲಿ ಅತಿ ದೊಡ್ಡದು ಮುಂಬಯಿಯಲ್ಲಿ 1892 ರಲ್ಲಿ ನಡೆದ ಮಿಲ್ ಕಾರ್ಮಿಕರ ಮುಷ್ಕರ. ಇದು ಮಾಲಿಕರು ಕೂಲಿ ಕಡಿಮೆ ಮಾಡುವ ಪ್ರಯತ್ನದ ವಿರುದ್ಧವಾಗಿತ್ತು. ಆದರೆ ಕೈಗಾರಿಕಾ ಕಾರ್ಮಿಕರ ಮೊದಲ ಮುಷ್ಕರ 1862 ರಷ್ಟು ಹಿಂದೆಯೇ ನಡೆದಿತ್ತು. ಹೌರಾ ರೈಲ್ವೇ ಸ್ಟೇಶನ್‌ನ 1200 ಕಾರ್ಮಿಕರು 8 ಗಂಟೆ ಕೆಲಸದ ಬೇಡಿಕೆ ಮೇಲೆ ಈ ಮುಷ್ಕರ ನಡೆಸಿದರು. ಈ ಮುಷ್ಕರ ರೈಲ್ವೇ ಆರಂಭವಾಗಿ ಕೇವಲ 8–9 ವರ್ಷಗಳಲ್ಲಿ ನಡೆಯಿತು. ಮಾತ್ರವಲ್ಲದೆ ಜಗತ್ತಿನಲ್ಲೇ 8 ಗಂಟೆ ಬೇಡಿಕೆ ಮೇಲೆ ನಡೆದ ಪ್ರಥಮ ಮುಷ್ಕರ ಅದೂ ಚಿಕಾಗೋ ಕೆಲಸಗಾರರ ಬ್ರಿಟೀಷ್ ಬಂಡವಳಿಗರೊಂದಿಗೆ ಅಸಮಾನ ಸ್ಪರ್ಧೆಗಿಳಿದ ಸ್ಥಳೀಯ ಬಂಡವಳಿಗರು ಇದರಲ್ಲಿ ಸ್ಪರ್ಧಿಸಲು ಕಾರ್ಮಿಕರನ್ನು ಮಧ್ಯಮ ಯುಗದ ಬರ್ಬರತೆ, ಕ್ರೌರ್ಯಗಳಿಗೆ ಗುರಿ ಮಾಡಿದರು. ಈ ಹಂತದಲ್ಲಿ ಕಾರ್ಮಿಕರು ಯಾವಾಗಲೂ ಭೌತಿಕವಾಗಿ ನಾಶಹೊಂದುವ ಅಂಚಿನಲ್ಲಿದ್ದು; ನಿಧಾನವಾಗಿ ಸಾಮ್ರಾಜ್ಯಶಾಹಿಗಳನ್ನು ಹೊಡೆದೋಡಿಸದೆ ಆರ್ಥಿಕ ಹೋರಾಟಗಳನ್ನೂ ನಡೆಸುವುದು ಸಹ ಕಷ್ಟ ಎಂಬ ಅರಿವು ಮೂಡಿ ಬಂದಿತು. ಇದರಿಂದ ಕಾರ್ಮಿಕರು ಸಾಮ್ರಾಜ್ಯಶಾಹಿ ವಿರೋಧಿ ರಾಜಕೀಯ ಹೋರಾಟಗಳಲ್ಲಿ ಹೆಚ್ಚು ಹೆಚ್ಚು ಆಸಕ್ತಿ ತೋರಿದ್ದಲ್ಲದೆ, ಅದರಲ್ಲಿ ಭಾಗವಹಿಸುವುದು, ಹೊಸ ಹೋರಾಟಗಳನ್ನು ಆರಂಭಿಸುವುದು, ಮುಂದಿನ ಹಂತದಲ್ಲಿ ಮುಖ್ಯ ಲಕ್ಷಣವಾಯಿತು.

ಭಾರತದ ಕಾರ್ಮಿಕ ವರ್ಗಕ್ಕೆ ಧೀರ ಹೋರಾಟದ ಉನ್ನತ ಪರಂಪರೆ ಇದೆ. 1862 ರಷ್ಟು ಹಿಂದೆಯೇ ನಮ್ಮ ದುಡಿಯುವ ಜನತೆ ಎಂಟು ಗಂಟೆ ಕೆಲಸದ ಅವಧಿಗಾಗಿ ಹೋರಾಟ ನಡೆಸಿದ್ದು (ಚಿಕ್ಯಾಗೋ ಘಟನೆಗಿಂತ 24 ವರ್ಷ ಮೊದಲು) ಸ್ಮರಣೀಯ. ಕೇವಲ ಆರ್ಥಿಕ ಬೇಡಿಕೆಗಳಿಗೋಸ್ಕರ ಮಾತ್ರವಲ್ಲ; ಬ್ರಿಟಿಶ್ ಸಾಮ್ರಾಜ್ಯಶಾಹಿಗಳ ಗೆದುರಾಗಿ ನಡೆದ ಮಹಾನ್ ಸಮರದಲ್ಲಿ ಕಾರ್ಮಿಕ ವರ್ಗದ ಪಾತ್ರ ಪ್ರಶಂಸನೀಯ.

ಇಂದು ದುಡಿಯುವ ಜನರ ಹೋರಾಟಗಳನ್ನು ಕರಾಳ ಶಾಸನಗಳಿಂದ ನಿರ್ದಯವಾಗಿ ಹತ್ತಿಕ್ಕುತ್ತಿರುವ ಈ ಸಂದರ್ಭದಲ್ಲಿ, ಸ್ವಾತಂತ್ರ್ಯ ಪೂರ್ವ ಕಾಲಘಟ್ಟದಲ್ಲಿ ಕಾರ್ಮಿಕ ವರ್ಗ ನಡೆಸಿದ ಧೀರ ಹೋರಾಟದ ನೆನಪು, ಇಂದು ಹೋರಾಟಕ್ಕೊಂದು ಹೊಸ ಆಯಾಮ ದೊರಕಿಸಲು ಸಹಕಾರಿಯಾದೀತು.

ಕಾರ್ಮಿಕ ಮುಖಂಡ ಕಾಂ| ಸುಕುಮೋಲ್ ಸೇನ್ ಬರೆದಿರುವ 'ದಿ ಹಿಸ್ಟರಿ ಆಫ್ ಇಂಡಿಯನ್ ವರ್ಕಿಂಗ್ ಕ್ಲಾಸ್' ಗ್ರಂಥದ ಸಂಕ್ಷಿಪ್ತ ರೂಪವಿದು. ●

ಚಾರಿತ್ರಿಕ ಮೇ ದಿನದ ಮುಷ್ಕರದ 24 ವರ್ಷಗಳ ಮೊದಲೇ ನಡೆದದ್ದರಿಂದ ಗಮನಾರ್ಹವಾದುದು.

19ನೇ ಶತಮಾನದ ಕೊನೆಯ ದಶಕದ ಮುಕ್ತಾಯ ಘಟ್ಟದಲ್ಲಿ ಮುಂಬೈ, ಕಾನ್ಪುರ ಮುಂತಾದ ಕಾರ್ಮಿಕರ ಕೇಂದ್ರಗಳಲ್ಲಿ ಪ್ಲೇಗ್ ಬಂದು ಹಲವು ಕಾರ್ಮಿಕರು ಸತ್ತರು. ಕೆಲವರು ಊರಿಗೆ ಮರಳಿದರು. ಇದರಿಂದ ಕಾರ್ಮಿಕರ ತೀವ್ರ ಅಭಾವವಾಗಿ, ಇವರ ಚೌಕಾಸಿ ಶಕ್ತಿ ಹೆಚ್ಚಿ ಕೂಲಿ ಹೆಚ್ಚಳಕ್ಕೆ ಹಲವು ಹೋರಾಟಗಳು ನಡೆದವು; ಸಫಲವೂ ಆದುವು.

ವಸಾಹತು ದೇಶದಲ್ಲಿ ಕಾರ್ಮಿಕ ವರ್ಗ ಎರಡು ರೀತಿಯ ಶೋಷಣೆ ಎದುರಿಸುತ್ತದೆ. ಸಾಮ್ರಾಜ್ಯಶಾಹಿಗಳಿಂದ ರಾಷ್ಟ್ರೀಯ ಶೋಷಣೆ, ಬಂಡವಳಿಗರಿಂದ ಆರ್ಥಿಕ–ಸಾಮಾಜಿಕ ಶೋಷಣೆ. ಸಾಮ್ರಾಜ್ಯಶಾಹಿ ಒತ್ತಾಸೆಯಿರುವ

ಎರಡನೆಯ ಹಂತ (1900-1914)

ಇಪ್ಪತ್ತನೆಯ ಶತಮಾನದ ಆರಂಭದಲ್ಲಿ ಭಾರತದಲ್ಲಿ ಪ್ರಮುಖಸಾಮಾಜಿಕ ರಾಜಕೀಯ ಬದಲಾವಣೆಗಳು ಪ್ರಾರಂಭವಾಗಿದ್ದವು. ರಾಷ್ಟ್ರೀಯ ಕಾಂಗ್ರೆಸ್ ಹುಟ್ಟಿ ಭಾರತೀಯರ ರಾಜಕೀಯ ಆಕಾಂಕ್ಷೆಗಳ ಸಂಕೇತವಾಗಿ ಸ್ಥಳೀಯ ಬಂಡವಳಿಗರ ವರ್ಗದ ನಾಯಕತ್ವದಲ್ಲಿ ಬೆಳೆಯತೊಡಗಿತ್ತು. 1905 ರಲ್ಲಿ ನಡೆದ ಸ್ವದೇಶಿ ಚಳುವಳಿ ಅದರ ತಕ್ಷಣದ ಕಾರಣವನ್ನು ಮೀರಿ ನಿಂತು, ರಾಷ್ಟ್ರೀಯ ಬೂರ್ಜ್ವಾ ಘೋಷಣೆಗಳಡಿಯಲ್ಲಿ ಪ್ರಥಮ ಸಂಘಟಿತ, ಪ್ರಜ್ಞಾಪೂರ್ವಕ ಜನ ಚಳುವಳಿಯಾಯಿತು. ಈ ಹೊತ್ತಿಗೆ ಕಾಂಗ್ರೆಸ್ ನಾಯಕತ್ವ ಮಂದಗಾಮಿಗಳಿಂದ, ತೀವ್ರಗಾಮಿ

(7ನೇ ಪುಟ ನೋಡಿ)

ಭಾರತದ ಕಾರ್ಮಿಕ ವರ್ಗದ ಸಂಕ್ಷಿಪ್ತ ಚರಿತ್ರೆ

(5ನೇ ಪುಟದಿಂದ)

ಗಳಾದ ತಿಲಕ್, ಲಜಪತ್‌ರಾಯ್, ಬಿಪಿನ್ ಚಂದ್ರಪಾಲ್ — ಕೈಗೆ ಬಂದಿತ್ತು. ಈ ಕಾಂಗ್ರೆಸ್ ನಾಯಕತ್ವ ಮತ್ತು ಇತರ ರಾಷ್ಟ್ರೀಯ ಚಳುವಳಿಯ ನಾಯಕರು ರಾಷ್ಟ್ರೀಯ ಚಳುವಳಿಯಲ್ಲಿ ಕಾರ್ಮಿಕರ ಮಹತ್ವ ಅರಿತು ಅವರ ತಕ್ಷಣದ ಆರ್ಥಿಕ, ಸಾಮಾಜಿಕ ಬೇಡಿಕೆಗಳಿಗೆ ಸಕ್ರಿಯ ಸಹಕಾರ ನೀಡಿದರು. ಕೆಲವರು ಸ್ವತಃ ಕಾರ್ಮಿಕರನ್ನು ಸಂಘಟಿಸಿದರು. 1914ರ ಅಂತ್ಯದ ಹೊತ್ತಿಗೆ ದೇಶದ ಕಾರ್ಮಿಕರ ಸಂಖ್ಯೆ 10 ಲಕ್ಷವಾಗಿತ್ತು.

ಕಾರ್ಮಿಕ ವರ್ಗ ಸಹ ರಾಷ್ಟ್ರೀಯ ಚಳುವಳಿಗಳಿಂದ ಪ್ರೇರಿತವಾಗಿ ತಮ್ಮ ತಕ್ಷಣದ ಬೇಡಿಕೆಗಳಿಗೆ, ಸಾಮ್ರಾಜ್ಯ ವಿರೋಧಿ ಹೋರಾಟಗಳಿಗೆ ಧುಮುಕಿತು.

ಭಾರತ ಸರ್ಕಾರ ಪ್ರೆಸ್‌ನಲ್ಲಿ 1905ರಲ್ಲಿ ಭಾನುವಾರ, ಇತರ ರಜಾ ದಿನಗಳ ಸಂಬಳ ನೀಡದಿರುವುದು, ಅನಾರೋಗ್ಯ ರಜೆ ನೀಡದಿರುವುದು, ದಂಡ ಹೇರಿಕೆ, ಕಡಿಮೆ ಓವರ್‌ಟೈಮ್ ಭತ್ಯ ಇದರ ವಿರುದ್ಧ ಮುಷ್ಕರ ನಡೆಯಿತು. ಇದು ಭಾಗಶಃ ಸಫಲವಾಗಿ ಬಂಗಾಳ ಪ್ರೆಸ್ ಕಾರ್ಮಿಕರ ಯೂನಿಯನ್ನಿನ ರಚನೆಗೆ ನಾಂದಿಯಾಯಿತು. 1906ರಲ್ಲಿ ಇನ್ನೊಂದು ಪ್ರೆಸ್‌ನಲ್ಲಿ ಮುಷ್ಕರ ನಡೆದು, ಎಲ್ಲಾ ಪ್ರೆಸ್ ನೌಕರರ ಸಕ್ರಿಯ ಸಹಕಾರ ಇದಕ್ಕೆ ದೊರೆಯಿತು ಮುಷ್ಕರದಲ್ಲಿ 'ವಂದೇ ಮಾತರಂ' ನಂತಹ ರಾಷ್ಟ್ರೀಯ ಘೋಷಣೆಗಳು ಕೇಳಿ ಬಂದವು. 1906ರ ಈಸ್ಟ್ ಇಂಡಿಯಾ ರೈಲ್ವೆಯ ಬಂಗಾಳ ವಿಭಾಗದಲ್ಲಿ ನಡೆದ ಮುಷ್ಕರ ರಾಷ್ಟ್ರೀಯ ಭಾವನೆಗಳಿಂದ, ಚಳುವಳಿಯಿಂದ ನೇರವಾಗಿ ಪ್ರೇರಿತವಾದ ಮುಷ್ಕರ. ವೇತನ ಏರಿಕೆ, ಕೆಲಸದ ಪರಿಸ್ಥಿತಿ ಸುಧಾರಣೆ, ಭಾರತೀಯರ ವಿರುದ್ಧ ಭೇದಭಾವದ ಅಂತ್ಯ—ಮುಖ್ಯ ಬೇಡಿಕೆಗಳಾಗಿದ್ದವು. ಈ ಮುಷ್ಕರ ಈಸ್ಟ್ ಇಂಡಿಯಾ ರೈಲ್ವೆ ಕಾರ್ಮಿಕರ ಯೂನಿಯನ್ ರಚನೆಗೆ ಸಹ ದಾರಿಮಾಡಿ ಕೊಟ್ಟಿತು. ಈ ಮುಷ್ಕರ ರಾಷ್ಟ್ರೀಯ ಚಳುವಳಿಯ ನಾಯಕರ ಮೇಲೆ ಉತ್ತಮ ಪರಿಣಾಮ ಬೀರಿತು. ಇವರ ಬೆಂಬಲಕ್ಕೆ ಸಿ. ಆರ್. ದಾಸ್, ಬಿಪಿನ್ ಚಂದ್ರಪಾಲ್ ಸಾರ್ವಜನಿಕ ಸಭೆ ನಡೆಸಿದರು. ಮುಂಬಯಿಯಲ್ಲಿ ವಿದ್ಯುತ್ ದೀಪಗಳು ಬಂದ ನಂತರ ಕೆಲಸದ ಅವಧಿ ಹೆಚ್ಚಿಸುವ ಗಿರಣಿ ಮಾಲಿಕರ ಪ್ರಯತ್ನದ ವಿರುದ್ಧ ಮುಷ್ಕರಗಳು ನಡೆದವು. 1906ರ ರೈಲ್ವೇ ಮುಷ್ಕರದಿಂದ ಸ್ಫೂರ್ತಿಗೊಂಡು, 1907ರಲ್ಲಿ ದೇಶದ ಎಲ್ಲಾ ರೈಲ್ವೆಗಳಲ್ಲಿ ಹಲವು ಹೋರಾಟಗಳು ನಡೆದವು. ಮುಂಬಯಿ, ಅಸನ್‌ಸೋಲ್‌ನಲ್ಲಿ, ಕಲ್ಕತ್ತದಲ್ಲಿ ರೈಲ್ವೆಗಳಲ್ಲಿ, ರೈಲ್ವೇ ವರ್ಕ್‌ಶಾಪ್‌ಗಳಲ್ಲಿ ಭಾಗಶಃ ಸಫಲ ಹೋರಾಟಗಳು ನಡೆದವು. ಕಲ್ಕತ್ತದಲ್ಲಿ ನಡೆದ ಹೋರಾಟದ ಪರಿಣಾಮವಾಗಿ 10 ದಿನಗಳ ಮಟ್ಟಿಗೆ ಕಲ್ಕತ್ತಾ ದೇಶದ ಉಳಿದ ಭಾಗಗಳಿಂದ ಸಂಪೂರ್ಣ ಕಡಿದುಹೋಗಿತ್ತು. ಈ ಹೋರಾಟಗಳಿಗೂ ರಾಷ್ಟ್ರೀಯ ಚಳುವಳಿಯ ಬೆಂಬಲ ದೊರೆಯಿತು. ರೈಲ್ವೆಯಲ್ಲಿನ ಈ ಮುಷ್ಕರಗಳು 1905-08ನ ರಾಷ್ಟ್ರೀಯ ಜಾಗೃತಿಯನ್ನು ದೇಶದ ತುಂಬೆಲ್ಲಾ ಹರಡುವ ವಾಹಿನಿಯಾಯಿತೆಂದರೆ ಅತಿಶಯೋಕ್ತಿಯಲ್ಲ.

ಈ ಅವಧಿಯ ಹೋರಾಟಗಳಿಗೆ ಕಳಶಪ್ರಾಯವಾದದ್ದು ಮುಂಬೈಯಲ್ಲಿ ತಿಲಕರ ಬಂಧನದ ವಿರುದ್ಧ ಕಾರ್ಮಿಕರು ನಡೆಸಿದ ಪ್ರಥಮ ಪೂರ್ಣ ರಾಜಕೀಯ ಮುಷ್ಕರ. 1908ರಲ್ಲಿ ತೀವ್ರಗೊಳ್ಳುತ್ತಿದ್ದ ಸ್ವದೇಶಿ ಚಳುವಳಿಯ ಹಿನ್ನೆಲೆಯಲ್ಲಿ ತಿಲಕರ ಬಂಧನವಾದಾಗ ಮುಂಬೈಯಲ್ಲಿ ಹರತಾಳ, ಮತಪ್ರದರ್ಶನದೊಂದಿಗೆ ಆರಂಭಿಸಿ, 1 ಲಕ್ಷ ಕಾರ್ಮಿಕರು ಜುಲೈ 23 (ತಿಲಕರಿಗೆ 6 ವರ್ಷ ಶಿಕ್ಷೆ ವಿಧಿಸಿದ ದಿನ) ರಿಂದ 28ರ ವರೆಗೆ ಸಾರ್ವತ್ರಿಕ ಮುಷ್ಕರ ನಡೆಸಿದರು. ಇದನ್ನು ದಮನ ಮಾಡಲು ಬಂದ ಬ್ರಿಟಿಷ್ ಪಡೆಗಳೊಂದಿಗೆ ಕಲ್ಲು, ಇಟ್ಟಿಗೆಗಳೊಂದಿಗೆ ಬೀದಿ ಸಮರಕ್ಕಿಳಿದರು. ಗೋಲಿಬಾರಿನಲ್ಲಿ ಹಲವರು ಸತ್ತರು. ನಗರದ ಸಾಮಾನ್ಯ ಜನರು, ಮಧ್ಯಮ ವರ್ಗದವರು, ಸಣ್ಣ ವರ್ತಕರು; ಕಾರ್ಮಿಕರ ನಾಯಕತ್ವದಲ್ಲಿ ಅವರಿಗೆ ಭುಜಕ್ಕೆ ಭುಜ ಕೊಟ್ಟು ಹೋರಾಡಿದರು. ಮಿಲ್ ಮಾಲಿಕರು ಈ ಇಡೀ ಕಾರ್ಯಾಚರಣೆಯನ್ನು ವಿರೋಧಿಸಿದರು ಎಂಬುದು ಗಮನಾರ್ಹ... ಇನ್ನೂ ರಾಜಕೀಯವಾಗಿ ಅಪ್ರಬುದ್ಧವಾದ ತನ್ನದೇ ರಾಜಕೀಯ ತತ್ವ, ತನ್ನದೇ ಪಕ್ಷವಿಲ್ಲದಾಗ್ಯೂ, ರಾಜಕೀಯ ಸಾರ್ವತ್ರಿಕ ಮುಷ್ಕರ ನಡೆಸಿ ಕಾರ್ಮಿಕ ವರ್ಗ ಸಾಮ್ರಾಜ್ಯಶಾಹಿ ವಿರೋಧಿ ಕಾರ್ಯಾಚರಣೆಗೆ ಹೊಸದಾರಿ ತೋರಿತು.

ಮೂರನೆಯ ಹಂತ

ಈ ಅವಧಿ ಆರಂಭವಾಗುವುದು ಮೊದಲನೆಯಮಹಾಯುದ್ಧದೊಂದಿಗೆ. ಭಾರತದ ಶೋಷಣೆ ಮುಖ್ಯವಾಗಿ ಎರಡು ವಿಧವಾಗಿ ಆಗುತ್ತಿತ್ತು: ಒಂದು ಬ್ರಿಟಿಷ್ ಖಾಸಗಿ ಬಂಡವಾಳದ ಮೂಲಕ, ಇನ್ನೊಂದು ನೇರವಾಗಿ ವಸಾಹತುಶಾಹಿ ಸರ್ಕಾರದ ಮೂಲಕ. ಎರಡನೆಯ ರೀತಿಯದು ಮಹಾಯುದ್ಧ ಆರಂಭವಾದ ನಂತರ ಅತ್ಯಂತ ಕರಾಳ ಸ್ವರೂಪ ಪಡೆಯಿತು. ದೇಶದ ಕಚ್ಚಾಸಾಮಗ್ರಿಗಳನ್ನು ಅತ್ಯಂತ ಕಡಿಮೆ ಬೆಲೆಯಲ್ಲಿ ಹೊರಸಾಗಿಸುವುದು, ರೈಲ್ವೆಹಳಿ, ಸೇತುವೆ, ಇಂಜಿನ್ನುಗಳು, ಪೋಸ್ಟ್, ಟೆಲಿಗ್ರಾಫ್, ಉಪಕರಣಗಳನ್ನು ದೇಶದಿಂದ ಹೊರಗೊಯ್ಯುವುದು ನಡೆಯಿತು. ಯುದ್ಧ ವೆಚ್ಚವನ್ನೆಲ್ಲಾ ಭಾರತದ ಸಾಮಾನ್ಯ ಜನರ ಮೇಲೆ 50 % ಕರ ಏರಿಕೆ ಹಣದುಬ್ಬರದ ರೂಪದಲ್ಲಿ ಹೊರಿಸಲಾಯಿತು. ಹಳ್ಳಿಯ ಜನ ಕಾರ್ಖಾನೆಯ ಸಿದ್ಧ ವಸ್ತುಗಳಿಗೆ ಹೆಚ್ಚು ನೀಡಬೇಕಾದರೆ ಪಟ್ಟಣದ ಕಾರ್ಮಿಕರು, ಸಾಮಾನ್ಯ ಜನ ಆಹಾರ ಧಾನ್ಯಗಳಿಗೆ ಇಮ್ಮಡಿ ಹೆಚ್ಚು ಬೆಲೆ ಕೊಡಬೇಕಾಯಿತು. 1918ರಲ್ಲಿ ಸಾಂಕ್ರಾಮಿಕ ಇನ್‌ಫ್ಲೂಯೆಂಜಾ 7 ಲಕ್ಷ ಜನರನ್ನು ಬಲಿ ತೆಗೆದುಕೊಂಡಿತು.

ಇದಕ್ಕೆ ವಿರುದ್ಧವಾಗಿ ಬ್ರಿಟಿಷ್, ಭಾರತೀಯ ಬಂಡವಳಿಗರಿಗೆ ಮಹಾಯುದ್ಧ ದೊಡ್ಡ ವರವಾಯಿತು. ಯುದ್ಧಕ್ಕೆ ಅಗತ್ಯವಾದ ಹತ್ತಿಬಟ್ಟೆ, ಸಣಬಿನ ಚೀಲಗಳು, ಉಣ್ಣೆಬಟ್ಟೆ ಅತ್ಯಂತ ಹೆಚ್ಚು ಬೇಡಿಕೆಯಲ್ಲಿದ್ದುದರಿಂದ ಇವರು ಅಪಾರ ಲಾಭ ದೋಚಿಕೊಂಡರು. ಈ ಲಾಭವನ್ನು ಇತರ ಉದ್ಯಮಗಳಲ್ಲಿ ತೊಡಗಿಸಿದರು. ಈ ಅವಧಿಯಲ್ಲಿ ಕೈಗಾರಿಕೆ ಬಹಳಷ್ಟು ಬೆಳೆಯಿತು. ಬಂಡವಾಳ ಸುಮಾರು ಇಮ್ಮಡಿಯಾಯಿತು. ಇದರ ಫಲವಾಗಿ ಕಾರ್ಮಿಕರ ಸಂಖ್ಯೆ 13 ಲಕ್ಷಕ್ಕೇರಿತು. ಮಹಾಯುದ್ಧ ಆರಂಭವಾದ ಕೂಡಲೇ ಕಾಂಗ್ರೆಸ್ಸಿನ ತೀವ್ರಗಾಮಿಗಳನ್ನು, ರಾಜಿಗೊಪ್ಪದ ರಾಷ್ಟ್ರೀಯ ನಾಯಕರನ್ನು ಭಾರತ ರಕ್ಷಣಾ ಕಾನೂನಿನ ಅನ್ವಯ ಬಂಧಿಸಲಾಯ್ತು. ಇನ್ನುಳಿದ ಕಾಂಗ್ರೆಸಿನ ಮಂದಗಾಮೀ ನಾಯಕತ್ವ ಹಾಗೂ ಗಾಂಧೀಜಿ ಯುದ್ಧ ಸಿದ್ಧತೆಗೆ ಪೂರ್ಣ ಸಹಕಾರ ನೀಡಿದರು. ಯುದ್ಧ ಮುಗಿದಾಗ ಸ್ವಯಮಾಧಿಕಾರ ನೀಡಬಹುದೆಂಬ ಇವರ ಆಸೆ ಮಾತ್ರ ಮಣ್ಣುಗೂಡಿತು. ರೌಲೆಟ್ ಕಾಯಿದೆ, ಜಲಿಯನ್‌ವಾಲಾಬಾಗ್ ಹತ್ಯಾಕಾಂಡ ದೇಶವನ್ನು ಬೆಚ್ಚಿಗೆಬ್ಬಿಸಿದವು. ಕಾಂಗ್ರೆಸ್ ಹರತಾಳ, ಸತ್ಯಾಗ್ರಹಕ್ಕೆ ಕರೆ ನೀಡಿತು. ಆದರೆ ಇದು ಅವರ ಅಪೇಕ್ಷೆಯಂತೆ 'ಶಾಂತಿಯುತ'ವಾಗಿರಲಿಲ್ಲ. ಆಗ ಗಾಂಧೀಜಿ ಇದನ್ನು ಹಿಂತೆಗೆದುಕೊಂಡರು. ಆ ವೇಳೆ ಖಿಲಾಫತ್ ಚಳುವಳಿಆರಂಭವಾಯಿತು. ಈ ಅವಧಿಯಲ್ಲಿ ನಡೆದ ರಶ್ಯನ್‌ಕ್ರಾಂತಿ ರಾಷ್ಟ್ರೀಯ ಚಳುವಳಿಯ ಬೂರ್ಜ್ವಾ ನಾಯಕತ್ವದಲ್ಲಿದ್ದುದರಿಂದ, ಕಾರ್ಮಿಕರ ಚಳುವಳಿ ಇನ್ನೂ ಸುಸಂಘಟಿತವಾಗಿಲ್ಲವಾದ್ದರಿಂದ ಅದು ಮಾಡಬೇಕಾದಷ್ಟು ಪರಿಣಾಮ ತಕ್ಷಣ ಮಾಡಲಿಲ್ಲ.

ಯುದ್ಧಕಾಲದ ಆರ್ಥಿಕ ಬಿಕ್ಕಟ್ಟು, ಸಂಕಷ್ಟ ಪರಿಸ್ಥಿತಿಯನ್ನು ವಿರೋಧಿಸಿ ಕಾರ್ಮಿಕರು ಪ್ರಬಲ ಹೋರಾಟಗಳನ್ನು ನಡೆಸಿದರು. ಅದರಲ್ಲೂ ಯುದ್ಧ ಮುಗಿದ ನಂತರದ ಆರ್ಥಿಕ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಸಂಘಟಿತ ಹೋರಾಟಗಳು ನಡೆದವು. 1918ರ ಮೊದಲ 6 ತಿಂಗಳಲ್ಲೆ 52 ಮುಷ್ಕರಗಳು ಮುಂಬಯಿಯಲ್ಲೇ ನಡೆದವು. 1919ರ ಅಕ್ಟೋಬರ್ ತಿಂಗಳಲ್ಲಿ ಮಾತ್ರ ಭಾರತದಾದ್ಯಂತ 12 ಲಕ್ಷ ಕಾರ್ಮಿಕರನ್ನೊಳಗೊಂಡ 38 ದೊಡ್ಡ ಮುಷ್ಕರಗಳು, 2 ಲಾಕ್‌ಔಟ್‌ಗಳು ನಡೆದವು. 1920ರ ಉತ್ತರಾರ್ಧದಲ್ಲಿ ಬಂಗಾಳ ಒಂದರಲ್ಲೇ 110 ಮುಷ್ಕರಗಳು ನಡೆದವು. ಇವೆಲ್ಲಾ ಮುಷ್ಕರಗಳಲ್ಲಿ ಗಮನಾರ್ಹವಾದ್ದು 1919 ಜನವರಿಯಿಂದ ಒಂದು ತಿಂಗಳಕಾಲ ನಡೆದ ಒಂದೂವರೆ ಲಕ್ಷ ಗಿರಣಿ ಕಾರ್ಮಿಕರ ಸಾರ್ವತ್ರಿಕ ಮುಷ್ಕರ.

ಯುದ್ಧಾನಂತರದ ಮುಷ್ಕರಗಳ ಅಲೆ ವಿಪರೀತ ಬೆಲೆ ಏರಿಕೆಗೆ ಪರಿಹಾರವಾಗಿ ವೇತನ ಏರಿಕೆ, ಯುದ್ಧಕಾಲದಲ್ಲಿ ಹೊರಿಸಿದ್ದ ಕೆಲಸದ ಪರಿಸ್ಥಿತಿಯಲ್ಲಿನ ಪ್ರತಿಗಾಮೀ ಬದಲಾವಣೆಗಳು ಇವುಗಳ ವಿರುದ್ಧ ಮುಖ್ಯವಾಗಿತ್ತು. ಇದಲ್ಲದೆ ಯುದ್ಧ ಸಮಯದಲ್ಲಿ ಬ್ರಿಟಿಷ್, ಭಾರತೀಯ ಬಂಡವಾಳಿಗರು ಗಳಿಸಿದ ಅಪಾರ ಲಾಭ, ಕಾರ್ಮಿಕರಿಗಾಗುತ್ತಿದ್ದ ಕಷ್ಟನಷ್ಟಗಳ ಅಂತರ ಕಣ್ಣಿಗೆ ಹೊಡೆಯುವಂತೆ ಕಾಣಿಸುತ್ತಿದ್ದುದು ಇನ್ನೊಂದು ಮುಖ್ಯ ಕಾರಣವಾಗಿತ್ತು. ಈ ಅವಧಿಯಲ್ಲಿ ಮುಷ್ಕರಗಳ ಫಲವಾಗಿ ಕಾರ್ಮಿಕರು ಗೆದ್ದ ಪರಿಹಾರಗಳು ಸಹ ಗಮನಾರ್ಹವಾದದ್ದು. ಕಳೆದ 30 ವರ್ಷಗಳಲ್ಲಿ ದೊರಕಿದಷ್ಟು ವೇತನ ಏರಿಕೆ, ಒಂದೇ ವರ್ಷದಲ್ಲಿ ದೊರಕಿತ್ತು. ಇದಲ್ಲದೆ ಹೆಚ್ಚು ಕಡಿಮೆ ಎಲ್ಲಾ ಕಡೆ ಜಾರಿಗೆ ಬಂದ ಹತ್ತು ಗಂಟೆಗಳ ಕೆಲಸದ ಅವಧಿ ಸಹ ಇದರ ನೇರ ಫಲ. ಆಮೇಲೆ 1922ರಲ್ಲಿ ಕಾನೂನಿನ ಪ್ರಕಾರ ಜಾರಿಗೆ ಬಂದ 50 ಗಂಟೆ-ವಾರ ಕೇವಲ ಉಪಚಾರವಾಗಿತ್ತು. ಇದನ್ನು ಕಾರ್ಮಿಕರು ಆಗಲೇ ತಮ್ಮ ಸಂಘಟಿತ ಬಲದಿಂದ ಜಾರಿಗೆ ತಂದಿದ್ದರು.

ಈ ಅವಧಿಯಲ್ಲಿ ಟ್ರೇಡ್‌ಯೂನಿಯನ್‌ಗಳು ನಿಯಮಿತ ಸದಸ್ಯತ್ವ, ಚಂದಾ ವಸೂಲಿ, ಪ್ರಜಾಸತ್ತಾತ್ಮಕ ಕಾರ್ಯಾಚರಣೆಗಳಿಂದ ಸುಸಂಘಟಿತ ರೂಪ ಪಡೆದವು. ಈ ಅವಧಿ ಸುಸಂಘಟಿತ ಟ್ರೇಡ್‌ಯೂನಿಯನ್‌ಗಳ ರಚನೆ ಮತ್ತು ಸ್ಥಿರೀಕರಣದ್ದು. ಈವರೆಗೆ ಚೆಲ್ಲಾಪಿಲ್ಲಿಯಾಗಿದ್ದ ಕಾರ್ಮಿಕ ಚಳುವಳಿಗೆ ಏಕಸೂತ್ರತೆ, ಸುಸಂಬದ್ಧತೆ ಬಂತು. ಈ ಅವಧಿಯಲ್ಲೂ ಯೂನಿಯನ್‌ಗಳ ಸುಸಂಘಟಕರು ಮಧ್ಯಮ ವರ್ಗದ ಬುದ್ಧಿಜೀವಿಗಳು, ಸಾಮಾಜಿಕ ಕಾರ್ಯಕರ್ತರುಗಳೇ ಆಗಿದ್ದರು. ಕಾರ್ಮಿಕರ ವರ್ಗಕ್ಕೆ ರಾಜಕೀಯ ಪರಿಜ್ಞಾನ ಬರುವುದು ಹೊರಗಿಂದ. ಮೇಲೆ ಹೇಳಿದ ನಾಯಕರು ಟ್ರೇಡ್‌ಯೂನಿಯನ್ ಚಳುವಳಿಯನ್ನು ಕೇವಲ ಮಾಲಿಕ – ಕಾರ್ಮಿಕ ಸಂಬಂಧಕ್ಕೆ ಸೀಮಿತಗೊಳಿಸುವ ಆರ್ಥಿಕವಾದ ಬೆಳೆಯುವಂತೆ ನಡೆಸಿದರು. ಇದು ಅವರದೇ ರಾಜಕೀಯ ದೃಷ್ಟಿಕೋನದ ಪ್ರಭಾವ.

1918ರಲ್ಲಿ ಗಾಂಧೀಜಿ ಸ್ವತಃ ಸಂಘಟಿಸಿದ ಮಜೂರ್ ಮಹಾಜನ್ ಎಂಬ ಕಾರ್ಮಿಕ ಸಂಘಟನೆ ಇನ್ನೊಂದು ರೀತಿಯಲ್ಲಿ ಗಮನಾರ್ಹವಾದುದು. 1918ರಲ್ಲಿ ಅಹಮದಾಬಾದ್ ಗಿರಣಿಗಳಲ್ಲಿ ನಡೆದ ಮುಷ್ಕರ ಗಾಂಧೀಜಿಯ ಮಧ್ಯಪ್ರವೇಶದಿಂದ 'ಪರಿಹರಿಸಿದ' ನಿರ್ದಿಷ್ಟ ರೀತಿ ಇದರ ಸಾಮಾನ್ಯ ನೀತಿಯಾಯಿತು. ಗಾಂಧೀಜೀಯ ಮಾಲಿಕರ 'ಟ್ರಸ್ಟಿಶಿಪ್' ನೀತಿಯನ್ನು ಅಪ್ಪಿದ ಈ ಕಾರ್ಮಿಕ ಸಂಘಟನಾ ಮಾದರಿಯ ಮುಖ್ಯ ಲಕ್ಷಣಗಳೆಂದರೆ ಕಡ್ಡಾಯ ಪಂಚಾಯಿತಿ ಮೂಲಕ ತೀರ್ಮಾನ, ಯೂನಿಯನ್ ಚಂದಾ ಸಂಬಳದಲ್ಲೇ ಕಡ್ಡಾಯ ಕಡಿತ, ಮಾಲಿಕರೂ ಯೂನಿಯನ್ ನಾಯಕರಾಗುವ ಸಾಧ್ಯತೆ. ಗಾಂಧೀಜಿಯ ಈ ಮಾದರಿ ಕಾರ್ಮಿಕ ಸಂಘಟನೆ ಕಂಪನಿ-ಯೂನಿಯನ್‌ಗಿಂತ ಬಹಳ ಭಿನ್ನವಿರಲಿಲ್ಲ. ರಾಷ್ಟ್ರೀಯ ಚಳುವಳಿಯ ಮಹಾನಾಯಕರ ಈ ಮಾದರಿ ಕಾರ್ಮಿಕ ಚಳುವಳಿಯ ಮೇಲೆ ಪರಿಣಾಮ ಬೀರದಿರಲಿಲ್ಲ.

ಕಾರ್ಮಿಕ ಚಳುವಳಿಯ ತೀವ್ರತೆಯಿಂದ ಗಾಬರಿಗೊಂಡ ಸರ್ಕಾರ ಸಹ ಕಾರ್ಮಿಕರ ಸಲಹಾ ಮಂಡಳಿಗಳನ್ನು ಸ್ಥಾಪಿಸಿತು. ಈ ಮಂಡಳಿ ಕಾರ್ಯವಿಧಾನಕ್ಕೂ ಗಾಂಧೀಜಿಯ 'ಮಾದರಿ' ಯೂನಿಯನ್‌ಗಳಿಗೂ ಬಹಳ ಸಾಮ್ಯವಿತ್ತು. ಈ ಮಂಡಳಿಗಳನ್ನು ಸಂಘಟಿತ ಯೂನಿಯನ್‌ಗಳು ವಿರೋಧಿಸಿದುವು.

ಎ.ಐ.ಟಿ.ಯು.ಸಿ.ಯ ರಚನೆ

ಪ್ರಥಮ ಯುದ್ಧ ನಂತರದ ಅವಧಿಯಲ್ಲಿ ವರ್ಗ ಹೋರಾಟಗಳನ್ನು ಸುಸಂಘಟಿತವಾಗಿ ನಡೆಸಿದ ಕಾರ್ಮಿಕವರ್ಗ ಸಾಮ್ರಾಜ್ಯಶಾಹಿಗಳ ಹಾಗೂ ಬಂಡವಾಳದ ಆಳ್ವಿಕೆಯ ವಿರುದ್ಧ ಹೋರಾಡಲು ತನ್ನದೇ ಆದ ರಾಷ್ಟ್ರವ್ಯಾಪಿ ವರ್ಗ ಸಂಘಟನಾ ಕೇಂದ್ರಕ್ಕಾಗಿ ಹಾತೊರೆಯುತ್ತಿತ್ತು. ಕೆಲವು ರಾಷ್ಟ್ರೀಯ ನಾಯಕರ (ತಿಲಕ್ ಮುಂತಾದ) ಆಸಕ್ತಿಯಿಂದ, ಕೆಲವು ಕಾರ್ಮಿಕ ನಾಯಕರ ಸಂಘಟನಾ ಕಾರ್ಯಗಳಿಂದ ಇಂತಹ ಕೇಂದ್ರ ಸಂಘಟನೆಯು ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್ ಪ್ರಥಮ ಅಧಿವೇಶನವನ್ನು 1920ರ ಅಕ್ಟೋಬರ್‌ನಲ್ಲಿ ಮುಂಬಯಿಯಲ್ಲಿ ಕರೆಯಲಾಯಿತು. ಲಾಲಾ ಲಜಪತ್‌ರಾಯ್ ಅಧಿವೇಶನದ ಅಧ್ಯಕ್ಷತೆ ವಹಿಸಿದರು. ರಾಷ್ಟ್ರೀಯ ಚಳುವಳಿಯ ನಾಯಕರು, ದಿವಾನ್ ಚಮನ್‌ಲಾಲ್, ಬಿ. ಪಿ. ವಾಡಿಯಾರಂತಹ ಕಾರ್ಮಿಕ ಸಂಘಟಕರು, ಕೆಲವು ಶ್ರೀಮಂತ ಗಣ್ಯ ವ್ಯಕ್ತಿಗಳು, ವಕೀಲರು, ಮಾಲೀಕರು ಸಹ ಆಗಮಿಸಿದ್ದರು. 5 ಲಕ್ಷ ಕಾರ್ಮಿಕರನ್ನು ಪ್ರತಿನಿಧಿಸಿದ 801 ಪ್ರತಿನಿಧಿಗಳು ಆಗಮಿಸಿದ್ದರು. ಅಧಿವೇಶನಕ್ಕೆ ಶುಭಕೋರಿ ಹಲವು ದೇಶಗಳಕಾರ್ಮಿಕ ಸಂಘಟನೆಗಳ ಪ್ರತಿನಿಧಿಗಳು ಬಂದಿದ್ದರು. ಗಾಂಧೀಜಿ ಮಾತ್ರ ಅಧಿವೇಶಕ್ಕೂ ಬರಲಿಲ್ಲ; ಯಾವ ಶುಭ ಸಂದೇಶವನ್ನೂ ಕಳಿಸಲಿಲ್ಲವೆಂಬುದು ಗಮನಾರ್ಹ. ಡಾಂಗೆ, ನಿಂಬಾಳ್ಕರ ಮುಂತಾದ ಪ್ರಗತಿಪರ ವಿದ್ಯಾರ್ಥಿಗಳು ಅಧಿವೇಶನದ ಸಂಘಟನೆಯಲ್ಲಿ ಪಾತ್ರ ವಹಿಸಿದ್ದರು.

ಅಧಿವೇಶನ ಕಾರ್ಮಿಕರಿಗೆ ಸಂಬಂಧಪಟ್ಟ ಸಮಸ್ಯೆಗಳ ಬಗ್ಗೆ ಹಲವು ಗೊತ್ತುವಳಿಗಳನ್ನು ಅಂಗೀಕರಿಸಿತು. ಭಾರತದ ಕಾರ್ಮಿಕರ ಘೋಷಣೆಯೊಂದನ್ನು ತಯಾರಿಸಿತು. ಲಜಪತ್‌ರಾಯ್

(11ನೇ ಪುಟ ನೋಡಿ)

ಕಥೆ

ಏಕ ಪ್ರವಾಹ

—ನಿರಂಜನ

ಮೂರು ಕಳೆದು ನಾಲ್ಕನೆಯ ವರ್ಷ...ಪುಟ್ಟಣ್ಣಯ್ಯ ಲೆಕ್ಕ ಹಾಕುತ್ತಿದ್ದಾನೆ.

ಸಂಪಾದಿಸಿದ್ದು ಬಿಡಿ ಕಾಸೂ ಇಲ್ಲ.

ಅಳಿದ ತಾಯಿ ಬಿಟ್ಟುಹೋಗಿದ್ದ ಮೂರು ಹರುಕು ಚಿನ್ನದ ಒಡವೆಗಳನ್ನು ಚಿನಿವಾರಕಟ್ಟೆಗೆ ಒಯ್ದಾಗ, ಅವನಿಗೆ ಸಹಿಸಲಾಗದಷ್ಟು ದುಃಖವಾಗಿತ್ತು; ಎರಡು ಕಣ್ಣುಗಳಿಂದಲೂ ಹರಿದಿತ್ತು ನೀರಧಾರೆ. ದೂರದ ಹಳ್ಳಿಯಿಂದ ತಂದೆಯೂ ಪತ್ರ ಬರೆದಿದ್ದರು : 'ನನ್ನಂಥ ಬಡಕೃಷಿಕರ ಕುಟುಂಬಗಳು ಮಣ್ಣುಗೂಡುತ್ತಿವೆ. ರಿಕ್ವಿಸಿಶನ್ ಅಂತ ಒಂದು ಹಿಡಿ ಅಕ್ಕಿಯನ್ನಾಗಲೀ ಜೋಳವನ್ನಾಗಲೀ ಇಲ್ಲಿ ಬಿಡುವವರಿಲ್ಲ ... ಪಟ್ಟಣದಲ್ಲಿ ದುಡಿಯುವ ನೀನು, ಹಿರಿಯ ಮಗ, ಸಹಾಯ ಮಾಡಬಾರದೇ ?'

ಸಹಾಯ ! ಹರಿದ ಪ್ಯಾಂಟು, ಮಾಸಿದ ಶರಟು; ಕಳೆದ ನಾಲ್ಕು ತಿಂಗಳಿಂದ ಪಾಲಿಶ್ ಕಾಣದ ಪಾದರಕ್ಷೆ; ಎಣ್ಣೆ ಮುಗಿದಿದ್ದ ಕೂದಲೆಣ್ಣೆಯ ಬಾಟ್ಲಿ.

"ಈ ಎಣ್ಣೆ ಕೂದಲೆಣ್ಣೆಯೆ ಅಲ್ಲ. ಜೀವದೀವಿಗೆ ಎಣ್ಣೆ ಇದು. ಕುಂದುತಿದೆ; ಜ್ಯೋತಿ ನಂದುತಿದೆಯಯ್ಯ !'' ಎಂದು ಪುಟ್ಟಣ್ಣಯ್ಯ ಮರುಕದ ವಚನ ಹಾಡಿದ.

ಕೈಗೆ ಸಿಕ್ಕ ಪಯಜಾಮ ತೊಟ್ಟು, ಶರಟು ಸಿಕ್ಕಿಸಿಕೊಂಡು, ನೆಟ್ಟಗೆ ನಿಂತಿದ್ದ ತಲೆಗೂದಲನ್ನು ಬಾಚಲೆತ್ನಿಸಿ, ಅವನು ಆಫೀಸಿಗೆ ಹೊರಟ.

ಕಾನ್ವೆಂಟಿಗೆ ಹೊರಟಿದ್ದ ಹುಡುಗಿಯೊಬ್ಬಳು ತುಟಿಯಲುಗಿಸಿ-ಅಲುಗಿಸದವರಂತೆ, ನಕ್ಕು-ನಗದವರಂತೆ, ಪುಟ್ಟಣ್ಣಯ್ಯನನ್ನು ನೋಡಿದಳು. ಹೃದಯದಲ್ಲಿದ್ದ ಬೆಂಕಿಯನ್ನೆಲ್ಲ ಹೊರಹಾಕಿ ಆ ಬೀದಿಯ ಕುಸುಮನನ್ನು ಅಲ್ಲಿಯೇ ದಹಿಸಬೇಕೆಂದು ತೋರಿತು ಇವನಿಗೆ.

ಹದಿನೈದು ಮಿನಿಟು ತಡವಾಗಿತ್ತು. 'ಮ್ಯಾನೇಜರ್ ಮಿಸ್ಟರ್ ಶರ್ಮ'ರು ಕನ್ನಡಕದೆಡೆಯಿಂದ ಪುಟ್ಟನನ್ನು ನೋಡಿದರು. ಒಳಗೆ ದೊಡ್ಡ ಮೆಶಿನು ಸಾಪ್ತಾಹಿಕದ ಮೂರನೆಯ ಫಾರ್ಮನ್ನು ಹೊಡೆಯುತ್ತಿತ್ತು...ಟಪ್...ಟಪ್... ದೈನಿಕಕ್ಕೆ ವಾರ್ತೆ ಭಾಷಾಂತರಿಸಿ ಕೊಡಬೇಕು. 'ಹಿಂದೂ', 'ಎಕ್ಸ್‌ಪ್ರೆಸ್' ಗಳಲ್ಲಿರಬಹುದಾದ ವಿಶೇಷ ವಾರ್ತೆಗಳನ್ನು ಹುಡುಕಿ ಕದ್ದು ಕನ್ನಡಿಸಬೇಕು. ಪುಟ್ಟಣ್ಣಯ್ಯ ಧಪ್ಪೆಂದು ಕುರ್ಚಿಯನ್ನೆಳೆದು ಕುಳಿತು, ಟೇಬಲ್ ಬೆಲ್ಲನ್ನು ಒಂದೇ ಸಮನೆ ಬಾರಿಸಿದ.

ಕಂಪಾಸಿಟರ್ ಹುಡುಗ ಓಡಿ ಬಂದ.

'ಸರ್ ಮ್ಯಾಟರ್.'

'ಸರ್ ಮ್ಯಾಟರ್ ಕೊಡ್ತೀನಿ. ನಿನ್ನೇದು ಎಷ್ಟು ಉಳಿದಿದೆ ಮೊದಲು ಹೇಳು.'

ರಾಮಪ್ಪನನ್ನು ಕೇಳಬೇಕೆಂದು ಹುಡುಗ ಒಳ ಹೋದ. ಪುಟ್ಟಣ್ಣಯ್ಯನೊಬ್ಬನೇ ಕೋಣೆಯಲ್ಲಿ ಸರ್ವಾಧಿಕಾರಿ. ಪ್ರಧಾನ ಉಪಸಂಪಾದಕ ಮಹಾಶಯರು ಇನ್ನೂ ಬಂದಿರಲಿಲ್ಲ. ದಿನದ ದುಡಿತವನ್ನು ಆರಂಭಿಸುವ ಮೊದಲು ಒಂದು ಸಿಗರೇಟಾದರೂ ?

ಯಾರಪ್ಪ ಕೊಡುತಾನೆ ಸಿಗರೇಟಿಗೆ ಕಾಸು ?

ಮೇಜಿನ ಕವಾಟವನ್ನು ತೆಗೆದು ಇಣಿಕಿ ನೋಡಿದ...ಸಿಕ್ಕಿತೊಂದು ಹಳೆಯ ಸಿಗರೇಟು...ಪೊಟ್ಟಣದಲ್ಲಿದ್ದ ಕೊನೆಯ ಕಡ್ಡಿಯನ್ನು ಉಪಯೋಗಿಸಿ ಬೆಂಕಿ ಉರಿಸಿದುದಾಯಿತು. ಪುಟ್ಟನೆದುರು ನೆನಪಿನ ಮಿಂಚು. ಎಡ ಕಿಸೆಯಲ್ಲಿದ್ದ ಪರ್ಸಿನಲ್ಲಿ ಕೊನೆಯ ಒಂದು ರೂಪಾಯಿ ಇತ್ತು. ಹಳೆಯ ನೋಟು. ತಾರೀಕು ಏಳು. ಅಷ್ಟರಲ್ಲೇ ಬರಿಗೈ. ಆ ರೂಪಾಯಿ ? ಅದು ಸಾಲವಾಗಿ ಪಡೆದಿದ್ದ ಅರವತ್ತಮೂರನೆಯ ರೂಪಾಯಿ. ಅರವತ್ತಮೂರು !

ಹುಡುಗ ಹೇಳಿದ :

'ಒಂದೂಕಾಲು ಕಾಲಂ ಸಾರ್ ಸ್ಟ್ಯಾಂಡಿಂಗ್ ಗ್ಯಾಲಿ. ಆರೂವರೆ ಅಡ್ವರ್ಟೈಸ್‌ಮೆಂಟ್.'

ಪುಟ್ಟ ಹುಡುಗನ ಮುಖಕ್ಕೇ ಹೊಗೆಯನ್ನು ಫೂ ಮಾಡಿದ.

"ಇರಯ್ಯ, ಸ್ವಲ್ಪ."

ಮ್ಯಾಟರ್, ಮ್ಯಾಟರ್, ಮ್ಯಾಟರ್ ...ಆ ರಂಗದಲ್ಲಿ ಹಿನ್ನಡೆ, ಈ ರಂಗದಲ್ಲಿ ಮುನ್ನಡೆ... ಪ್ರಸ್ತಾವನೆ ... ಧನಿಕರ ಪತ್ರಿಕೆಗಳು ಮುದ್ರಿಸಿದ್ದನ್ನು ಪುನರ್ಮುದ್ರಿಸುವುದು.

...ಮ್ಯಾನೇಜರರೊಮ್ಮೆ ಬಂದು ಹೋದರು.

...ಪ್ರಧಾನ ಉಪಸಂಪಾದಕರ ಆಗಮನವಾಯಿತು.

ಆಫೀಸುಬಾಯ್ ಬಂದ. ಬಿಲ್ಲು ! ಒಂದು ತಿಂಗಳ ಹಿಂದೆ ಮಾಡಿಸಿದ್ದ ಸ್ವಂತದ ಇನ್ನೂರು ಲೆಟರ್‌ಹೆಡ್‌ಗಳ ಬಾಬತ್ತು. ಪತ್ರಿಕೋದ್ಯೋಗಿ ಎಂಬ ಗೌರವಕ್ಕಾಗಿ ಮಾಡಿಸಿದ್ದು. ಅದೂ ತಾನು ದುಡಿಯುತ್ತಿರುವ ಪ್ರೆಸ್ಸಿನಲ್ಲೇ ! ಬಿಲ್ಲಿನ ಮೌಲ್ಯ ರೂ. ೩-೮-೦ ಮೂರು ಎಂಟು. 'ಮುಂದಿನ ತಿಂಗಳ ಸಂಬಳದಿಂದ ವಜಾ ಮಾಡಿ' ಎಂದು ಚೀಟಿ ಬರೆದು ತಿಳಿಸಿದ ಪುಟ್ಟ...

ಪೆನ್ನಿನಲ್ಲಿ ಮಸಿ ತೀರಿತು. ಬಾಟಲಿಯಲ್ಲಿ ಪೆನ್ನನ್ನು ಅದ್ದಿ ಬರೆಯತೊಡಗಿದ.

ಅಂಚೆಯವನು ಬಂದ. ಆದರೆ ಅವನು ನೇರವಾಗಿ ಬರಲಾರ. ಮೊದಲು ಮ್ಯಾನೇಜರರಲ್ಲಿಗೆ. ಕಾರ್ಡುಗಳಿದ್ದರೆ ಓದಿ ನೋಡಿ, ಕವರಾದರೆ ಎಲ್ಲಿಂದ ಬಂತೆಂದು ಪರೀಕ್ಷಿಸಿದ ಬಳಿಕ ಸಂಪಾದಕರ ಕೊಠಡಿಗೆ.

"ಎಂ. ಒ. ಉಂಟೆ ?"

ಅಂಚೆಯವನೆಂದ :

"ಇಲ್ಲ."

ಒಂದು ಮಾಸಪತ್ರಿಕೆಯಿಂದ ಚಿಕ್ಕದೊಂದು ಕಥೆಗೆ ಪ್ರತಿಫಲವಾಗಿ ಮೂರು ರೂಪಾಯಿ ಬರುವುದಿತ್ತು.

...ರಷ್ಯದ ಕೆಂಪು ಪಡೆ ಮತ್ತು ಟಿಟೋ ಸೇನೆಗಳ ಸೌಹಾರ್ದ ಸಮ್ಮಿಲನ...

ಪ್ರಧಾನ ಉಪಸಂಪಾದಕರ ಧ್ವನಿ :

"ಪುಟ್ಟಣ್ಣಯ್ಯ, ನಾಳೆ ಕಲೆಕ್ಟರು ಪ್ರೆಸ್‌ಕಾನ್ಫರೆನ್ಸ್ ಕರೆದಿದ್ದಾರೆ."

ತನಗೆ ಇಪ್ಪತ್ತು ವರ್ಷ ವಯಸ್ಸು. ಕಾರ್ಯಾಲಯದಲ್ಲಿ ದುಡಿಯಬೇಕಾದ್ದು ನಾಲ್ಕು ಗಂಟೆ. ಉಳಿದ ವೇಳೆ ಹೊರಗೆ ಸುದ್ದಿಸಂಗ್ರಹ. ವೇತನ ಇಪ್ಪತ್ತೆರಡು ರೂಪಾಯಿ ಇಪ್ಪತ್ತು ಸಂಬಳ; ಎರಡು ತುಟ್ಟಿಭತ್ತೆ. ನಮ್ಮ ಕೆಲಸವಾದ ಮೇಲೆ ಪರಊರಿನ ಪತ್ರಿಕೆಗಳಿಗೆ ಸುದ್ದಿ ಕಳಿಸಬಹುದು! ಅದು ಮಾಲಿಕರ ಔದಾರ್ಯ. ಅಂಥ ದುಡಿಮೆಯಿಂದ ಗಳಿಕೆ ಹತ್ತು ರೂಪಾಯಿ. ಅಂಥದೊಂದು ಪತ್ರಿಕೆ ಕಳೆದ ಮೂರು ತಿಂಗಳಿಂದ ಹಣ ಕೊಡುತ್ತಿಲ್ಲ...ಅಂಚೆ ವೆಚ್ಚ ತನ್ನ ಕೈಯಿಂದಲೇ.

ಒಂದು ಕಿಟಕಿಯ, ಒಂದು ಲಾಟೀನಿನ, ಒಬ್ಬನು ಮಲಗುವ ಕೋಣೆ. ಬಾಡಿಗೆ ಆರು ರೂಪಾಯಿ. ಹೋಟೆಲಿನ ಊಟಕ್ಕೆ ೨೨ ರೂ. ಕಾಫಿ ತಿಂಡಿ? ಧೋಬಿ? ದರ್ಜಿ? ಪತ್ರವ್ಯವಹಾರ?

> "ನಾವು ಮಧ್ಯಮ ವರ್ಗದವರು ಅನ್ನೋದು ಸೋಗು ನಮ್ಮ ಸ್ಥಾನ ದಲಿತರ ಎಡೆಯಲ್ಲಿ. ನಾವು ಅವರ ಬಂಧುಗಳು. ಪ್ರೆಸ್ ಕಾರ್ಮಿಕರಂತೆ ಪತ್ರಿಕೋದ್ಯೋಗಿಗಳೂ ಕೆಲಸಗಾರರೇ !"

—ಸ್ವಾಮಿ, ಐದಾರು ರೂಪಾಯಿ ಕೈಕಡ ಕೊಡ್ತೀರಾ?

—ಗುಡ್ ಈವ್ನಿಂಗ್ ಮಿಸ್ಟರ್ ಪುಟ್ಟಣ್ಣಯ್ಯ, ನಮ್ಮ ಆ ನ್ಯೂಸ್ ಬಂತೆ?

—ಸಾಯಂಕಾಲ ಒಂದು ಪ್ರಸ್ತಾವನೆ ಕೊಡಬೇಕೂಂತಿದೇನೆ. ಮನೆ ಕಡೆಗೆ ಬರ್ತೀರಾ?

...ತಲೆನೋವು.

"ನಿಮ್ಮಂಥವರು ಬಂದರೆ ಒಂದಿಷ್ಟು ಚಾ ತಕ್ಕೊಳ್ಳೀಂತ ಹೇಳುವುದಕ್ಕೂ ಇಲ್ಲ ಈಗಿನ ಕಾಲದಲ್ಲಿ..."

—ಜಾಗಿರದಾರರ 'ಬೀದಿಯ ಭೂತ' ನಾಟಕದಲ್ಲಿ ಒಂದು ಪಾತ್ರ ಆಡಿದ ಮಾತು...ಆ! ಈಗ ಪುಟ್ಟನ ಗಂಟಲೊಳಗಿಂದ ಒಂದು ಗುಟುಕು ಚಾ ಇಳಿಸುವವರು ಯಾರೂ ಇಲ್ಲವೆ?

ಟೇಬಲಿನ ಮೇಲೆ ಪುಟ್ಟ ತಲೆಯೊರಗಿಸಿದ. ಅಲ್ಲೇ ಜೊಂಪು...ನಿದ್ದೆ...

ಹುಡುಗ ಮೈಮುಟ್ಟಿ ಹೇಳುತ್ತಿದ್ದ:

"ಸಾರ್, ಸಾರ್ ಮ್ಯಾಟರು !"

ಪುಟ್ಟ ಕಣ್ಣು ತೆರೆದಾಗ ಪ್ರಧಾನ ಉಪಸಂಪಾದಕರು ಇರಲಿಲ್ಲ. ಊಟಕ್ಕೆ ಹೊರಟಿದ್ದರು.

ಮುಗಿದು ಹೋಯಿತು ಪುಟ್ಟನ ಆಯುಸ್ಸಿನಲ್ಲೊಂದು ಅರ್ಧ ದಿನ !

ಹೊರಗೆ, ಮುಟ್ಟಿದರೆ ಸುಟ್ಟು ಹೋಗುವ ಬಿಸಿಲು. ಪಾದರಕ್ಷೆ ಹರಿದಿತ್ತು ಬೇರೆ...ಮಧ್ಯಾಹ್ನದ ಊಟ?

ಊಟದ ಹೋಟೆಲಿಗೆ ನಾಲ್ಕು ಫರ್ಲಾಂಗು. ನಡೆಯಬಲ್ಲವರು ಯಾರು ?

ಪುಟ್ಟ ಕಾಫಿ ಕುಡಿದ-ಮೂರು ಮುಕ್ಕಾಲಾಣೆಯ ಬಿಲ್ಲು. ಕಾಲಾಣೆಯ 'ಪಾಸಿಂಗ್ ಶೋ.'

ಈ ಲೋಕವೇ ಒಂದು ಪಾಸಿಂಗ್ ಶೋ.

ರೂಮು ಸೇರಿ ಪುಟ್ಟ ನಿದ್ದೆಹೋದ. ನಾಲ್ಕು ಗಂಟೆಗೆ ಎಚ್ಚೆತ್ತಾಗ ಕಣ್ಣು ಕೆಂಪಗಾಗಿತ್ತು. ಮುಖಕ್ಕಷ್ಟು ನೀರು ಹನಿಸಿ, ಕ್ರಾಪು ಬಾಚಿದಂತೆ ಮಾಡಿ ಬರೆಯುವ ಪರಿಕರಗಳೊಡನೆ ಹೊರಟ. ಪುನಃ ಕಾರ್ಯಾಲಯಕ್ಕೆ ಭೇಟಿ ನೀಡಿ, ಸಭೆ ಇತ್ಯಾದಿಗಳಿದ್ದರೆ ಪತ್ರಿಕಾಪ್ರತಿನಿಧಿಯಾಗಿ ಹೋಗಬೇಕು.

ಕೆಲವು ದಿನಗಳ ಹಿಂದೆ ದಾರಿ ನಡೆಯುತ್ತಿದ್ದಾಗ ಯಾರೋ ನಮಸ್ಕಾರ ಕೊಟ್ಟರಂತೆ; ಇನ್ನೊಬ್ಬರು ಮುಗುಳುನಗೆ ಬೀರಿದರಂತೆ. ತಿಂಗಳ ಸಂಬಳವೆಲ್ಲ ಮುಗಿದು, ಹುಳ್ಳ ಹುಳ್ಳಗಿನ ಮುಖದೊಡನೆ ನಡೆಯುತ್ತಿದ್ದ ಪುಟ್ಟ ಅದೊಂದನ್ನೂ ಗಮನಿಸಿರಲಿಲ್ಲ. ಪರಿಣಾಮವಾಗಿ ಆರೋಪಗಳಿಗೆ ಒಳಗಾಗಿದ್ದ : 'ಪುಟ್ಟಣ್ಣಯ್ಯ ದೊಡ್ಡ ಮನುಷ್ಯನ ಸೋಗುಹಾಕ್ತಿದ್ದಾನೆ;' 'ಅವನಿಗೆ ಸಭ್ಯ ವರ್ತನೆಯೇ ತಿಳೀದು.'

ಮ್ಯಾನೇಜರರೆದುರು ಕುಳಿತು ಪುಟ್ಟ ಹೇಳಿದ :

"ವಿಸಿಟಿಂಗ್ ಕಾರ್ಡ್ಸ್ ಮಾಡಿಸಿ ಕೊಡಿ ಅಂತ ಹೇಳಿ ಎರಡು ತಿಂಗಳಾಯ್ತು. ಕಾರ್ಡ್ ಇಲ್ಲದೆ ಕಲೆಕ್ಟರರನ್ನು ನೋಡುವುದು ಹ್ಯಾಗೆ ? ಬೇರೆಯವರಲ್ಲಿಗೆ ಹೋಗುವುದು ಹ್ಯಾಗೆ ?''

''ನೋಡಿ ಪುಟ್ಟಣ್ಣಯ್ಯ, ಐವತ್ತು ಕಾರ್ಡಿಗೆ ೧ ರೂ. ೮ ಆಣೆ...ಸಾದಾ ಕಾಗದದ ಮೇಲೆ ?''

"ಇದೇನು ನನಗೋಸ್ಕರವೆ ?''

ಸಿಡುಕಿ ಹೊರಟ ಪುಟ್ಟಣ್ಣಯ್ಯನನ್ನು ಪ್ರಧಾನ ಉಪಸಂಪಾದಕರು ಕರೆದರು :

"ಒಂದು ಆಮಂತ್ರಣ ಇದೆ. ಐದೂವರೆಗೆ ಮಹಿಳಾ ವೃಂದದವರ ಸಭೆ....''

ಮಹಿಳಾ ವೃಂದ? ಪುಟ್ಟ ತನ್ನ ವೇಷ ನೋಡಿಕೊಂಡ. ಕರವಸ್ತ್ರ ತಾನಾಗಿಯೇ ಅವನ ಮುಖದ ಬೆವರೊರೆಸಿತು.

ವೃಂದದ ಗೊಡವೆ ಬೇಡವೆಂಬ ತೀರ್ಮಾನದೊಂದಿಗೆ ಪುಟ್ಟ ಹೊರಬಿದ್ದ.

ಒಂದು ಮೆರವಣಿಗೆ ಬರುತ್ತಿತ್ತು.

"ಇಂಕ್ವಿಲಾಬ್, ಜಿಂದಾಬಾದ್!"

ಕಾರ್ಮಿಕರ ಮೆರವಣಿಗೆ. ಗಂಡಸರು, ಹೆಂಗಸರು ಮತ್ತು ಮಕ್ಕಳು.

ಘೋಷಣೆಗಳು: 'ಮೂರು ತಿಂಗಳ ಬೋನಸ್ ಸಿಗಲಿ!' 'ತುಟ್ಟಿಭತ್ತೆ ಹೆಚ್ಚಾಗಲಿ!' "ಮಜೂರಿ ಜಾಸ್ತಿ ಮಾಡಿ!"

ಇವೆಲ್ಲ ತನಗೆ ಸಂಬಂಧಿಸಿಯೂ ಎಷ್ಟು ಸತ್ಯ!

ಅವನ ತಲೆಯಲ್ಲಿ ರೂಪುಗೊಳ್ಳತೊಡಗಿದ ವಿಚಾರಗಳಿವು :

"ನಾವು ಮಧ್ಯಮ ವರ್ಗದವರು ಅನ್ನೋದು ಸೋಗು. ನಮ್ಮ ಸ್ಥಾನ ದಲಿತರ ಎಡೆಯಲ್ಲಿ. ನಾವು ಅವರ ಬಂಧುಗಳು. ಪ್ರೆಸ್ ಕಾರ್ಮಿಕರಂತೆ ಪತ್ರಿಕೋದ್ಯೋಗಿಗಳೂ ಕೆಲಸಗಾರರೇ !"

ಪುಟ್ಟಣ್ಣಯ್ಯ ತನಗರಿಯದಂತೆಯೇ ಆ ಪ್ರವಾಹದಲ್ಲಿ ಬೆರೆತ.

ಮೆರವಣಿಗೆ ಮುಂದೆ ಸಾಗಿತು.

['ಏಕಪ್ರವಾಹ' ಮೊದಲು ಪ್ರಕಟವಾದದ್ದು 1944 ರ 'ಉಷಾ' ಮಾಸ ಪತ್ರಿಕೆಯ ಸೆಪ್ಟೆಂಬರ್ ಸಂಚಿಕೆಯಲ್ಲಿ. ಕಥೆಯಲ್ಲಿ ಪ್ರಸ್ತಾಪಿತವಾಗಿರುವ 'ಬೀದಿಯ ಭೂತ' ನಾಟಕದ ಕರ್ತೃ ಶ್ರೀರಂಗರು. ಅದನ್ನು ಅವರು ರಚಿಸಿದ್ದು ಯುದ್ಧಕಾಲದಲ್ಲಿ ಬಿಜಾಪುರದ ಜನರನ್ನು ಪೀಡಿಸಿದ ಬರಗಾಲದ ಹಿನ್ನೆಲೆಯಲ್ಲಿ. ಆ ನಾಟಕವನ್ನು ಮೊದಲು ಅಭಿನಯಿಸಿದ ಕೀರ್ತಿ ಸಲ್ಲುವುದು ಪೀಪಲ್ಸ್ ಥಿಯೇಟರಿನ ಮಂಗಳೂರು ಶಾಖೆಗೆ.] ●

ಬದುಕುವ ಆಸೆ

ಬದುಕುವ ಆಸೆ
ಬದುಕಿ ಎಲ್ಲರೊಡನೆ ಬೆರೆತು
ಒಂದಾಗುವ ಎಲ್ಲರೊಡನೆ
ಪಳೆಯುಳಿಕೆಯಂತೆ ಉಳಿಯುವ ಆಸೆ

ಎಲ್ಲದನ್ನು ನನ್ನದಾಗಿಸಿಕೊಂಡು
ಒಡಲ ಉರಿಗೆ ಸಾಂತ್ವನಗೊಳಿಸುವ
ಕಾಸಾರವಾದ ಚಿತ್ತಕ್ಕೆ ಶಾಂತಿ
ನೀಡುವ ಆಸೆ

ಆಸೆ...ಆಸೆ...ಬದುಕುವ ಆಸೆ
ಇಲ್ಲದಿದ್ದರೆ? ಕ್ರಾಂತಿಗಾಗಿ ಸಾಯುವ
ಆಸೆ.

—ಎಸ್. ರಾಜಾಸಾಹೇಬ್

ಭಾರತದ ಕಾರ್ಮಿಕ ವರ್ಗದ ಸಂಕ್ಷಿಪ್ತ ಚರಿತ್ರೆ

(7ನೇ ಪುಟದಿಂದ)

ಬಾಪ್ಟಿಸ್ಟಾ, ಚಮನಲಾಲ್ ಅನುಕ್ರಮವಾಗಿ ಅಧ್ಯಕ್ಷ, ಉಪಾಧ್ಯಕ್ಷ, ಕಾರ್ಯದರ್ಶಿಯಾಗಿ ಆಯ್ಕೆಯಾದರು.

ಎ. ಐ. ಟಿ. ಯು. ಸಿ. ಯ ಎರಡನೇ ಅಧಿವೇಶನ ಝರಿಯಾದಲ್ಲಿ, 1921ನೇ ನವೆಂಬರ್‌ನಲ್ಲಿ ನಡೆಯಿತು ಆಗ ತಾನೆ ಝರಿಯಾ ಕಲ್ಲಿದ್ದಲು ಗಣಿ ಪ್ರದೇಶದಲ್ಲಿ ಅನಿರ್ದಿಷ್ಟ ಮುಷ್ಕರ ನಡೆದು ಶೇಕಡಾ 50 ರಷ್ಟು ಕೂಲಿ ಏರಿಕೆ ಆಗಿತ್ತು. ರಾಷ್ಟ್ರೀಯ ನಾಯಕರು (ಗಾಂಧಿಜೀ ಬಿಟ್ಟು) ಈ ಅಧಿವೇಶನದಲ್ಲಿ ಹೆಚ್ಚು ಆಸಕ್ತಿ ತೋರಿದರು. ಅಂತರಾಷ್ಟ್ರೀಯ ಮಟ್ಟದಲ್ಲಿ ಸಹ ಹೆಚ್ಚು ಆಸಕ್ತಿ ಕಂಡು ಬಂತು. ಕೆಂಪು ಟ್ರೇಡ್ ಯೂನಿಯನ್ ಅಂತರಾಷ್ಟ್ರೀಯದ ಬ್ರಿಟಿಷ್ ಬ್ಯೂರೋ ಅಧಿವೇಶನಕ್ಕೆ ಶುಭ ಕೋರಿ, ಸಾಮ್ರಾಜ್ಯಶಾಹಿಯ ವಿರುದ್ಧ ವಸಾಹತು ಮತ್ತು ಸಾಮ್ರಾಜ್ಯಶಾಹಿ ದೇಶದ ಕಾರ್ಮಿಕರ ಐಕ್ಯ ಹೋರಾಟಕ್ಕೆ ಕರೆ ಇತ್ತಿತು. ಅಧಿವೇಶನದಲ್ಲಿ ಸ್ವರಾಜ್ಯ ಸ್ಥಾಪಿಸುವ ಬಗ್ಗೆ, ಯುದ್ಧದ ವಿರುದ್ಧ, ಸೋವಿಯತ್ ಯೂನಿಯನ್ನಿನಲ್ಲಿ ಯುದ್ಧಾನಂತರ ಬರದಂತಹ ಪರಿಸ್ಥಿತಿ ಬಗ್ಗೆ ಸಂತಾಪ ಸೂಚಿಸಿ ಅಂತರರಾಷ್ಟ್ರೀಯ ಕಾರ್ಮಿಕ ವರ್ಗದ ಬೆಂಬಲ ಸೂಚಿಸುವ ಗೊತ್ತುವಳಿಗಳನ್ನು ಅಂಗೀಕರಿಸಲಾಯಿತು.

ಎ. ಐ. ಟಿ. ಯು. ಸಿ. ರಚನೆಯಾದ ಸುಮಾರಿಗೆ ಭಾರತದಲ್ಲಿ ಮಾರ್ಕ್ಸ್‌ವಾದಿ ರಾಜಕೀಯ ಸಿದ್ಧಾಂತ ಪ್ರಚಾರಕ್ಕೆ ಬರತೊಡಗಿತು. ಹಲವು ನಗರಗಳಲ್ಲಿ ಮಾರ್ಕ್ಸ್‌ವಾದಿ ಗುಂಪುಗಳು ಹುಟ್ಟಿಕೊಂಡವು, 1920 ಅಕ್ಟೋಬರ್‌ನಲ್ಲಿ ತಾಷ್ಕೆಂಟನಲ್ಲಿ ಭಾರತ ಕಮ್ಯೂನಿಸ್ಟ್ ಪಕ್ಷ ಹುಟ್ಟಿಕೊಂಡಿತು. 1921ರಲ್ಲಿ ನಡೆದ ಕಾಂಗ್ರೆಸ್‌ನ ಅಹಮದಾಬಾದ್ ಅಧಿವೇಶನಕ್ಕೆ ಕಳುಹಿಸಿದ್ದ ತನ್ನ ಮ್ಯಾನಿಫೆಸ್ಟೋದಲ್ಲಿ ಸಾಮ್ರಾಜ್ಯಶಾಹಿ ವಿರುದ್ಧ ಹೋರಾಟದಲ್ಲಿ ರೈತ–ಕಾರ್ಮಿಕರ ಸಂಘಟನೆ,—ಆರ್ಥಿಕ ಹೋರಾಟಗಳ ಪ್ರಾಮುಖ್ಯತೆಯನ್ನು ಒತ್ತಿ ಹೇಳಿತು. 1922ರಲ್ಲಿ ನಡೆದ ಗಯಾ ಅಧಿವೇಶನಕ್ಕೆ ಕಮ್ಯೂನಿಸ್ಟ್ ಪಕ್ಷ ತನ್ನದೇ ಆದ ಪರ್ಯಾಯ ಕಾರ್ಯಕ್ರಮವನ್ನು ಪರಿಶೀಲನೆಗೆ ಕಳುಹಿಸಿತು. ಇದನ್ನು ಕಾಂಗ್ರೆಸ್ ಅಧಿವೇಶನದಲ್ಲಿ ಮಂಡಿಸದೆ, ನಿರ್ಲಕ್ಷ ಮಾಡಿದರೂ ಇದು ಅಮೃತ್ ಬಜಾರ್ ಪತ್ರಿಕಾದಲ್ಲಿ ಪ್ರಕಟವಾಗಿ, ಜನಜನಿತವಾಯಿತು. 1924 ರಲ್ಲಿ ಭಾರತದ ಕಮ್ಯೂನಿಸ್ಟರನ್ನು ಮೊಳಕೆಯಲ್ಲೇ ಚಿವುಟಿ ಹಾಕಲು ಮುಜಫರ್ ಅಹ್ಮದ್, ಡಾಂಗೆ, ಶೌಕತ್ ಉಸ್ಮಾನಿ, ನಳಿನಿಭೂಷಣ್ ದಾಸಗುಪ್ತ ಇವರನ್ನು ಕಾನ್‌ಪುರ್ ಪಿತೂರಿ ಮೊಕದ್ದಮೆ ಹಾಕಿ ಬಂಧಿಸಲಾಯಿತು. ಆದರೆ ಇದರ ಪರಿಣಾಮ ತಿರುವು ಮುರುವಾಗಿ, ರಾಷ್ಟ್ರೀಯ ಚಳುವಳಿಯಲ್ಲಿನ ತೀವ್ರಗಾಮಿಗಳು, ಎಡಪಂಥೀಯರು, ಟ್ರೇಡ್ ಯೂನಿಯನ್ ಕಾರ್ಯಕರ್ತರನ್ನು ಒಗ್ಗೂಡಿಸುವ ಸಿದ್ಧಾಂತವೊಂದು ಸಿಕ್ಕಿ 'ವರ್ಕರ್ಸ್ ಎಂಡ್ ಪೇಸಂಟ್ಸ್' ಪಾರ್ಟಿಯಂತಹ ಪಕ್ಷಗಳು ಅಸ್ತಿತ್ವಕ್ಕೆ ಬಂದು ಬೆಳೆಯತೊಡಗಿದವು. ಭಾರತದ ಯುವಕ ಕಮ್ಯೂನಿಸ್ಟರು ಈ ಪಕ್ಷಗಳಲ್ಲಿ ಕೆಲಸ ಮಾಡತೊಡಗಿದರು.

ವಸಾಹತುಗಳಲ್ಲಿ ಹೀಗೆ ಕಮ್ಯೂನಿಸ್ಟ್ ಚಳುವಳಿ ಬೆಳೆಯುತ್ತಿದ್ದಂತೆ, ಅಭಿವೃದ್ಧಿ ಬಂಡವಾಳಶಾಹಿ ದೇಶಗಳಲ್ಲಿ ಕಾರ್ಮಿಕರ ರಾಜಕೀಯ ಚಳುವಳಿ ಅವನತಿಯತ್ತ ಸಾಗುತಿತ್ತು. ಟ್ರೇಡ್ ಯೂನಿಯನ್‌ಗಳ ಆಮಸ್ಟರ್ ಡ್ಯಾಂ ಅಂತರಾಷ್ಟ್ರೀಯ ಪ್ರತಿನಿಧಿಸುವ ಸುಧಾರಣಾವಾದಿಗಳು ವರ್ಗ ಹೋರಾಟದ ವಿರುದ್ಧ ನಡೆಸಿದ ಪಿತೂರಿಯಿಂದ ಇದು ಸಾಧ್ಯವಾಗಿತ್ತು. ಆದ್ದರಿಂದ ಇದರ ವಿರುದ್ಧ ಹೋರಾಡಲು ಕ್ರಾಂತಿಕಾರಿ ಟ್ರೇಡ್ ಯೂನಿಯನ್‌ಗಳ ಅಂತರಾಷ್ಟ್ರೀಯವೊಂದನ್ನು ಸ್ಥಾಪಿಸಲಾಯಿತು. ಇದಲ್ಲದೆ ಸಾಮ್ರಾಜ್ಯಶಾಹಿ ವಿರೋಧಿ ಮತ್ತು ವಸಾಹತು ದಬ್ಬಾಳಿಕೆ-ವಿರೋಧಿ ಅಂತರಾಷ್ಟ್ರೀಯ ಲೀಗ್ ಒಂದನ್ನು ಸ್ಥಾಪಿಸಲಾಯಿತು.

ಈ ರಾಷ್ಟ್ರೀಯ, ಅಂತರಾಷ್ಟ್ರೀಯ ರಾಜಕೀಯ ಘಟನೆಗಳು ಭಾರತ ಕಾರ್ಮಿಕ ಚಳುವಳಿ ಮತ್ತು ಎ. ಐ. ಟಿ ಯು. ಸಿ. ಮೇಲೆ ಗಾಢವಾದ ಪರಿಣಾಮ ಬೀರಿದವು.

ಸಂರಕ್ಷಣಾ ಹೋರಾಟಗಳು (1922-26)

ಮೊದಲನೆಯ ಮಹಾ ಯುದ್ಧ ಕೆಲವು ಕೈಗಾರಿಕೆಗಳ ಬೆಳವಣಿಗೆಗೆ ಕಾರಣವಾದರೂ, ನಿಜವಾದ ಅರ್ಥದಲ್ಲಿ ಭಾರತೀಯ ಕೈಗಾರಿಕೆಗಳು ಭದ್ರಗೊಳ್ಳಲಿಲ್ಲ ಸ್ಥಳೀಯ ಕೈಗಾರಿಕೆಗಳ ಬಗ್ಗೆ ಬ್ರಿಟಿಷ್ ಸರ್ಕಾರದ ಮಲತಾಯಿ ಧೋರಣೆ, ಜಪಾನಿನ ಪೈಪೋಟಿಗಳನ್ನೆದುರಿಸಲು, ಭಾರತದ ಬಂಡವಾಳಿಗರು ಕಾರ್ಮಿಕರ ಕೂಲಿ ಕಡಿಮೆ ಮಾಡಲು ಪ್ರಯತ್ನಿಸಿದರು. ಇದಲ್ಲದೆ ಕೈಗಾರಿಕೆಯಲ್ಲಿ ಹಿಂಜರಿತದಿಂದ ಕಾರ್ಮಿಕರ ಸಂಖ್ಯೆ ಹೆಚ್ಚಿನ ಕೈಗಾರಿಕೆಗಳಲ್ಲಿ ಹೆಚ್ಚಾಗಲಿಲ್ಲ. ಹಲವು ಕೈಗಾರಿಕೆಗಳಲ್ಲಿ ಕಡಿಮೆ ಆಯಿತು. ಮಾಲೀಕರು ಹಲವು ಕಾರ್ಮಿಕರನ್ನು ಕೆಲಸದಿಂದ ವಜಾ ಮಾಡಿ ತಮ್ಮ ಕೈಗಾರಿಕೆಗಳ ಸಮಸ್ಯೆಗಳನ್ನು ಸರಿದೂಗಿಸಲು ಪ್ರಯತ್ನಿಸಿದರು. ಬೆಳೆಯುತ್ತಿರುವ ಜನಸಂಖ್ಯೆ ಮತ್ತು ಹಳ್ಳಿಗಳ ಆರ್ಥಿಕತೆ ದುರ್ಬಲತೆಯ ಹಿನ್ನೆಲೆಯಲ್ಲಿ ತೀವ್ರ ನಿರುದ್ಯೋಗ, ನಿರುದ್ಯೋಗಿಗಳ ನಗರ ವಲಸೆ ತಲೆದೋರಿತು.

ಈ ಹಿನ್ನೆಲೆಯಲ್ಲಿ ಕಾರ್ಮಿಕ ವರ್ಗ ತಾನು ಈವರೆಗೆ ಹೋರಾಟದಲ್ಲಿ ಪಡೆದ ಸವಲತ್ತುಗಳನ್ನು ಉಳಿಸಿಕೊಳ್ಳಲು ಸಂರಕ್ಷಣಾ ಹೋರಾಟ ನಡೆಸಬೇಕಾಯಿತು. ಅಹಮದಾಬಾದ್ ಮಿಲ್ ಮಾಲೀಕರ 20 ಶೇಕಡಾ ವೇತನ ಕಡಿತದ ಸಲಹೆಯ ವಿರುದ್ಧ 43,000 ಕಾರ್ಮಿಕರ ಹೋರಾಟ ನಡೆದು ತೀವ್ರ ಪ್ರತಿಕೂಲ ಪರಿಸ್ಥಿತಿಯಿಂದಾಗಿ 16 ಶೇಕಡಾ ವೇತನ ಕಡಿತಕ್ಕೆ ಒಪ್ಪಬೇಕಾಯಿತು. ಮುಂಬಯಿ ಮಿಲ್ ಮಾಲೀಕರು ಸಹ ಬೋನಸ್ ಮತ್ತು ಆಹಾರ ಭತ್ಯೆ ಕಡಿತ ಸಲಹೆ ಮುಂದಿಟ್ಟಾಗ, ಕಾರ್ಮಿಕರು ಮುಷ್ಕರದೊಂದಿಗೆ ಇದನ್ನು ವಿರೋಧಿಸಿದರು. ಸುಮಾರು 3 ತಿಂಗಳ ಕಾಲ ಈ ಮುಷ್ಕರ ನಡೆಯಿತು. ಈ ಮುಷ್ಕರ ಅಂತರಾಷ್ಟ್ರೀಯ ಗಮನ ಸೆಳೆದು ಬ್ರಿಟಿಷ್, ರಷ್ಯನ್ ಟ್ರೇಡ್ ಯೂನಿಯನ್ನುಗಳು ಆರ್ಥಿಕ ಸಹಾಯ ಕಳಿಸಿದ್ದು ಗಮನಾರ್ಹ. ಈಶಾನ್ಯ ರೈಲ್ವೇ, ಪೂರ್ವ ರೈಲ್ವೇ ಮತ್ತು ಜಿ. ಐ. ಪಿ. ರೈಲ್ವೇಗಳಲ್ಲಿ ಈ ಕಾಲದಲ್ಲಿ ಕೆಲವು ಕೆಲಸಗಾರರ ವಜಾ, ದಬ್ಬಾಳಿಕೆ, ವೇತನ, ಬೋನಸ್ ಕಡಿತದ ವಿರುದ್ಧ ಹೋರಾಟಗಳು ನಡೆದವು.

ಈ ಅವಧಿಯಲ್ಲಿ ಕಾರ್ಮಿಕರ ಹೋರಾಟ ರಕ್ಷಣಾತ್ಮಕವಾಗಿದ್ದರೂ, ಹೆಚ್ಚು ಹೆಚ್ಚು ಸುಸಂಘಟಿತ ಟ್ರೇಡ್ ಯೂನಿಯನ್‌ಗಳು ಅಸ್ತಿತ್ವಕ್ಕೆ ಬಂದವು. ಈ ಅವಧಿಯ ಇನ್ನೊಂದು ಲಕ್ಷಣವೆಂದರೆ ಮ್ಯಾನೇಜ್‌ಮೆಂಟುಗಳಿಂದ ತಮ್ಮದೇ ಆದ ಕರಿಗಾಲುಗಳ ಯೂನಿಯನ್‌ಗಳ ಸ್ಥಾಪನೆ. ಯೂನಿಯನ್ ಸಂಘಟನೆಗಳು ನಿಪುಣ ಕಾರ್ಮಿಕರ ಮಧ್ಯೆ ಹೆಚ್ಚು ಬೆಳೆಯಿತು. 1922ರ ಗಯಾ ಅಧಿವೇಶನದಲ್ಲಿ ಕಾಂಗ್ರೆಸ್ ತನ್ನ ಸದಸ್ಯರಿಗೆ ಎ. ಐ. ಟಿ. ಯು. ಸಿ. ಯಲ್ಲಿ ಕೆಲಸ ಮಾಡಲು ಅನುಮತಿ ನೀಡಿತು.

ಎ. ಐ. ಟಿ. ಯು. ಸಿ. 3ರಿಂದ 6ನೇ ಅಧಿವೇಶನಗಳು ಅನುಕ್ರಮವಾಗಿ ಲಾಹೋರ್, ಕಲ್ಕತ್ತಾ, ಮುಂಬಯಿ, ಮದ್ರಾಸ್‌ಗಳಲ್ಲಿ ನಡೆದವು. ಕಾರ್ಮಿಕರ ರಕ್ಷಣಾತ್ಮಕ ಹೋರಾಟಗಳ ಪ್ರತಿಫಲನ ಇಲ್ಲೂ ಆಗಿತ್ತು. ಈ ಎಲ್ಲ ಅಧಿವೇಶನಗಳು ಸಪ್ಪೆಯಾಗಿದ್ದು ಗಮನ ಸೆಳೆಯಲಿಲ್ಲ. ಸಂಘಟನಾತ್ಮಕವಾಗಿ ಸಹ ಎ ಐ ಟಿ. ಯು. ಸಿ. ಸಡಿಲವಾಗಿತ್ತು. ಈ ಅವಧಿಯಲ್ಲಿ ಅಂತರಾಷ್ಟ್ರೀಯ ಟ್ರೇಡ್ ಯೂನಿಯನ್‌ಗಳು ಎ. ಐ ಟಿ ಯು ಸಿ. ಯನ್ನು ತನ್ನ ಸದಸ್ಯ ಸಂಸ್ಥೆಯಾಗಿ ಮಾಡಲು ಯತ್ನಿಸಿದವು. ಎ. ಐ. ಟಿ. ಯು. ಸಿ. ನಾಯಕರು ಸಹ ವಿದೇಶಿ ಟ್ರೇಡ್ ಯೂನಿಯನ್‌ಗಳ ಜತೆ ಸಂಬಂಧ ಬೆಳೆಸಲು ಯತ್ನಿಸಿದರು.

ತೀವ್ರ ರಾಷ್ಟ್ರವ್ಯಾಪೀ ಹೋರಾಟಗಳು (1926—29)

ಈ ಕಾಲದಲ್ಲಿ ಕಮ್ಯೂನಿಸ್ಟ್ ಚಳುವಳಿ ಭದ್ರ ಅಡಿಪಾಯ ಹಾಗೂ ಬೆಳವಣಿಗೆಗೆ ಮುಂದಾಗುತ್ತಿತ್ತು. ಜನರಲ್ಲಿ ಅತೃಪ್ತಿ ಹೊಗೆಯಾಡುತ್ತಿತ್ತು. ಭಾರತದ ಕೈಗಾರಿಕೆಗೆ ಸ್ವಲ್ಪ ಮಟ್ಟಿನ ಪ್ರೋತ್ಸಾಹ, ರಕ್ಷಣೆ ಕೊಡುವ ಹಳೆಯ ನೀತಿ ಬದಲಾಯಿಸಿ, ಸರ್ಕಾರ ಭಾರತದ—ರೂಪಾಯಿಯ ಅಪಮೌಲ್ಯ ಸಹ ಮಾಡಿತು. 'ಕೆಲವು ಆಡಳಿತ ಸುಧಾರಣೆ ತರಲು ಮತ್ತು ಪಾರ್ಲಿಮೆಂಟ್ ಪ್ರಜಾಪ್ರಭುತ್ವಕ್ಕೆ ಭಾರತೀಯರ ಸೂಕ್ತತೆ ಪರಿಶೀಲಿಸಲು' ಯಾವುದೇ ಭಾರತೀಯ ಸದಸ್ಯರಿಲ್ಲದ ಸೈಮನ್ ಸಮಿತಿ ನೇಮಕದಿಂದ ಜನರ ಕೋಪ ಭುಗಿಲೆದ್ದಿತು. ಯಾವುದೇ ಜನ ಚಳುವಳಿಗೆ ಹಿಂಜರಿಯುತ್ತಿದ್ದ, ಕಾಂಗ್ರೆಸ್ ನಾಯಕತ್ವ ಸಹ, ಪೂರ್ಣ ಸ್ವರಾಜ್ಯ ತನ್ನ ಧ್ಯೇಯ ಎಂದು ಸಾರಬೇಕಾಯಿತು (1929) ಮತ್ತು ಸವಿನಯ ಕಾಯಿದೆ ಭಂಗಕ್ಕೆ ಕರೆ ನೀಡಿತು.

ಈ ದೇಶವ್ಯಾಪಿ ಅಶಾಂತಿಯ ಹಿನ್ನೆಲೆಯಲ್ಲಿ ಕಾರ್ಮಿಕವರ್ಗ ಹಿಂದಿನ ಅವಧಿಯ ಪ್ರತಿಕೂಲ ಪರಿಸ್ಥಿತಿಗಳಿಂದ ಚೇತರಿಸಿಕೊಂಡು ಹೋರಾಟದ ಕಣಕ್ಕಿಳಿಯಲು 1927ರ ಆದಿಯಿಂದ ಆರಂಭವಾಗಿ 1928-29ರಲ್ಲಿ ನಡೆದ ಹೋರಾಟಗಳು ಅವಿಸ್ಮರಣೀಯ, ಚಾರಿತ್ರಿಕ. 1928ರಲ್ಲೇ 312 ಮಿಲಿಯ ಮಾನವ ದಿನಗಳ ನಷ್ಟವಾಯಿತು. ಇದು ಈ ಮೊದಲಿನ ಐದು ವರ್ಷಗಳ ಮೊತ್ತಕ್ಕಿಂತ ಜಾಸ್ತಿಯಾಗಿತ್ತು. ಈ ಅವಧಿಯಲ್ಲಿ ಎಲ್ಲ ರೈಲ್ವೆಗಳಲ್ಲಿ ಸರ್ ವಿನ್ಸೆಂಟ್ ರಾವೆನ್ ಕಮಿಷನ್ ರೈಲ್ವೆ ಆದಾಯ-ವೆಚ್ಚ ಸರಿದೂಗಿಸಲು ಕಾರ್ಮಿಕರ ಸಂಖ್ಯೆ ಕಡಿಮೆ ಮಾಡುವ ಸಲಹೆಯನ್ನು ಬಂಗಾಳ-ನಾಗಪುರ ರೈಲ್ವೆಯಿಂದ ಆರಂಭಿಸಿ, ಕಾರ್ಯಗತ ಮಾಡಲು ಪ್ರಯತ್ನಿಸಿದ್ದರ ವಿರುದ್ಧ ಅತ್ಯಂತ ದೊಡ್ಡ ಹೋರಾಟಗಳು ನಡೆದವು. ಇವುಗಳಲ್ಲಿ ಬಂಗಾಳ, ನಾಗಪುರ ರೈಲ್ವೆಯಲ್ಲಿ ಖರಗಪುರ ವರ್ಕ್‌ಷಾಪ್‌ನಿಂದ ಆರಂಭವಾಗಿ ನಡೆದ ಎರಡು ಮುಷ್ಕರಗಳು ಗಮನಾರ್ಹವಾದವು. ಇದಕ್ಕೆ ಕಾಂಗ್ರೆಸ್, ವಿದೇಶೀ ಯೂನಿಯನ್‌ಗಳ ಬೆಂಬಲ ದೊರಕಿತು. ಇದರ ಹಿಂದೆಯೇ ಕಾರ್ಮಿಕರ ಸಂಖ್ಯೆ ಮಿತಗೊಳಿಸುವ, ಹುಚ್ಚಾಪಟ್ಟೆ ವರ್ಗ ಮಾಡುವ ದಬ್ಬಾಳಿಕೆ, ಕಿರುಕುಳ, ವಿರುದ್ಧ ಹಾಗೂ ವೇತನ ಏರಿಕೆ, ಇತರ ಸವಲತ್ತುಗಳಿಗಾಗಿ ಪೂರ್ವ ರೈಲ್ವೆ, ದಕ್ಷಿಣ ರೈಲ್ವೆ, ಜಿ ಐ ಪಿ ರೈಲ್ವೆ. ಎಸ್. ಜಿ. ಎಸ್. ರೈಲ್ವೆ (ಹೈದರಾಬಾದ್)ಗಳಲ್ಲಿ ದೊಡ್ಡ ಮುಷ್ಕರಗಳು ನಡೆದವು. ಈ ಮುಷ್ಕರಗಳನ್ನು ದಮನ ಮಾಡಲು ಸರ್ಕಾರ ತನ್ನಲ್ಲಿದ್ದ ಎಲ್ಲ ಅಸ್ತ್ರಗಳನ್ನು ಬಳಸಿತು.

ಮುಂಬಯಿಯ ಹತ್ತಿ ಗಿರಣಿಗಳಲ್ಲಿ 1928, 1929ರಲ್ಲಿ ಎರಡು ಸಾರ್ವತ್ರಿಕ ಮುಷ್ಕರ ನಡೆದವು. ಮೊದಲನೆ ಸಾರ್ವತ್ರಿಕ ಮುಷ್ಕರ ಮುಂಬೈ ಮಾಲೀಕರು ಕೈಗಾರಿಕೆ ಸರಿದೂಗಿಸುವ (ratanalization) ಹೆಸರಿನಲ್ಲಿ ಕೆಲಸಗಾರರ ವಜಾ, ಇತ್ಯಾದಿಗಳ ವಿರುದ್ಧ, ಕೆಲವು ಸ್ಥಾಪಿತ ಸುಧಾರಣಾವಾದಿ ನಾಯಕರ ವಿರೋಧವಿದ್ದಾಗ್ಯೂ ಕಮ್ಯೂನಿಸ್ಟರ ಮುತುವರ್ಜಿಯಿಂದ ಸಂಘಟಿತವಾಯ್ತು. ಇದರಿಂದ ಮಾಲೀಕರು ತಮ್ಮ ಯೋಜನೆ ತಾತ್ಕಾಲಿಕವಾಗಿ ಹಿಂತೆಗೆದುಕೊಂಡು [illegible] ಪ್ರಯತ್ನಿದಾಗ ಎರಡನೇ ಮುಷ್ಕರ ನಡೆಯಿತು. ಈ ಎರಡು ಮುಷ್ಕರಗಳ ಕಾಲದಲ್ಲಿ ಗಿರಣಿ ಕಾರ್ಮಿಕರ ಯೂನಿಯನ್ 324 ಸದಸ್ಯರಿಂದ ಆರಂಭಿಸಿ 54,000 (1929 ಹೊತ್ತಿಗೆ) ಸದಸ್ಯತ್ವದ ಪ್ರಬಲ ಸುಸಂಘಟಿತ, ಸಮರಶೀಲ ಯೂನಿಯನ್ ಆಗಿ ಬೆಳೆಯಿತು. 1929ರಲ್ಲಿ ವಾರದ ಕೆಲಸದ ಅವಧಿ 60 ಗಂಟೆ ಮಾಡುವುದು, ಎರಡು ಪಾಳಿಯ ಪ್ರಾರಂಭ, ಕೆಲಸದ ಮೊತ್ತ ಜಾಸ್ತಿ ಮಾಡುವುದರ ವಿರುದ್ಧ ಸಣಬು ಕೈಗಾರಿಕೆಯಲ್ಲಿ ಪ್ರಥಮ ಸಾರ್ವತ್ರಿಕ ಮುಷ್ಕರ ಸಂಘಟಿತವಾಯಿತು. ಬಹಳಮಟ್ಟಿಗೆ ಸಫಲವೂ ಆಯಿತು. ಇದಲ್ಲದೆ ಜಮಷಡ್‌ಪುರದ ಟಾಟಾ ಕಬ್ಬಿಣ ಉಕ್ಕಿನ ಕಾರ್ಖಾನೆಯ 18,000 ಕಾರ್ಮಿಕರ ಆರು ತಿಂಗಳ ಕಾಲದ ಮುಷ್ಕರ (1928) ಗಮನಾರ್ಹವಾದದ್ದು.

ಈ ಅವಧಿಯ ಮುಷ್ಕರಗಳು ದೀರ್ಘ ಅವಧಿ ಮತ್ತು ಸುಸಂಘಟಿತ ಲಕ್ಷಣಗಳಿಗೆ ಗಮನಾರ್ಹ. ಈ ಮೇಲೆ ಹೇಳಿದ ಎಲ್ಲ ಹೋರಾಟಗಳಲ್ಲಿ ಯುವಕ ಕಮ್ಯೂನಿಸ್ಟರು ಭಾಗವಹಿಸಿ ನಾಯಕತ್ವದ ಸ್ಥಾನಕ್ಕೆ ಬಂದುದಲ್ಲದೆ ಕಾರ್ಮಿಕ ಚಳುವಳಿಯಲ್ಲಿ ಪ್ರಾಮುಖ್ಯತೆ, ಗೌರವ ಪಡೆದುಕೊಂಡರು. ಈ ಹೋರಾಟಗಳ ದಿಟ್ಟತೆ, ಮಿಂಚಿನ ತೀವ್ರತೆ ಹಾಗೂ ಅತ್ಯುತ್ತಮ ಸಂಘಟನೆಗೆ ಇವರ ನಾಯಕತ್ವವೇ ಕಾರಣವೆನ್ನಬಹುದು. ಈ ಹೋರಾಟಗಳು ಯುವಕ ಕಮ್ಯೂನಿಸ್ಟರಿಗೆ ಉತ್ತಮ ತರಬೇತಿ ಸ್ಥಾನಗಳಾದವು. ಕಮ್ಯೂನಿಸ್ಟರ ಪ್ರಯತ್ನದಿಂದ 1927ರಲ್ಲಿ ಮೊದಲು ಬಾರಿಗೆ ಭಾರತದಲ್ಲಿ ಕಾರ್ಮಿಕ ಕೇಂದ್ರಗಳಲ್ಲಿ ಮೇ ದಿನಾಚರಣೆ ಆರಂಭವಾಯಿತು.

ಈ ಅವಧಿಯಲ್ಲಿ ಟ್ರೇಡ್‌ಯೂನಿಯನ್‌ಗಳನ್ನು ನಿಯಂತ್ರಿಸಲು ಬ್ರಿಟಿಷ್ ಸರ್ಕಾರ ಇಂಡಿಯನ್ ಟ್ರೇಡ್ ಯೂನಿಯನ್ ಆ್ಯಕ್ಟ್ [1926] ತಂದಿತು. ಇದರ ಪ್ರಕಾರ ಯೂನಿಯನ್‌ಗಳ ರಿಜಿಸ್ಟ್ರೇಷನ್, ಅವುಗಳ ಸಂವಿಧಾನ, ಲೆಕ್ಕ ಪರಿಶೀಲನೆ ಕಡ್ಡಾಯವಾಯಿತು. ಯೂನಿಯನ್‌ಗಳಲ್ಲಿ ಹೊರಗಿನ ನಾಯಕರ ಸಂಖ್ಯೆ, ಯೂನಿಯನ್ ಹಣದ ವೆಚ್ಚದ ಮೇಲೆ ನಿಯಂತ್ರಣ ಹೇರಿದ್ದಲ್ಲದೆ, ರಾಜಕೀಯ ಚಟುವಟಿಕೆಗಳನ್ನು ನಿಷೇಧಿಸಿತು.

ಸಾಮ್ರಾಜ್ಯಶಾಹಿಗಳ ಆಕ್ರಮಣ ಮತ್ತು ಒಡಕು (1929—31)

1926-29ರ ಹೋರಾಟದಲ್ಲಿ ನಾಯಕತ್ವಕ್ಕೆ ಬಂದ ಕಮ್ಯೂನಿಸ್ಟರ ಪ್ರಭಾವ ಹೆಚ್ಚುತ್ತಾ ಹೋಯಿತು. ಟ್ರೇಡ್‌ಯೂನಿಯನ್ ಚಳುವಳಿಯ ಆದಿಯಿಂದ ಒಪ್ಪಿಕೊಂಡು ಬಂದಿದ್ದ ಬೂರ್ಜ್ವಾ ನಾಯಕತ್ವಕ್ಕೆ, ಸಿದ್ಧಾಂತಕ್ಕೆ ಇದು ತೀವ್ರ ಸವಾಲಾಗಿ ಪರಿಣಮಿಸಿತು. ಎ. ಐ. ಟಿ. ಯು. ಸಿ. ಯ 7, 8, 9ನೇ ಅಧಿವೇಶನಗಳಲ್ಲಿ ಕಾರ್ಮಿಕ ಚಳುವಳಿಯ ಎರಡು ದಾರಿಗಳಲ್ಲಿ—

(19ನೇ ಪುಟ ನೋಡಿ)

ಆರ್ಥಿಕವಾದದಲ್ಲಿ ಒಂದು ಪಾಠ

---ಕೆ. ವಿ.

ದತ್ತಾ ಸಾಮಂತ

ಕಾರ್ಮಿಕ ಸಂಘಟನೆಯ ಚಟುವಟಿಕೆಗಳಲ್ಲಿ ನಿರತರಾಗಿರುವವರಿಗೆ ದತ್ತಾ ಸಾಮಂತ ಈಗ ಪರಿಚಿತ ಹೆಸರು. ಇವರ ಹೆಸರು ಮೊತ್ತಮೊದಲು ಕೇಳ ಬಂದದ್ದು 1962ರಲ್ಲಿ ಮುಂಬೈಯಲ್ಲಿ ನಡೆದ ಗೋದ್ರೇಜ್ ಘಟನೆಯಲ್ಲಿ. ಆದರೆ ವೃತ್ತಿಯಿಂದ ವೈದ್ಯರಾಗಿದ್ದ ಇವರು 1964 ರಿಂದಲೇ ಇಂಟಕ್ ಮೂಲಕ ಕಾರ್ಮಿಕ ಚಟುವಟಿಕೆಗಳಲ್ಲಿ ತೊಡಗಿದ್ದರಂತೆ. ಹಾಗಿದ್ದರೂ ಜತೆಗೆ "ಮಹಾರಾಷ್ಟ್ರ ವಿಧಾನ ಸಭೆಯಲ್ಲಿ ಇಂದಿರಾ ಕಾಂಗ್ರೆಸ್ಸಿನ ಎಂ.ಎಲ್.ಎ. ಆಗಿದ್ದರೂ ತುರ್ತುಪರಿಸ್ಥಿತಿಯಲ್ಲಿ ಇವರೂ ಜೈಲು ಕಾಣಬೇಕಾಯಿತು. ಅವರ ಚಟುವಟಿಕೆ ಇದ್ದಕ್ಕಿದ್ದಂತೆ ವಿಪರೀತವಾಗಿ ಬೆಳೆದದ್ದು 1977ರಲ್ಲಿ ತುರ್ತುಪರಿಸ್ಥಿತಿ ಹೋದ ನಂತರ ಕಾರ್ಯಕ್ಷೇತ್ರ ಮುಂಬೈ ಹಾಗೂ ಸುತ್ತಮುತ್ತಲಿನ ಕೈಗಾರಿಕಾ ವಲಯಗಳಿಗೇ ಸೀಮಿತವಾಗಿದ್ದರೂ ಸುಮಾರು 5000 ಸಂಘಗಳ 14–16 ಲಕ್ಷ ಕಾರ್ಮಿಕರು ಇವರ ನಾಯಕತ್ವದಲ್ಲಿದ್ದಾರೆ ಎಂದು ಹೇಳಲಾಗುತ್ತಿದೆ. ಅಂದರೆ ಸಂಖ್ಯಾದೃಷ್ಟಿಯಿಂದ ಇವರು ಕೇಂದ್ರ ಕಾರ್ಮಿಕ ಸಂಘಟನೆಗಳಷ್ಟು ಬಲ ಪಡೆದಿದ್ದಾರೆ ಎಂದಾಗುತ್ತದೆ. 1977 ರಿಂದೀಚೆಗೆ ಮುಂಬೈಯ ಮುಷ್ಕರಗಳು ಹಾಗೂ ಇತರ ನೇರ ಕಾರ್ಯಾಚರಣೆಗಳಲ್ಲಿ ಇವರ ಸಂಘಟನೆಗಳದ್ದೇ ಸಿಂಹಪಾಲಂತೆ.

ಒಬ್ಬ ನಾಯಕ ಅಥವಾ ಒಂದು ಸಂಘಟನೆ ಆಕಾಶದಿಂದ ಇದ್ದಕ್ಕಿದ್ದಂತೆ ಕಳಚಿ ಬೀಳುವುದಿಲ್ಲ. ಕೇವಲ ಆಕಸ್ಮಿಕಗಳಂತೆ ಕಾಣುವ ಘಟನೆಗಳ ಹಿಂದೆ ವಾಸ್ತವವಾಗಿ ಒಂದು ದೀರ್ಘಪ್ರಕ್ರಿಯೆ ಅಡಗಿರುತ್ತದೆ. ಈ ಪ್ರಕ್ರಿಯೆ ಒಂದು ನಿಯಮಬದ್ಧವಾಗಿ ನಡೆದು ಬಂದಿರುತ್ತದೆ. ಹೀಗೆಂದು ಚಾರಿತ್ರಿಕ ಭೌತವಾದ ನಮಗೆ ಸ್ಪಷ್ಟವಾಗಿ ತೋರಿಸಿಕೊಟ್ಟಿದೆ. ಈ ದೃಷ್ಟಿಯಿಂದ ದತ್ತಾ ಸಾಮಂತ್ ಮುಂಬಯಿಯ ಕಾರ್ಮಿಕರ ನಡುವೆ ಇಷ್ಟೊಂದು ಪ್ರಭಾವ ಬೀರಲು ಹೇಗೆ ಸಾಧ್ಯವಾಯಿತು; ಮುಂಬೈ ಹಾಗೂ ಇಡೀ ಭಾರತದ ಕಾರ್ಮಿಕ ಚಳವಳಿಯ ಮೇಲೆ ಇದರ ಪರಿಣಾಮ ಏನು ಎಂದು ಪರಿಶೀಲಿಸಬೇಕು.

ಬಂಡವಾಳಶಾಹೀ ಪದ್ಧತಿಯಲ್ಲಿ ಸರಕುಗಳ ವಿನಿಮಯ ಅದರ ಜೀವಾಳ. ಅದರಲ್ಲಿ ಎಲ್ಲಾ ಸರಕುಗಳಂತೆ ಶ್ರಮಶಕ್ತಿಯೂ ಒಂದು ಸರಕು. ಕಾರ್ಮಿಕ ತಾನು ಬದುಕಬೇಕಾದರೆ ಉತ್ಪಾದನಾ ಸಾಧನಗಳ ಒಡೆಯನಾದ ಬಂಡವಳಿಗನಿಗೆ ತನ್ನ ಶ್ರಮಶಕ್ತಿಯನ್ನು ಮಾರಬೇಕಾಗುತ್ತದೆ. ಇದಕ್ಕೆ ಪ್ರತಿಫಲವಾಗಿ ಆತ ಪಡೆಯುವುದು ತಾನು ಉತ್ಪಾದಿಸಿದುದರ ಒಂದಂಶವನ್ನು ಮಾತ್ರ. ಹಾಗೂ–ಹೀಗೂ ಜೀವನ ಸಾಗಿಸಲಷ್ಟೇ ಇದು ಸಾಕಾಗುತ್ತದೆ. ಉತ್ಪಾದನೆಯ ಉಳಿದಂಶ ಲಾಭದ ಹೆಸರಲ್ಲಿ ಬಂಡವಳಿಗನ ಜೇಬು ಸೇರುತ್ತದೆ. ಬಂಡವಳಿಗ ಈ ಲಾಭದ ಪಾಲನ್ನು ಹೆಚ್ಚಿಸಲು ಪ್ರಯತ್ನಿಸುತ್ತಲೇ ಇರ್ತಾನೆ. ಉದ್ಯಮ ಅಭಿವೃದ್ಧಿ ಹೊಂದುತ್ತಿರುವಾಗ ಅದರ ಫಲವನ್ನು ಅದರ ಉತ್ಪಾದಕರಾದ ಕಾರ್ಮಿಕರೊಂದಿಗೆ ಹಂಚಿಕೊಳ್ಳುವ ನೆನಪೇ ಆತನಿಗೆ ಬರದು. ಅಂದರೆ ಉದ್ಯಮದಲ್ಲಿ ಲಾಭ ಕಡಿಮೆಯಾಗಲಾರಂಭಿಸಿದಾಗ ಅದರ ಹೊರೆಯನ್ನು ಕಾರ್ಮಿಕರ ಮೇಲೆ ಹೇರಲು ಪ್ರಯತ್ನಿಸುತ್ತಾನೆ. ತಮ್ಮ ಜೀವನ ಮಟ್ಟವನ್ನು ಒಂದು ಕನಿಷ್ಟ ಮಟ್ಟದಲ್ಲಾದರೂ ಉಳಿಸಿಕೊಳ್ಳಬೇಕಾದರೆ, ಸ್ವಲ್ಪವಾದರೂ ಅದನ್ನು ಸುಧಾರಿಸಿಕೊಳ್ಳಬೇಕಾದರೆ ತಾವೆಲ್ಲಾ ಒಟ್ಟು ಸೇರಿ ಬಂಡವಳಿಗನೊಂದಿಗೆ ಹೋರಾಡಬೇಕಾಗುತ್ತದೆ ಎಂದು ಕಾರ್ಮಿಕರು ಅನುಭವದಿಂದ ಕಂಡುಕೊಳ್ಳುತ್ತಾರೆ. ಈ ರೀತಿ ಉದ್ಯಮದ ಒಡೆಯ ಹಾಗೂ ಕಾರ್ಮಿಕರ ನಡುವೆ ತಿಕ್ಕಾಟ ಬಂಡವಾಳಶಾಹೀ ಪದ್ಧತಿಯ ಅನಿವಾರ್ಯ ಅಂಗ.

ಆರ್ಥಿಕ ವಾದ

ಬಂಡವಾಳಶಾಹಿಗಳ ವಿರುದ್ಧ ಕಾರ್ಮಿಕರು ಮಾಡುವ ಈ ಹೋರಾಟಗಳನ್ನು ಸಂಬಳ, ಬೋನಸ್ ಇತ್ಯಾದಿ ಆರ್ಥಿಕ ಬೇಡಿಕೆಗಳಿಗೇ ಸೀಮಿತಗೊಳಿಸಿದರೇ ಸಾಕೇ? ಸಾಕು, ಇಷ್ಟು ಮಾತ್ರ ಅಪೇಕ್ಷಣೀಯ ಎಂದು ಕೆಲವರ ಅಭಿಪ್ರಾಯ. ಇದನ್ನು ನಾವು "ಆರ್ಥಿಕ ವಾದ"ವೆನ್ನುತ್ತೇವೆ. ಮೇಲ್ನೋಟಕ್ಕೆ ಇದು ಸ್ವಾಭಾವಿಕವೆನಿಸಬಹುದು. ಆದರೆ ಸ್ವಲ್ಪ ಆಳವಾಗಿ ಪರಿಶೀಲಿಸಿದರೆ ಈ ನೀತಿ ಕಾರ್ಮಿಕರ ಹಿತಾಸಕ್ತಿಗಳಿಗೆ ಅನುಗುಣವಾಗಿಲ್ಲ ಮಾತ್ರವಲ್ಲ ಹಲವು ಸಂದರ್ಭಗಳಲ್ಲಿ ಮಾರಕವೂ ಆಗುವ ಸಾಧ್ಯತೆಗಳಿವೆ ಎಂದು ನಾವು ಕಾಣುತ್ತೇವೆ. ಯಾಕೆಂದರೆ ಈ ಧೋರಣೆ ಶ್ರಮಿಕರ ಸಂಕಷ್ಟಗಳನ್ನು ನಿವಾರಣೆ ಮಾಡುವುದಿಲ್ಲ. ಅದನ್ನು ಸ್ವಲ್ಪ ಮಟ್ಟಿಗೆ ಹಗುರಗೊಳಿಸುವ ತೇಪೆ ಕೆಲಸ ಮಾಡುತ್ತದಷ್ಟೆ. ಬಂಡವಳಿಗನ ಕೈಯಲ್ಲಿ ಉತ್ಪಾದನಾ ಸಾಮಗ್ರಿಗಳು ಇರುವವರೆಗೆ ಲಾಭ ಹೆಚ್ಚಿಸುವ ಅವನ ಪ್ರಯತ್ನ ಕೊನೆಗೊಳ್ಳುವುದಿಲ್ಲ. ಅಂದಮೇಲೆ ಸಂಕಷ್ಟಗಳ ನಿವಾರಣೆ ಹೇಗೆ ಸಾಧ್ಯ? ಕೂಲೀ ಗುಲಾಮತನ ಕೊನೆಗೊಳ್ಳಬೇಕಾದರೆ ಉತ್ಪಾದನಾ ಸಾಮಗ್ರಿಗಳ ಖಾಸಗೀ ಒಡೆತನ ಅಂತ್ಯವಾಗಬೇಕು. ಹಾಗೆ ಕೊನೆಗೊಂಡಾಗ ಶ್ರಮಿಕರು ತಮ್ಮ ದುಡಿಮೆಗೆ ತಕ್ಕ ಪ್ರತಿಫಲ ಪಡೆಯಲು, ಕಲೆ, ವಿಜ್ಞಾನದ ಪ್ರಗತಿಯ ಪ್ರಯೋಜನವನ್ನು ಸಮವಾಗಿ ಹಂಚಿಕೊಳ್ಳಲು ಸಾಧ್ಯವಾಗುತ್ತದೆ. ಆದರೆ ಇದಕ್ಕಾಗಿ ಕಾರ್ಮಿಕರು ಹೋರಾಡಬೇಕಿಲ್ಲ ಎನ್ನುವ ಆರ್ಥಿಕವಾದೀ ಧೋರಣೆ ವಾಸ್ತವದಲ್ಲಿ ಕಾರ್ಮಿಕರನ್ನು ಶಾಶ್ವತವಾಗಿ ಕೂಲಿ ಗುಲಾಮರನ್ನಾಗಿಸುತ್ತದೆ. ಇನ್ನೊಂದು ಗಮನಿಸಬೇಕಾದ ಅಂಶವೆಂದರೆ ಕಾರ್ಮಿಕರನ್ನು ಕೂಲಿ ಗುಲಾಮರಾಗಿಸುವ ಬಂಡವಾಳಶಾಹೀ ವ್ಯವಸ್ಥೆಯಿರುವವರೆಗೆ ಕಾರ್ಮಿಕ ವರ್ಗ ಆಗಲೇ ಹೋರಾಡಿ ಗಳಿಸಿದ ಸೌಲಭ್ಯಗಳ ಬಗ್ಗೆಯೂ ಗ್ಯಾರಂಟಿ ಇರುವುದಿಲ್ಲ. ಎಸ್. ಎಸ್. ಎ., ಇ. ಎಸ್. ಎಂ. ಎ. ಹಾಗೂ ಇನ್ನೂ ಹಲವು ಕಪ್ಪು ಶಾಸನಗಳು ಜ್ವಲಂತ ಉದಾಹರಣೆಗಳಾಗಿ ಭಾರತದ ಕಾರ್ಮಿಕ ವರ್ಗದೆದುರು ರಾರಾಜಿಸುತ್ತಿವೆ.

ಬಂಡವಾಳಶಾಹೀ ವ್ಯವಸ್ಥೆಯಲ್ಲಿ ಕಾರ್ಮಿಕರ ಮಹತ್ವ ಹಾಗೂ ಕಾರ್ಮಿಕ–ಮಾಲಿಕರ ನಡುವೆ ಸಂಘರ್ಷ ಅನಿವಾರ್ಯ ಎಂಬುದನ್ನು ಈಗ ಬೂರ್ಜ್ವಾಗಳೂ ಅಲ್ಲಗಳೆಯುವುದಿಲ್ಲ ಆದ್ದರಿಂದಲೇ ಕಾರ್ಮಿಕ ವರ್ಗದ ಬಗ್ಗೆ ಮಮತೆಯಿಲ್ಲದವರೂ ಕಾರ್ಮಿಕ ಸಂಘಟನೆಯನ್ನು ಉಪೇಕ್ಷಿಸುವುದಿಲ್ಲ. ಮಾತ್ರವಲ್ಲ ಕಾರ್ಮಿಕವರ್ಗ ತನ್ನ ಆರ್ಥಿಕ ಹೋರಾಟಗಳ ಅನುಭವದ ಬೆಳಕಲ್ಲಿ ಸಮಸ್ಯೆಯ ನಿಜವಾದ ಮೂಲವನ್ನು ಅರಿತುಕೊಂಡು, ವರ್ಗಪ್ರಜ್ಞೆ ಬೆಳೆಸಿಕೊಂಡು ಬಂಡವಾಳಶಾಹೀ ವ್ಯವಸ್ಥೆಯನ್ನೇ ಕಿತ್ತೆಸೆಯುವ ಹೋರಾಟಕ್ಕಿಳಿಯದಂತೆ ತಡೆದು ಕಾರ್ಮಿಕರು ಆರ್ಥಿಕ ವಾದದ ಕೆಸರಲ್ಲಿ ಸಿಲುಕಿಕೊಳ್ಳುವಂತೆ ತಮ್ಮ ಟ್ರೇಡ್ ಯೂನಿಯನ್‌ಗಳ ಮೂಲಕ ಮಾಡುತ್ತಾರೆ. ಭಾರತದ ಕಾರ್ಮಿಕ ಚಳುವಳಿಯಲ್ಲಿ ಇಂಟಕ್ ಈ ಪ್ರಕ್ರಿಯೆಯನ್ನು ಪ್ರಜ್ಞಾಪೂರ್ವಕವಾಗಿ ಆರಂಭಿಸಿತೆನ್ನಬಹುದು. ಸ್ವಾತಂತ್ರ್ಯ ನಂತರ ಮೂರು ದಶಕಗಳ ಕಾಲ ಸತತವಾಗಿ ಅಧಿಕಾರದಲ್ಲಿದ್ದುದರಿಂದ ಹಾಗೂ ಸ್ವಾತಂತ್ರ್ಯ ದೊರೆತ ಮೊದಲ ಕೆಲ ವರ್ಷಗಳು ಭಾರತದ ಕೈಗಾರಿಕೆಗಳು ಅಭಿವೃದ್ಧಿ ಹೊಂದುತ್ತಿದ್ದ ಸಮಯವಾದ್ದರಿಂದ ಈ ರೀತಿಯ ಆರ್ಥಿಕ ವಾದ ಕಾರ್ಮಿಕರಲ್ಲಿ ಭ್ರಮೆ ಹರಡಿಸುವಲ್ಲಿ ಸಾಕಷ್ಟು ಯಶಸ್ವಿಯೂ ಆಯಿತು.

ಕಾಂಗ್ರೆಸ್ಸಿನ ಬಂಡವಾಳಶಾಹೀ ಧೋರಣೆಗಳಿಂದಾಗಿ ದೇಶದ ಆರ್ಥಿಕ ಪರಿಸ್ಥಿತಿ ದದಗೆಟ್ಟು ಬಿಕ್ಕಟ್ಟು ತೀವ್ರವಾಗುತ್ತಾ ಹೋದಂತೆ ಕೇವಲ ಸಂಬಳ, ಬೋನಸ್‌ಗಾಗಿ ನಡೆಸುವ ಹೋರಾಟವೂ ಇಂಟಕ್‌ಗೆ ಜಾಸ್ತಿಯೆನಿಸಿತು. ಆದರೆ ಇದೇ ಇಂಟಕ್‌ನ ಭಾಗವಾಗಿದ್ದ ದತ್ತ ಸಾಮಂತ್‌ಗೆ ಹಾಗನಿಸಲಿಲ್ಲ. ಸಾಮಂತ್‌ರದ್ದೂ ಆರ್ಥಿಕವಾದೀ ನಿಲುವೇ ಆಗಿದ್ದರೂ ಸಮರಶೀಲತೆಯ ಅಂಶವೂ ಅದರಲ್ಲಿತ್ತು. ಮುಂಬೈಯ ಕಾರ್ಮಿಕ ರಂಗದಲ್ಲಿ ಅವರ ಪ್ರಭಾವ ಶೀಘ್ರವಾಗಿ ಹರಡಲು ಇದೂ ಒಂದು ಕಾರಣ. ಜಾರ್ಜ್ ಫರ್ನಾಂಡೀಸರು ಹೇಳುವಂತೆ ದಸ್ತ ಸಾಮಂತ್ ಈ ಹಿಂದೆ ಯಾರೂ ಮಾಡಲಾಗದ ರೀತಿಯಲ್ಲಿ ಆರ್ಥಿಕ ವಾದವನ್ನು ಒಂದು ತತ್ವದ ಮಟ್ಟಕ್ಕೇರಿಸಿದ್ದಾರೆ.

ವರ್ಗ ಪ್ರಜ್ಞೆಯ ಅಭಾವ

ದತ್ತಾ ಸಾಮಂತರ ಕಾರ್ಯಶೈಲಿಯನ್ನು ವಿಶ್ಲೇಷಿಸಿದ ಕೆಲವರು ಸ್ಥೂಲವಾಗಿ ಅದನ್ನು ಹೀಗೆ ವಿವರಿಸುತ್ತಾರೆ.

1) ಸಾಮಂತ್ ಕಾರ್ಮಿಕರಿಗೆ ವೇತನ ಹೆಚ್ಚಳದ ಬಗ್ಗೆ ದೊಡ್ಡ-ದೊಡ್ಡ ಆಶ್ವಾಸನೆ ಕೊಡುತ್ತಾರೆ. ಇತರ ಕಾರ್ಮಿಕ ನಾಯಕರಂತೆ ಈ ಹೆಚ್ಚಳವನ್ನು ಸಮರ್ಥಿಸಿಕೊಳ್ಳುವ ಗೋಜಿಗೇ ಹೋಗುವುದಿಲ್ಲ

2) ಆಡಳಿತ ವರ್ಗ ಹಾಗೂ ಆ ಕೈಗಾರಿಕೆಯಲ್ಲಿ ಆಗಲೇ ಇರುವ ಯೂನಿಯನ್ ವಿರುದ್ಧ ಭಯೋತ್ಪಾದನೆ.

3) ಉಳಿದ ಕಾರ್ಮಿಕ ಸಂಘಗಳಂತೆ ಹಂತಹಂತವಾಗಿ ಕಾರ್ಯಾಚರಣೆಗಿಳಿದು ಕಾರ್ಮಿಕರನ್ನು ಹೋರಾಟಕ್ಕೆ ಅಣಿಗೊಳಿಸಿ ಅವರನ್ನು ಹೋರಾಟದ ಅಂಗವನ್ನಾಗಿ ಮಾಡದೆ ಒಮ್ಮೆಲೇ ಮುಷ್ಕರದ ನೇರ ಕಾರ್ಯಾಚರಣೆಗಿಳಿಯುವುದು.

4) ಮುಷ್ಕರ ಬಹಳ ದಿನ ನಡೆಯುವ ಸಂದರ್ಭದಲ್ಲಿ ಆ ಬಗ್ಗೆ ಮುಂದಿನ ಕ್ರಮವಾಗಲೀ, ಮುಷ್ಕರ ನಿರತ ಕಾರ್ಮಿಕರಿಗೆ ಧನ ಹಾಗೂ ಇತರ ರೀತಿಯ ಬೆಂಬಲ ಸಂಘಟಿಸದೆ ಸುಮ್ಮನಿರುವುದು.

5) ಐಕ್ಯ ಹೋರಾಟಗಳನ್ನು ಉಪೇಕ್ಷಿಸುವುದು.

6) ಯೂನಿಯನ್ ಚಟುವಟಿಕೆಗಳಲ್ಲಿ ಪ್ರಜಾಸತ್ತಾತ್ಮಕ ನೀತಿಯ ಅಭಾವ.

7) ವೇತನ ಹೆಚ್ಚಳ ಪಡೆದಲ್ಲೆಲ್ಲಾ ಅದಕ್ಕೆ ಸಮನಾಗಿ ಅಥವಾ ಅದಕ್ಕೂ ಹೆಚ್ಚು ಉತ್ಪಾದನಾ ಹೆಚ್ಚಳ, ಹೆಚ್ಚಿನ ಶ್ರಮಭಾರಕ್ಕೆ ಒಪ್ಪಿಕೊಳ್ಳುವುದು.

ಈ ಮೇಲಿನ ಅಂಶಗಳಲ್ಲಿ ಕೆಲವು ದತ್ತಾ ಸಾಮಂತರಿಗೆ ಆರಂಭದಲ್ಲಿ ಕಾರ್ಮಿಕರ ನಡುವೆ ಶೀಘ್ರ ಖ್ಯಾತಿ ಗಳಿಸಿಕೊಟ್ಟರೆ ಉಳಿದ ಕೆಲವು ಅದನ್ನು ಕಮ್ಮಿ ಮಾಡಿದೆ. ಇಲ್ಲಿ ಗಮನದಲ್ಲಿಡಬೇಕಾದ ಅಂಶವೆಂದರೆ ದತ್ತಾ ಸಾಮಂತರು ಕಾರ್ಮಿಕರಿಗೆ ಭಾರೀ ವೇತನ ಹೆಚ್ಚಳಗಳಿಸಿಕೊಟ್ಟು ಉದಾಹ

(23ನೇ ಪುಟ ನೋಡಿ)

ದುಡಿವವನ ಹಾಡು

ಒಟ್ಟಾಗಿರೊ ಎಲ್ಲ ಒಟ್ಟಾಗಿರೊ
ಹೊಟ್ಟಾಗದೆ ಗಟ್ಟಿ ಕಾಳಾಗಿರೊ !
ಕಂಡವರ ಸೇವೆಯಲಿ ನೊಂದವರು ನವೆದವರು,
ನೂರು ದುಡಿದು ಮೂರು ಇಸುಕೊಂಡು ಬಂದವರು
ಅಕ್ಕಿ ಮೂಟೆಯ ಹೊತ್ತು ಅನ್ನಕ್ಕೆ ಅತ್ತವರು
ಒಟ್ಟಾಗಿರೂ ಈಗ ಒಟ್ಟಾಗಿರೊ.

ತೊರೆಗೆ ಸೇತುವೆ ಬಿಗಿದು ಕೆರೆಯ ಕಟ್ಟಿದವರು,
ಕಾಡು ಮೇಡು ಘಟ್ಟ ಪರ್ವತದ ಸುತ್ತೆಲ್ಲ
ಹೆದ್ದಾರಿಗೆ ಕಲ್ಲು ಹೊತ್ತವರು, ಸತ್ತವರು
ಒಟ್ಟಾಗಿರೊ ಎಲ್ಲ ಒಟ್ಟಾಗಿರೊ.

ಕೊಳ್ಳದಲಿ ಬಿದ್ದವರು ಗಣಿಗಳಲಿ ಕೊಳೆತವರು
ಗಿರಣಿಯ ಧೂಳುಂಡು ಕ್ಷಯತಿಂದು ಸವೆದವರು
ಒಂದಾಗಿರೊ ಎಲ್ಲ ಒಂದಾಗಿರೊ.

ಇರುಳಿಗೆ ತಿಂದವರು ಹಗಲಿಗಿಲ್ಲೆಂದವರು,
ಮಕ್ಕಳ ಬಾಯಿಗೆ ಕುಕ್ಕೆಗಳ ತೊಡಿಸಿ
ಅಕ್ಷರ ಜ್ಞಾನಕ್ಕೆ ಎರವಾದ ದಲಿತರು
ಒಟ್ಟಾಗಿರೊ ಎಲ್ಲ ಒಟ್ಟಾಗಿರೊ
ಹೊಟ್ಟಾಗದೆ ಗಟ್ಟಿ ಕಾಳಾಗಿರೊ!

—ಭಗೀರಥ

WITH BEST COMPLIMENTS FROM

JYOTI HOME INDUSTRIES

(Beedi Manufacturers)

Head Office

2203/12, New Santhepet

MYSORE - 570 021

Phone : 21549

ಸಂತೋಷದತ್ತ ಮುನ್ನಡೆ

ಬಡತನವು ಮಾನವ ಜೀವನದಲ್ಲೊಂದು ಕ್ರೂರ ಸಮಸ್ಯೆ ಆಗಿರುವುದು ನಿರುದ್ಯೋಗ ಹಾಗೂ ಅಲ್ಪ ಉದ್ಯೋಗದಿಂದ ಬಳಲುವ, ಭಾರತದ ಗ್ರಾಮಾಂತರ ಪ್ರದೇಶದಲ್ಲಿ ಅಧಿಕ ಸಂಖ್ಯೆಯಲ್ಲಿರುವ ಭೂರಹಿತ ಕಾರ್ಮಿಕರ ಹಾಗೂ ಚಿಕ್ಕ ಪುಟ್ಟ ರೈತರಿಗೆ ಖಾಯಂ ಉದ್ಯೋಗವನ್ನು ಕಲ್ಪಿಸಿ ಅವರ ಬಡತನವನ್ನು ನಿವಾರಿಸುವಲ್ಲಿ ಅವರನ್ನು ಸ್ವಾವಲಂಬಿಗಳಾಗಿ ಅಭಿವೃದ್ಧಿ ಪಡಿಸುವಲ್ಲಿ ಬೀಡಿ ಉದ್ಯಮವು ಮಹತ್ವಾದ ಪಾತ್ರವನ್ನು ವಹಿಸುತ್ತದೆ.

ನಿಜ ಜಿಲ್ಲೆಯಾದ ದಕ್ಷಿಣ ಕನ್ನಡದಲ್ಲಿ "ಮಂಗಳೂರು ಪ್ರಕಾಶ್ ಬೀಡಿಗಳು" ಈ ಗ್ರಾಮೀಣ ಕಾರ್ಮಿಕರಿಗೆ ಉದ್ಯೋಗ ಕಲ್ಪಿಸುವಷ್ಟೇ ಅಲ್ಲದೆ ಅವರ ಜೀವನ ಸುಧಾರಣೆಯತ್ತಲೂ ತನ್ನ ಕಿಂಚಿತ್ ಪಾತ್ರ ನಿರ್ವಹಿಸುತ್ತಿದೆ. ಮಾತ್ರವಲ್ಲ ಉದ್ಯಮದ ಪ್ರಗತಿಯಲ್ಲಿ ತಾವು ಸಕ್ರಿಯ ಪಾಲುಗಾರರೆಂಬ ಮನೋಭಾವವನ್ನು ತಾಳುವಂಥ ಅವಕಾಶವನ್ನು ಕಲ್ಪಿಸಿರುತ್ತದೆ. ಲಾಭಗಳಿಸುವಷ್ಟರಲ್ಲೇ ಹರ್ಷಿಸದೇ ಗಳಿಸಿದ ಲಾಭವನ್ನು ಕಾರ್ಮಿಕರ ಹಿತರಕ್ಷಣೆಗೆ ಉಪಯೋಗಿಸುವಲ್ಲಿ ಅತೀವ ಹರ್ಷಪಡುತ್ತದೆ.

ಈ ಧೋರಣೆಯಿಂದಲೂ ಪರಿಣಾಮವಾಗಿ ಕಾರ್ಮಿಕರ ವಿಪುಲ ಸಹಕಾರದಿಂದಲೂ ನಮ್ಮ ಉದ್ಯಮ ಬೆಳೆದಿದೆ. ಉದ್ಯಮದ ಬೆಳವಣಿಗೆಯ ಮೂಲಕ ಕಾರ್ಮಿಕರ ಸ್ಥಿತಿಗತಿಗಳೂ ಸುಧಾರಿಸಿವೆ. ಫಲರೂಪವಾಗಿ ನಮ್ಮ ಉತ್ಪನ್ನಗಳ ಗುಣಮಟ್ಟ ಹಾಗೂ ಬೆಲೆ ಮಟ್ಟಗಳನ್ನು ಕಾಪಾಡಿಕೊಳ್ಳುವುದು ಸಾಧ್ಯವಾಗಿರುತ್ತದೆ

ಉದ್ಯೋಗಗಳನ್ನು ಕಲ್ಪಿಸುವಲ್ಲಿ ಉದ್ಯಮವನ್ನು ಬೆಳೆಸುವ ನಮ್ಮ ಪಾತ್ರ ನಿಮಿತ್ತಮಾತ್ರದ್ದೆಂದು ನಾವೆಂದೂ ಮರೆಯಲಾರೆವು. ಪೋಷಕರಾದ ಸೇದುಗರು ತಾವು ಉರಿಸುವ ಪ್ರತಿಯೊಂದು ಬೀಡಿಯೂ ಗ್ರಾಮೀಣ ಗುಡಿಸಲೊಂದರಲ್ಲಿ ಬಡಕುಟುಂಬವೊಂದರ, ಬಾಳ ಬೆಳಕನ್ನು, ಭವಿಷ್ಯದ ಆಶಾಜ್ಯೋತಿಯನ್ನು ಬೆಳಗಿಸುವತ್ತ ಸಹಕರಿಸುವುದೆಂದು ಮನಗಂಡಲ್ಲಿ ನಮ್ಮ ಸಾಧನೆಗೆ ಗರಿಷ್ಠ ಪ್ರೋತ್ಸಾಹ ದೊರೆಯುವುದು. ಈ ಉದಾತ್ತ ಧೋರಣೆಯತ್ತ ಮುನ್ನಡೆಯಲು ಕಾರಣಕರ್ತರಾದ ಪೋಷಕರಾದ ನಿಮಗೆಲ್ಲರಿಗೂ ಶುಭಾಶಯಗಳನ್ನರ್ಪಿಸುವೆವು.

ಪ್ರಕಾಶ್ ಬೀಡೀಸ್, ಲಿಮಿಟೆಡ್

ಕೊಡಿಯಾಲಬೈಲ್, ಮಂಗಳೂರು–575003

ಕರ್ನಾಟಕ ರಾಜ್ಯ ಉದಯಿಸಿದ 25 ವರ್ಷ 6 ತಿಂಗಳ ನಂತರ ಕನ್ನಡ ಭಾಷೆ, ಅದರ ಸ್ಥಾನದ ಕುರಿತು ಮುಖ್ಯವಾಗಿ ಸಾಹಿತಿಗಳ ನೇತೃತ್ವದಲ್ಲಿ ಚಳುವಳಿ ನಡೆಯುತ್ತಿರುವಾಗ, ಆಗಿನ 2 ಕೋಟಿ ಕನ್ನಡಿಗರು ಬೇರೆ ಬೇರೆ ಪ್ರಾಂತ ಮತ್ತು ಸಂಸ್ಥಾನಗಳಲ್ಲಿ ಹರಿದು ಹಂಚಿ ಹೋಗಿದ್ದಾಗ, ಅವರನ್ನೆಲ್ಲ ಒಟ್ಟುಗೂಡಿಸಿ ಕನ್ನಡನಾಡನ್ನು ಕಟ್ಟುವಲ್ಲಿ ದುಡಿಯುವ ಜನತೆಯ ಕಮ್ಯುನಿಸ್ಟ್ ಪಕ್ಷದ ಪಾತ್ರವನ್ನು ತಿಳಿದುಕೊಂಡದ್ದಾದರೆ ಭಾಷೆಯ ಪ್ರಶ್ನೆಗೆ ಸಮರ್ಪಕ ಉತ್ತರ ಸಿಗುವುದರಲ್ಲಿ ಸಂಶಯವಿಲ್ಲ.

ದೇಶದ ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟದಲ್ಲಿ ಭಾಷಾವಾರು ಪ್ರಾಂತ ರಚನೆಯ ಬೇಡಿಕೆಯೂ ಪ್ರಾಮುಖ್ಯತೆ ಪಡೆದಿತ್ತು. ರಷ್ಯಾ ದೇಶದಲ್ಲಿ ಕ್ರಾಂತಿಯಾಗಿ ಕಮ್ಯುನಿಸ್ಟ್ ಪಾರ್ಟಿ ಅಧಿಕಾರಕ್ಕೆ ಬಂದನಂತರ, ಭಾರತದಂತೆಯೇ ಹಲವಾರು ಭಾಷಿಕರನ್ನು ಹೊಂದಿದ್ದ ರಷ್ಯಾ ದೇಶದ ಸಮಸ್ಯೆಯನ್ನು ಎಂಥ ವಿವಾದಕ್ಕೂ ಎಡೆಕೊಡದೆ ಜೋಸೆಫ್ ಸ್ಟಾಲಿನ್ನರು ಬಗೆಹರಿಸಿ ನಮಗೆ ಪ್ರೋತ್ಸಾಹ ನೀಡಿದ್ದರು ಸ್ವಾತಂತ್ರ್ಯ ಹೋರಾಟದಲ್ಲಿ ಎಲ್ಲ ಭಾಷಿಕರ ಬೆಂಬಲ ಪಡೆದ ಕಾಂಗ್ರೆಸ್ ಮುಖಂಡತ್ವ, ಸ್ವಾತಂತ್ರ್ಯ ಪಡೆದ ನಂತರ ತಾನಿತ್ತ ಗೋಳ ಪ್ರತ್ಯೇಕ ಸಂಸ್ಥಾನಗಳಾಗಿಯೂ ಇದ್ದವು. ಹೀಗೆ ಹರಿದು ಹಂಚಿಹೋದ ಕನ್ನಡನಾಡನ್ನು ಒಂದುಗೂಡಿಸಿ ಕನ್ನಡ ನಾಡಿನ ಜನತೆಯ ಭಾಷೆಯ ಸರ್ವತೋಮುಖ ಅಭಿವೃದ್ಧಿಯಾಗಲು ಕಮ್ಯುನಿಸ್ಟ್ ಪಾರ್ಟಿ ಮತ್ತು ಇತರ ಕನ್ನಡಾಭಿಮಾನಿಗಳು ಆಗ ದುಡಿದರು.

ಕಾಂಗ್ರೆಸ್ ಕೊಟ್ಟ ಮಾತಿನಂತೆ ನಡೆಯಲಿಲ್ಲ. ಆಂಧ್ರ, ಕರ್ನಾಟಕ, ಮಹಾರಾಷ್ಟ್ರಗಳಲ್ಲಿ ಮತಪ್ರದರ್ಶನ, ಚಳುವಳಿಗಳು ನಡೆದರೂ, ಕಾಂಗ್ರೆಸ್ ಹಿರಿಯರು ಆಗಿನ ಪ್ರಧಾನ ಮಂತ್ರಿಯಾದ ಜವಹರ್‌ಲಾಲ್ ನೆಹರೂರವರ ಮೇಲೆ ಒತ್ತಾಯ ತಂದರೂ ಮಣಿಯಲಾರದಾದಾಗ ಆಂದ್ರದ ಪೊಟ್ಟಿ ಶ್ರೀರಾಮುಲು ಅಮರಣ ಉಪವಾಸ ಕೈಗೊಂಡು 54 ದಿವಸದಲ್ಲಿ ಅಸು ನೀಗಿದಾಗ, ಇಡೀ ಆಂದ್ರ ಪ್ರದೇಶದ ಜನ ಕ್ರಾಂತಿ ಎದ್ದಾಗ ನೆಹರೂರವರು ಆಂದ್ರ ಪ್ರಾಂತ ರಚಿಸಲು ಒಪ್ಪಿದರು. ಇದರಿಂದ ಸ್ಫೂರ್ತಿಗೊಂಡ ಕನ್ನಡಿಗರು 1951 ರಿಂದ ಎದ್ದು ನಿಂತರು. ಕಾಂಗ್ರೆಸ್ ಮುಖಂಡರೂ, ಮಂತ್ರಿಗಳೂ ರಾಜೀನಾಮೆ ಕೊಡಬೇಕೆಂಬ ಕೂಗೆದಿತು. ಆಗ ಲೋಕ ಸಭೆ ಸದಸ್ಯರಾಗಿದ್ದ ಮುನವಳ್ಳಿ ವಕೀಲರು, ಹೊಸ ಮನೆ ಸಿದ್ದಪ್ಪ, ಕೆ. ಆರ್. ಕಾರಂತ, ವಾಲಿ ಚೆನ್ನಪ್ಪರಂತವರು

1951 ರಲ್ಲಿ ಮಂಗಳೂರಿನ ಹತ್ತಿರ ಉಳ್ಳಾಲದಲ್ಲಿ ಸೇರಿದ ಕಮ್ಯುನಿಸ್ಟ್ ಪಾರ್ಟಿಯ ರಾಜ್ಯ ಸಮ್ಮೇಳನದಲ್ಲಿ ಕರ್ನಾಟಕ ಏಕೀಕರಣಕ್ಕಾಗಿ ಹೋರಾಟ ನಡೆಸಲು ಕರೆ ಕೊಡಲಾಯಿತು. ಎಸ್. ಎಲ್. ಉಪಾಧ್ಯಾಯ, ಬಿ. ವಿ. ಕಕ್ಕಿಲ್ಲಾಯ, ಎನ್.ಕೆ.ಉಪಾಧ್ಯಾಯ ಮೊದಲಾದವರೆಲ್ಲ ಏಕೀಕರಣ ಸಮಿತಿ ಹಾಗೂ ಹೋರಾಟಕ್ಕೆ ತಯಾರಿದ್ದ ಕಾಂಗ್ರೆಸ್ಸಿನವರ ಜೊತೆ ಸೇರಿಯೂ ಪ್ರತ್ಯೇಕವಾಗಿಯೂ ಹೋರಾಟಗಳನ್ನು ನಡೆಸಿದರು. ಸಮ್ಮೇಳನಗಳ ವ್ಯವಸ್ಥೆ ಮಾಡಿದರು. ಆಗ ಮದ್ರಾಸ್ ಪ್ರಾಂತದಲ್ಲಿ ಮಂತ್ರಿಯಾಗಿದ್ದ ಕೆ. ಆರ್. ಕಾರಂತರ ಅಧ್ಯಕ್ಷತೆಯಲ್ಲಿ ಹಂಪೆಯಲ್ಲಿ ಮಹಾ ಸಮ್ಮೇಳನ ನಡೆಯಿತು. ಈ ಸಮ್ಮೇಳನದಲ್ಲಿ ಕಮ್ಯುನಿಸ್ಟ್ ಮುಖಂಡರೆಲ್ಲ ಪ್ರಮುಖ ಪಾತ್ರ ವಹಿಸಿದ್ದರು. ಆಗಲೇ ಬಳ್ಳಾರಿಯನ್ನು ಆಂಧ್ರ ಪ್ರಾಂತದಲ್ಲಿ ಸೇರಿಸುವ ಒಳಸಂಚು ನಡೆಯಿತು. ಇದರ ವಿರುದ್ಧ ರಾಜ್ಯಾದ್ಯಂತ ಪ್ರತಿಭಟನೆ ನಡೆಯಿತು. ಹುಬ್ಬಳ್ಳಿಯಲ್ಲಿ ರೈಲ್ವೆ ಸತ್ಯಾಗ್ರಹದಲ್ಲಿ ಕಮ್ಯುನಿಸ್ಟ್ ಪಾರ್ಟಿಯದ್ದೆ ಪ್ರಧಾನ ಪಾತ್ರ. 1953 ಏಪ್ರಿಲ್ ತಿಂಗಳಲ್ಲಿ ಕೆ.ಪಿ.ಸಿ.ಸಿ. ಸಭೆ ಹುಬ್ಬಳ್ಳಿ ಟೌನ್ ಹಾಲಿನಲ್ಲಿ ನಡೆಯಿತು. ಆ ಸಮಯದೊಳಗಾಗಿ ನೆಹರೂರವರಿಂದ ಕರ್ನಾಟಕ ಪೋಲೀಸರ ಗೋಲೀಬಾರಿಗೆ ತುತ್ತಾಗಿ ಹುತಾತ್ಮನಾದ. ರಾತ್ರಿ 10 ಗಂಟೆಗೆ ಕಮ್ಯುನಿಸ್ಟ್ ಮುಖಂಡರನ್ನೆಲ್ಲ ಬಂಧಿಸಿ ಜೈಲಿಗೆ ಹಾಕಲಾಯಿತು. ಅದರ ಗುಂಚಿ ಶಂಕರಗೌಡರು ಏಕೀಕರಣಕ್ಕಾಗಿ ಅಮರಣ ಉಪವಾಸ ಕೈಗೊಂಡು 23 ದಿವಸ ಗತಿಸಿದ್ದರಿಂದ ಆ ದಿವಸದ ಮತಪ್ರದರ್ಶಕ್ಕೆ ಹೆಚ್ಚಿನ ಕಳೆ ಬಂದಿತ್ತು.

ಕೇಂದ್ರ ಕಾಂಗ್ರೆಸ್ ಮುಖಂಡರ ಹಟಮಾರಿತನವನ್ನು, ರಾಜ್ಯ ಮುಖಂಡರ ಹೇಡಿತನವನ್ನು ಕಂಡು ಹೋರಾಟವನ್ನು ತೀವ್ರಗೊಳಿಸುವ ಉದ್ದೇಶದಿಂದ ಹುಬ್ಬಳ್ಳಿ ಘಟನೆಯಿಂದ ಸ್ಫೂರ್ತಿಗೊಂಡ ಕಮ್ಯುನಿಸ್ಟ್ ಪಾರ್ಟಿ, ಏಕೀಕರಣ ಸಮಿತಿಯವರು, ಇಂಡಗೇರಿಯ ಮಹಾದೇವಪ್ಪ ಮುರುಗೋಡವರ ಬೆಂಬಲದಿಂದ ಹುಬ್ಬಳ್ಳಿಯ ಗಿರೀಶ ಆಶ್ರಮದಲ್ಲಿ ಸಮ್ಮೇಳನ ಸೇರಿಸಿ, ಚಳುವಳಿಗೆ ಏಕಸ್ವರೂಪಕೊಟ್ಟು ಮಾರ್ಗದರ್ಶನ ಮಾಡಲು ಶಿವಮೂರ್ತಿ ಸ್ವಾಮಿ ಅಳವಂಡಿಯವರ ಅಧ್ಯಕ್ಷತೆಯಲ್ಲಿ ಅಖಂಡ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತನ್ನು ಸ್ಥಾಪಿಸಿದರು. 1953 ಆಗಸ್ಟ್ 9 ರಂದು ಏಕೀಕರಣ ಚಳುವಳಿಗೆ ಹೊಸ ಸ್ವರೂಪದ ನಾಂದಿ ಹಾಕಲಾಯಿತು. 1942ರ ಚಳುವಳಿಯ ಸ್ವರೂಪ ತಾಳುತ್ತದೆಂದು ಅಂಜಿದ ಮುಂಬಯಿ ಸರಕಾರ (ಮೊರಾರ್ಜಿ ಮುಖಂಡರನ್ನು ಅ. ಕ. ರಾ. ನಿ. ಪರಿಷತ್ತಿನ ಚಳುವಳಿಯಲ್ಲಿ ಪಾಲ್ಗೊಳ್ಳುವಂತೆ ಮಾಡಿದರು.

ನಮ್ಮ ದೇಶದ ಸ್ವಾತಂತ್ರ್ಯ ಹೋರಾಟಕ್ಕೆ 1945ರ ಮುಂಬಯಿ ಬಂದರಿನಲ್ಲಿ ನಾವಿಕರ ದಂಗೆ, ಅದಕ್ಕೆ ಬೆಂಬಲಾರ್ಥವಾಗಿ ಮುಂಬಯಿ ಹಾಗೂ ದೇಶಾದ್ಯಂತ ನಡೆದ ಮುಷ್ಕರಗಳು, ಈ ಹೋರಾಟದಲ್ಲಿ ಕಮ್ಯೂನಿಸ್ಟ್ ಪಾರ್ಟಿಯ ಪಾತ್ರ, ಸ್ವಾತಂತ್ರ್ಯ ಹೋರಾಟಕ್ಕೆ ಹೊಸ ತಿರುವು ಕೊಟ್ಟಿತ್ತು. ನಾವಿಕರು, ಸೈನಿಕರು, ಕಾರ್ಮಿಕರೆಲ್ಲ ಒಟ್ಟಾಗಿ ಚಳುವಳಿ ಮುಂದುವರಿಸಿದ್ದಾದರೆ ನಾವೂ ಹೋಗುತ್ತೇವೆ. ಭಾರತದ ಬಂಡವಾಳದಾರರ ಹಿಡಿತವೂ ಅಳಿದು ಎಡಶಕ್ತಿಗಳು ಅಧಿಕಾರಕ್ಕೆ ಬರಬಹುದೆಂಬ ಅಂಜಿಕೆಯಿಂದ 1947 ಆಗಸ್ಟ್ ತಿಂಗಳಲ್ಲಿ ಬ್ರಿಟೀಷರು ಕಾಂಗ್ರೆಸ್ಸಿಗೆ ಅಧಿಕಾರ ಹಸ್ತಾಂತರಿಸಿದರು. ಇದರಂತೆಯೇ ಏಪ್ರಿಲ್ 1953ರ ಮತ್ತು ಅನಂತರದ ಅ. ಕ. ರಾ. ನಿ ಪರಿಷತ್ತಿನ ಮುಖಂಡತ್ವದಲ್ಲಿ ನಡೆದ ಚಳುವಳಿಯಲ್ಲಿ ಕಮ್ಯುನಿಸ್ಟ್ ಪಾರ್ಟಿ, ಸೋಷಲಿಸ್ಟ್ ಪಾರ್ಟಿ, ಪುರೋಗಾಮಿ ಪಕ್ಷಗಳ ಪ್ರಭಾವಿತವಾಗುವುದನ್ನು ಕಂಡ ಸರಕಾರ ಮತ್ತು ಕಾಂಗ್ರೆಸ್ಸಿನವರು ಕರ್ನಾಟಕ ಪ್ರಾಂತ ರಚನೆಗೆ ಒಪ್ಪಿ

ಏಕೀಕರಣ ಚಳುವಳಿ - ಕಮ್ಯುನಿಸ್ಟ್ ಪಕ್ಷದ ಪಾತ್ರ - ಭಾಷೆ ಪ್ರಶ್ನೆ

ಆಶ್ವಾಸನೆಯನ್ನು ಪೂರೈಸಲು ಹಿಂದೇಟು ಹಾಕಿತು. ಕಾಂಗ್ರೆಸ್ಸಿನ ಗುತ್ತೇದಾರಿ ಬಂಡವಾಳದಾರ ಪರ ರಾಜಕೀಯ ಬಣ್ಣ ಆಗಲೇ ಬಯಲಾಗಿತ್ತು.

ಸ್ವಾತಂತ್ರ್ಯ ಪಡೆಯುವ ಮುಂಚೆ ಭಾಷಾವಾರು ಪ್ರಾಂತ ರಚನೆಯ ಘೋಷಣೆಯನ್ನು ಎತ್ತಿ ಹಿಡಿದು ಪ್ರಚಾರ ಮಾಡುವಲ್ಲಿ ಮುಂದಾಳತ್ವ ವಹಿಸಿದವರು ಕಮ್ಯುನಿಸ್ಟರು. ದೇಶದ ಎಲ್ಲ ಪ್ರದೇಶಗಳ ಸರ್ವತೋಮುಖ ಅಭಿವೃದ್ಧಿಗೆ ಭಾಷಾವಾರು ಪ್ರಾಂತ ರಚನೆ ಅತ್ಯಗತ್ಯವೆಂದು ಕಾಂಗ್ರೆಸ್ ಸಾರುತ್ತ ಬಂದಿತ್ತು. ಭಾಷೆಯ ಜೊತೆಯಲ್ಲಿ ಭೌಗೋಲಿಕ ಸನ್ನಗ್ನತೆಯೂ ಹಳ್ಳಿ ಘಟಕವೂ ಆಧಾರವಾಗಿರಬೇಕೆಂದು ಕಮ್ಯುನಿಸ್ಟ್ ಪಾರ್ಟಿ ಪ್ರಚಾರ ನಡೆಸಿತ್ತು.

ಬೆಳಗಾವಿ, ಧಾರವಾಡ, ಕಾರವಾರ, ಬಿಜಾಪುರ ಜಿಲ್ಲೆಗಳು ಮುಂಬಯಿ ಪ್ರಾಂತದಲ್ಲೂ, ಗುಲ್ಬರ್ಗಾ, ಬೀದರ್, ರಾಯಚೂರು ಜಿಲ್ಲೆಗಳು ಹೈದರಾಬಾದ್ ಸಂಸ್ಥಾನದಲ್ಲೂ, ಬಳ್ಳಾರಿ, ಮಂಗಳೂರು ಜಿಲ್ಲೆಗಳು ಮದ್ರಾಸ್ ಪ್ರಾಂತದಲ್ಲೂ, ಮೈಸೂರು, ಕೊಡಗು, ಸವಣೂರು, ಲಕ್ಷ್ಮೇಶ್ವರ, ಜಮಖಂಡಿ, ಮುಧೋಳ, ರಾಮದುರ್ಗ, ಕುಂದು ಹೋರಾಟದ ಮುಖಂಡತ್ವ ವಹಿಸಿದ್ದರು.

ಏಕೀಕರಣಕ್ಕಾಗಿ ಪಣತೊಟ್ಟ ಕಾಂಗ್ರೆಸ್ ಒಂದೇ ಕಮಿಟಿ ರಚಿಸಲು ಸಾಧ್ಯವಾಗದೆ ಮೈಸೂರು ಪ್ರದೇಶ ಕಾಂಗ್ರೆಸ್ ಮತ್ತು ಕರ್ನಾಟಕ ಪ್ರದೇಶ ಕಾಂಗ್ರೆಸ್ ಎಂದು ಎರಡು ಪ್ರದೇಶ ಕಮಿಟಿಗಳನ್ನು ಹೊಂದಿತ್ತು. ಕಮ್ಯುನಿಸ್ಟ್ ಪಾರ್ಟಿ ಮಾತ್ರ ಕರ್ನಾಟಕ ಪ್ರಾಂತ ಕಮಿಟಿ ರಚಿಸಿ ಕನ್ನಡಿಗರೆಲ್ಲ ಒಂದೇ ಆಡಳಿತಕ್ಕೊಳಪಟ್ಟವರೆಂದು ಸಾರಿತು.

ಹಳೇ ಮೈಸೂರಿನಲ್ಲಿ ಒಕ್ಕಲಿಗರೂ, ಇತರ ಪ್ರದೇಶದಲ್ಲಿ ಲಿಂಗಾಯಿತರೂ ಪ್ರಭಾವಿಗಳಾಗಿದ್ದರು. ಹಳೇ ಮೈಸೂರು ವಿಲೀನಕ್ಕೆ ತಯಾರಿಲ್ಲದಿದ್ದುದರಿಂದ, ಕೆ. ಪಿ. ಸಿ. ಸಿ. ಅಧ್ಯಕ್ಷ ನಿಜಲಿಂಗಪ್ಪ ಹಾಗೂ ಇತರ ಮುಖಂಡರು ಪಂಡಿತ್ ನೆಹರೂರವರ ಮೇಲೆ ಪ್ರಭಾವ ಬೀರುವಲ್ಲಿ ವಿಫಲರಾದರು. ಆಂಧ್ರ ಪ್ರಾಂತ ರಚನೆಯಾದರೂ ಕೂಡ ಕರ್ನಾಟಕವನ್ನೊಳಗೊಂಡು ಇತರ ಪ್ರಾಂತಗಳ ರಚನೆಗೆ ಕೇಂದ್ರ ಸರಕಾರ ಹಾಗೂ ಕಾಂಗ್ರೆಸ್ ಮುಖಂಡರು ಹಿಂದೇಟು ಹಾಕುತ್ತಲೇ ಬಂದರು.

ಏಕೀಕರಣದ ಆಶ್ವಾಸನೆ ಪಡೆದೇ ತೀರುತ್ತೇವೆಂದು ನಿಜಲಿಂಗಪ್ಪ ಮೊದಲಾದವರು ಪಣ ತೊಟ್ಟಿದ್ದರು. ಹಾಗಾಗದಿದ್ದಲ್ಲಿ ಅವರೆಲ್ಲರ ರಾಜೀನಾಮೆ ಪಡೆದೇ ತೀರಬೇಕೆಂಬ ಛಲದಿಂದ 25 ಸಾವಿರ ಜನ ಟೌನ್ ಹಾಲಿಗೆ ಮುತ್ತಿಗೆ ಹಾಕಿದ್ದರು. ಈಗಿನ ನೆಹರೂ ಸ್ಟೇಡಿಯಂ, ಆಗಿನ ಗುಳಕವ್ವನ ಕೆರೆಯಲ್ಲಿ ಜನಸ್ತೋಮದ ಸಾಗರ, ಕರ್ನಾಟಕ

ಎನ್. ಕೆ. ಉಪಾಧ್ಯಾಯ

ಏಕೀಕರಣವೂ ಇಲ್ಲ, ರಾಜೀನಾಮೆಯೂ ಇಲ್ಲ ಎಂದು ತಿಳಿದ ಕೂಡಲೇ ಸಿಟ್ಟಿಗೆದ್ದ ಜನಸ್ತೋಮ ಯುವ ಕಮ್ಯುನಿಸ್ಟರಾದ ತಡಸದಮಠ, ಲಕ್ಷ್ಮೇಶ್ವರ, ಮುಧೋಳ, ಎಸ್.ಕೆ.ಉಪಾಧ್ಯಾಯರ ಮುಖಂಡತ್ವದಲ್ಲಿ ಟೌನ್ ಹಾಲ್ ನೊಳಗೆ ನುಗ್ಗಿ, ನಿಜಲಿಂಗಪ್ಪ, ಹಳ್ಳಿಕೇರಿ ಮೊದಲಾದ ಮುಖಂಡರಿಂದ ಜಬರದಸ್ತಿಯಿಂದ ರಾಜೀನಾಮೆ ಪಡೆಯುವಲ್ಲಿ ಯಶಸ್ವಿಯಾದರು. ಲಾಠಿ ಚಾರ್ಜ್, ಗೋಲಿಬಾರ್, ದಂಗೆ ನಡೆಯಿತು, ನಾರಾಯಣ ಎಂಬ ಯುವಕ ದೇಸಾಯಿ ಮುಖ್ಯ ಮಂತ್ರಿ) ಮುಖಂಡರನ್ನೆಲ್ಲ ಬಂಧಿಸಿ ಸ್ಥಾನಭದ್ರತೆಯಲ್ಲಿಟ್ಟಿತು. ಆಗ ರಾಜ್ಯ ಸಭೆಯ ಸದಸ್ಯರಾಗಿದ್ದ ಬಿ. ವಿ. ಕಕ್ಕಿಲ್ಲಾಯರು ಈ ಬಂಧನದ ಪ್ರಶ್ನೆಯನ್ನು ರಾಜ್ಯ ಸಭೆಯಲ್ಲೆತ್ತಿದಾಗ, ಕರ್ನಾಟಕದವರೇ ಗೃಹ ಮಂತ್ರಿಯಾಗಿದ್ದ ದಾತಾರರು ಉದ್ಧಟತನದ ಉತ್ತರವನ್ನಿತ್ತರು.

ಇದೇ ಸಮಯದಲ್ಲಿ ಧಾರವಾಡ ಜಿಲ್ಲೆಯ ರೋಣ ಮತ್ತು ಹುಬ್ಬಳ್ಳಿಯ ಕಾಂಗ್ರೆಸ್ ಎಂ ಎಲ್.ಎ. ಮೃತರಾದುದರಿಂದ ಉಪ ಚುನಾವಣೆ ನಡೆಯಿತು. ಮುಖಂಡರ ಬಂಧನ, ಏಕೀಕರಣ ಸಾಧನೆಯ ಪಣವಾಗಿಟ್ಟು ಚುನಾವಣಾ ಹೋರಾಟ ನಡೆಯಿತು. ಇತರ ಮುಖಂಡರೆಲ್ಲ ಜೈಲಿನಲ್ಲಿದ್ದುದರಿಂದ ಕಮ್ಯೂನಿಸ್ಟ್ ಪಾರ್ಟಿ ಕಾರ್ಯದರ್ಶಿ ಎಸ್. ಎಲ್. ಉಪಾಧ್ಯಾಯರು ಜೀವದ ಹಂಗುಬಿಟ್ಟು ಪ್ರಚಾರ ಮಾಡಿ ಏಕೀಕರಣ ಸಮಿತಿಯ ಉಮೆದ್ವಾರರಾದ ಪೂಜಾರಿ ಮತ್ತು ಕಂಬ್ಳಿಯವರು ಪ್ರಚಂಡ ಬಹುಮತದಿಂದ ಆಯ್ಕೆಯಾಗುವಂತೆಮಾಡಿದರು. ಚುನಾವಣೆಯಲ್ಲಿ ಸೋಲು, ಜನತೆಯ ಚಳುವಳಿಗಳಿಂದ ಭೀತರಾದ ಕಾಂಗ್ರೆಸ್ಸಿನವರು, ಕಮ್ಯುನಿಸ್ಟ್ ಕೆಲವು ಕೊಂಡು 1956 ನವಂಬರ್ 1 ರಂದು ಕನ್ನಡ ರಾಜ್ಯ ಉದಯಿಸಿತು. ಈ ಗುರಿ ಸಾಧನೆಯಲ್ಲಿ ಕಮ್ಯುನಿಸ್ಟ್ ಪಾರ್ಟಿ, ಚಿಕ್ಕದಾಗಿದ್ದರೂ ಅತ್ಯಂತ ಪರಿಣಾಮಕಾರಿ ಪಾತ್ರವಹಿಸಿತ್ತೆಂಬುದನ್ನು ಯಾರೂ ಮರೆಯಲಿಕ್ಕೆ ಸಾಧ್ಯವಿಲ್ಲ.

ಕಾಂಗ್ರೆಸ್ಸಿನೊಳಗಿನ ಒಳಜಗಳ, ಜಾತೀಯತೆಯಿಂದಾಗಿ ಕರ್ನಾಟಕ ರಾಜ್ಯ ಮೈಸೂರು ಪ್ರಾಂತವಾಗಿ ಉದಯಿಸಿತು. 'ಮೈಸೂರು' ಒಂದು ಪ್ರದೇಶದ ಹೆಸರಷ್ಟೆ, ಕಾರಣ ಕರ್ನಾಟಕ ರಾಜ್ಯವೆಂಬ ಹೆಸರಿಗಾಗಿಯೂ ಕಮ್ಯುನಿಸ್ಟ್ ಪಾರ್ಟಿ ಹೋರಾಟ ಮುಂದುವರಿಸಿತು. ಕನ್ನಡವೇ ರಾಜ್ಯ ಭಾಷೆ ಆಗಬೇಕೆಂದೂ ಚಳುವಳಿ ನಡೆಸಿತು. ಕನ್ನಡ ಸಾಹಿತ್ಯ ಪರಿಷತ್ತು ಮಾತ್ರ ವರ್ಷಕ್ಕೊಮ್ಮೆ ನಡೆಯುವ ಸರಕಾರಿ ಬೆಂಬಲದ ಜಾತ್ರೆಯಲ್ಲಿ ಇಂಥ ನಿರ್ಣಯಗಳನ್ನು ಪಾಸುಮಾಡಿ ಸಮಾಧಾನ ಪಡೆಯುತ್ತಿತ್ತು. ಆದರೆ ಸಮಾಜವಾದಿ ಪಕ್ಷವನ್ನು ಬಿಟ್ಟು ಬೇರೆ ಯಾವ ಪಕ್ಷವಾಗಲೀ ಸಾಹಿತಿ, ಬರಹಗಾರರಾಗಲೀ ಮೈಸೂರಿನ ಬದಲಿಯಾಗಿ ಕರ್ನಾಟಕವೆಂಬ ಹೆಸರಿಗಾಗಿ ಹೋರಾಡಲಿಲ್ಲ.

(೩೩ನೇ ಪುಟ ನೋಡಿ)

ಆಧುನಿಕ ಚರಿತ್ರೆಯಲ್ಲಿ ಸಾಮ್ರಾಜ್ಯಶಾಹಿ ಪದ್ಧತಿ, ವಸಾಹತುಶಾಹೀ ಪದ್ಧತಿ ಮತ್ತು ಫ್ಯಾಸಿಸ್ಟ್ ಶಕ್ತಿಗಳ ವಿರುದ್ಧ ನಿರಂತರ ಸಮರದ ಜ್ವಲಂತ ವೀರ ಪರಂಪರೆ ಕಮ್ಯೂನಿಸ್ಟರಿಗೆ ಇರುವಂತೆ ಇಂತಹ ಹೋರಾಟಗಳಲ್ಲಿ ಹೆಜ್ಜೆ ಹೆಜ್ಜೆಗೂ ಮೊದಲು ಮುನ್ನುಗ್ಗಿ ಬಳಿಕ ಹಿಮ್ಮೆಟ್ಟಿ, ಕೊನೆಗೆ ಪರಾರಿಯಾಗಿ ಕೈ ಕೊಡುವ ಚಾರಿತ್ರಹೀನ ಉತ್ತರ ಕುಮಾರ ಪರಂಪರೆ ಸೋಷಿಯಲ್‌ಡೆಮೊಕ್ರಾಟರದ್ದಾಗಿದೆ.

ಎರಡನೆಯ ಅಂತರ್‌ರಾಷ್ಟ್ರೀಯವು ಭ್ರಷ್ಟ ನಾಯಕತ್ವದ ಬಾಯಿಗೆ ಸಿಕ್ಕು ಪ್ರಥಮ ಅಂತರ್‌ರಾಷ್ಟ್ರೀಯ ಹುಟ್ಟಿಸಿದ ಆಶಾವಾದಕ್ಕೆ ಪೆಟ್ಟು ಕೊಟ್ಟಿತು. ಮೊದಲು ಬಲವಾಗಿದ್ದ ಕಾರ್ಮಿಕ ಸಂಘಟನೆಯಲ್ಲಿ ಒಡಕುಂಟಾಯಿತು ಮೂರನೆಯ ಅಂತರ್‌ರಾಷ್ಟ್ರೀಯದಲ್ಲಿ ಕಾರ್ಮಿಕ ವರ್ಗದ ಆದರ್ಶದ ಪ್ರತೀಕವಾದ ಶಕ್ತಿಗಳು ಮತ್ತೆ ಒಮ್ಮೊಡುವುದು ಅನಿವಾರ್ಯವಾಯಿತು.

ಮೂರನೇ ಕಮ್ಯೂನಿಸ್ಟ್ ಅಂತರ್‌ರಾಷ್ಟ್ರೀಯದ ಅಂತರ್ ರಾಷ್ಟ್ರೀಯ ರಾಜಕಾರಣದ ಹಿನ್ನೆಲೆ ಹೀಗಿತ್ತು : ಬಂಡವಾಳಶಾಹೀ ಜಗತ್ತು ಮೊದಲನೇ ಮಹಾ ಯುದ್ಧದ ಪೆಟ್ಟಿನಿಂದ ಕೊರಗುತ್ತಿತ್ತು. ಅತ್ತ ರಷ್ಯಾದ ಮಹಾ ಕ್ರಾಂತಿಯ ತೇಜಸ್ಸನ್ನು ಕಂಡು ಸೊರಗುತ್ತಿತ್ತು. ತಮ್ಮ ಭಗ್ನ ಆಶಾಗೋಪುರದ ತುಣುಕು ತುಣುಕುಗಳನ್ನು ಒಟ್ಟುಗೂಡಿಸಲು ಲೀಗ್ ಆಫ್ ನೇಷನ್ಸ್ ಸಂಸ್ಥೆಯನ್ನು ವಿಜಯೀ ಶಕ್ತಿಗಳು ಹುಟ್ಟುಹಾಕಿಕೊಂಡವು. ಅಮೇರಿಕಾ ತನ್ನ ಸಾಮ್ರಾಜ್ಯಶಾಹೀ ಇಂಗಿತಗಳಿಗೆ ಅನುಸಾರವಾಗಿ ಲೀಗ್ ಆಫ್ ನೇಷನ್ಸ್‌ನಿಂದ ಆಚೆಯೇ ಉಳಿದರು. ಕಮ್ಯೂನಿಸ್ಟರು ಲೀಗ್ ಆಫ್ ನೇಷನ್ಸ್‌ಅನ್ನು ಟೀಕಿಸುತ್ತಾ ಬಂದರೂ ಯುದ್ಧ ರೇಖೆಯ ಇಕ್ಕೆಡೆಗಳಲ್ಲಿದ್ದ ಸೋಷಿಲಿಸ್ಟರು ಮಾತ್ರ ಅದಕ್ಕೆ ಬೇಷರತ್ತಾದ ಒಪ್ಪಿಗೆಯನ್ನು ಕೊಟ್ಟರು. ಅದೂ ಅಲ್ಲದೆ 1919ರಲ್ಲಿ ಸೋಷಿಲಿಸ್ಟರು ಸಭೆ ಸೇರಿ ಎರಡನೆಯ ಅಂತರ್‌ರಾಷ್ಟ್ರೀಯದ ಹೆಣಕ್ಕೆ ಉಸಿರು ತುಂಬಲು ಯತ್ನಿಸಿದರು. ಇದೇ ಕಾಲದಲ್ಲಿ ಇಂಗ್ಲೆಂಡ್, ಅಮೇರಿಕಾ, ಫ್ರಾನ್ಸ್, ಜರ್ಮನಿ, ಬೆಲ್ಜಿಯಂ, ಮತ್ತು ಹಾಲೆಂಡ್ ನಾಡುಗಳಲ್ಲಿ ಸೋಷಿಲಿಸ್ಟರು ಕಾರ್ಮಿಕ ವರ್ಗದ ಹಿತಕ್ಕೆ ಶೂಲವಿಕ್ಕಿ ಆಯಾ ದೇಶಗಳ ಬಂಡವಾಳ ವರ್ಗಗಳೊಂದಿಗೆ ಒಳಗಿಂದೊಳಗೆ ರಾಜಿ ಕಬೂಲಿ ಮಾಡಿಕೊಂಡದ್ದೂ ಚಾರಿತ್ರಿಕ ಸತ್ಯ.

ಜರ್ಮನಿ ಮತ್ತು ಹಂಗೇರಿಗಳಲ್ಲಿ ಅಲ್ಲಿನ ಬಂಡವಾಳ ವರ್ಗಕ್ಕೆ ಸೋಷಿಲಿಸ್ಟರ ನೆರವು ದೊರಕಿ ಕ್ರಾಂತಿಕಾರಿ ಹೋರಾಟಗಳನ್ನು ತಡೆದು ನಿಲ್ಲಿಸಿದ್ದರು. ಫ್ರಾನ್ಸ್‌ನಲ್ಲಿ ಲೋಹ ಕೆಲಸಗಾರರ ಮುಷ್ಕರಗಳ ಸರಣಿಯೇ ಶುರುವಾಗಿದ್ದರೆ, ಅಮೇರಿಕಾದ ಸಂಯುಕ್ತ ಸಂಸ್ಥಾನಗಳಲ್ಲಿ ಕಾರ್ಮಿಕ ಚಳುವಳಿಯ ಹೋರಾಟದ ಪರಂಪರೆ ಅನೇಕ ಕೈಗಾರಿಕೆಗಳಲ್ಲಿ ಉದಯಿಸುತ್ತಿತ್ತು. ಆದರೆ

"ವರ್ಗಯುದ್ಧದ ವೀರಯೋಧರು ಮತ್ತು ಉತ್ತರ ಕುಮಾರರು"

ಅಲ್ಲಿನ ಗೋಂಪರ್ಸ್ ಗೋಡೆಗಳು ಕಾರ್ಮಿಕ ವರ್ಗದ ಸದಸ್ಯತ್ವವನ್ನೇ ನಾಶ ಮಾಡಿದವು. ಇನ್ನೂ ಇಂಗ್ಲೆಂಡ್‌ನಲ್ಲಿ ಗಣಿ ಕಾರ್ಮಿಕರು ರೈಲ್ವೆ ಮತ್ತು ಸಾರಿಗೆ ಕಾರ್ಮಿಕರು ಹೋರಾಟದ ಹಾದಿಯಲ್ಲಿದ್ದರು. ಪ್ರಸಿದ್ಧ ಕಪ್ಪು ಶುಕ್ರವಾರವು ಈ ಹೋರಾಟದ ಚಿರ ನೆನಪಾಗಿ ಉಳಿದಿದೆ. ಇಲ್ಲೂ ಕೂಡ ಸೋಷಿಲಿಸ್ಟರು ಏಕಾಏಕಿ ಮಾಲೀಕರೊಡನೆ ರಾಜಿಮಾಡಿಕೊಂಡು ಮುಷ್ಕರವನ್ನು ವಾಪಸ್ ತೆಗೆದುಕೊಂಡಿದ್ದು ಕಾರ್ಮಿಕ ವರ್ಗದ ಮುಖಕ್ಕೆ ಮಸಿ ಬಳಿದಂತಾಯಿತು.

1920ರ ಸುಮಾರಿನಲ್ಲಿ ಇಟಲಿ ದೇಶವಂತೂ ಕಾರ್ಮಿಕ ಕ್ರಾಂತಿಯ ಅಂಚಿನಲ್ಲಿತ್ತು. ಕೂಲಿ ಪ್ರಶ್ನೆಯ ಮೇಲೆ ಘರ್ಷಣೆಗೆ ಇಳಿದ ಕಾರ್ಮಿಕರು ಕಾರ್ಖಾನೆಗಳನ್ನು ಆಕ್ರಮಿಸಿಕೊಂಡು ಕಾರ್ಖಾನೆಯ ಒಳಗೆ ಮುಷ್ಕರ ಹೂಡಿದರು; ಮೇಲೆ ಕೆಂಪು ಬಾವುಟಗಳನ್ನು ಹಾರಿಸಿದರು ; ಆತ್ಮ ರಕ್ಷಣೆಗಾಗಿ ಬಂದೂಕಗಳನ್ನು ತಯಾರಿಸುತ್ತಿದ್ದರು. ಮಾಲೀಕರುಗಳು ದಿಙ್ಮೂಢರಾದರು. ಸರಕಾರ ಅಲುಗಾಡತೊಡಗಿತು. ಈ ನಿರ್ಣಾಯಕ ಘಟ್ಟದಲ್ಲಿ ಸೋಷಿಲಿಸ್ಟ್ ಪಾರ್ಟಿಯ ಬಲ ಮತ್ತು ಮಧ್ಯಮ ಪಂಥವಾದಿಗಳು ವೇಸಾಧಕತನವನ್ನು ಮೆರೆದು ಕಾರ್ಮಿಕರನ್ನು ಮಣ್ಣು ಮುಕ್ಕಿಸಿದರು. ಮಾಜಿ ಸೋಷಿಲಿಸ್ಟ್ ನಾಯಕನಾಗಿದ್ದ ಮುಸೊಲೋನಿ ನಾಯಕತ್ವದಲ್ಲಿ ಬಂಡವಾಳಗಾರರು ಗೂಂಡಾಗಳ ಗುಂಪನ್ನು ರಚಿಸಿ ಕಾರ್ಮಿಕರನ್ನು ಬಗ್ಗುಬಡೆಯುವ ಅಸ್ತ್ರವನ್ನಾಗಿ ಮಾಡಿಕೊಂಡರು. ಈ ಕುತಂತ್ರದ ಪರಿಣಾಮ 1922ರಲ್ಲಿ ಮುಸೊಲೋನಿ ಅಧಿಕಾರ ರೂಢನಾದ; ಫ್ಯಾಸಿಸಂ ಜನ್ಮ ತಾಳಿತು. ವಿಶ್ವ ಕಾರ್ಮಿಕ ಹೋರಾಟಕ್ಕೆ ಇದು ಮತ್ತೊಂದು ಶೂಲವಾಯಿತು.

1919ರಲ್ಲಿ ರಾಜಕೀಯ ಅಧಿಕಾರವನ್ನು ಕಿತ್ತುಕೊಳ್ಳುವ ಕಾರ್ಮಿಕ ಹೋರಾಟವೊಂದು ಜರ್ಮನಿಯಲ್ಲಿ ಜರುಗಿತ್ತು. ಅಲ್ಲಿನ ಲೀಚೀನ್ ಟ್ರೇಡ್ ಯೂನಿಯನ್ ನಾಯಕರು ಈ ಹೋರಾಟವನ್ನು ಬರೀ ಆರ್ಥಿಕ ಹೋರಾಟದ ಮಟ್ಟಕ್ಕೆ ಇಳಿಸಿದರು. ಫ್ಯಾಕ್ಟರಿಗಳು ಮತ್ತೆ ಬಂಡವಾಳ ವರ್ಗದ ವಶಕ್ಕೆ ಮರಳಿದವು. 1921ರಲ್ಲಿ ಮಾರ್ಚ್ ಆಫ್ ಆ್ಯಕ್ಷನ್ ಎಂದು ಕರೆಯಲ್ಪಟ್ಟ ಕ್ರಾಂತಿ ನಡೆಯಿತು. ಕಾರ್ಮಿಕರು ಮತ್ತೆ ಸರ್ಕಾರದೊಂದಿಗೆ ನೇರ ಹೋರಾಟಕ್ಕೆ ಇಳಿದರು. ಡಾ|| ಕಾಪ್ ಅಧಿಕಾರವನ್ನು ಬಿಟ್ಟುಕೊಡಬೇಕಾಯಿತು. ಇನ್ನೇನು ಸರಕಾರ ಜರ್ಮನಿಯ ಕಾರ್ಮಿಕರ ಕೈಗೆ ಸಿಕ್ಕುವುದರಲ್ಲಿ ಸೋಷಿಲಿಸ್ಟ್ ಡೆಮೊಕ್ರಾಟ್ ನಾಯಕರು ಮತ್ತೆ ಕೈಕೊಟ್ಟರು. ಕಾಗದದ ಮೇಲೆ ಬರೆದ ಕೆಲವು ರಿಯಾಯಿತಿಗಳ ಮುಂದೆ ತಲೆಬಾಗಿ ಕೈಮುಗಿದರು.

ಕಮ್ಯೂನಿಸ್ಟ್ ಅಂತರ್‌ರಾಷ್ಟ್ರೀಯದ ನಾಲ್ಕನೆಯ ಅಧಿವೇಶನವು ಫ್ಯಾಸಿಸಂನ ಬಗೆಗೆ ಸಾಕಷ್ಟು ಮುನ್ಸೂಚನೆಗಳನ್ನು ನೀಡಿತ್ತು. ಸೋಷಿಲಿಸ್ಟ್ ಡೆಮೊಕ್ರಾಟರು ಮಾತ್ರ ಈ ಎಚ್ಚರಿಕೆಗಳಿಗೆ ಜಾಣ ಕಿವುಡುತನವನ್ನು ತೋರಿದುದೇ ಅಲ್ಲದೆ ಫ್ಯಾಸಿಸಂನ್ನು ಭಯಂಕರವಾಗಿ ತಪ್ಪು ಅರ್ಥಮಾಡಿಕೊಂಡರು. ಜಿನೋ

ಕೆ. ರಾಮಚಂದ್ರ ನಾಯಕ್

ವೋವ್‌ರವರು ಫ್ಯಾಸಿಸಂ ಬಗ್ಗೆ ನೀಡಿದ ವ್ಯಾಖ್ಯಾನ ಈ ಅಪಾರ್ಥ ಕಲ್ಪನೆಗೆ ಕುರುಹಾಗಿದೆ. ಅದರ ಪ್ರಕಾರ ಫ್ಯಾಸಿಸಂ ವರ್ಗ ಹೋರಾಟದ ಒಂದು ಅನಿವಾರ್ಯ ಘಟ್ಟ; ಇಟಲಿಯಲ್ಲಿದ್ದಂತೆ ಅದು ಕ್ರಾಂತಿಯ ಪಕ್ವತೆಯ ಸ್ಥಿತಿ ; ಭವಿಷ್ಯದಲ್ಲಿ ಯುರೋಪಿನಾದ್ಯಂತ ಅವರ ಬೆಳವಣಿಗೆಯು ಘಟ್ಟವನ್ನು ದಾಟಿ ಹೋಗಬೇಕಾಗಿದೆ. ಈ ಲೆಕ್ಕಾಚಾರ ತಿರುಗು ಬಾಣವಾಯಿತು. ಕಾರ್ಮಿಕರ ಐಕ್ಯ ಹೋರಾಟ ಫ್ಯಾಸಿಸಂನ್ನು ತಡೆಗಟ್ಟುವಷ್ಟು ಶಕ್ತವಾಗಿತ್ತು. ಸೋಷಿಲಿಸ್ಟರು ಫ್ಯಾಸಿಸಂ ಕಮ್ಯೂನಿಸಂಗಿಂತ 'ಕಡಿಮೆ ಕೇಡು' ಎಂಬ ಹಗಲು ಗನಸಿನಲ್ಲಿ ತೇಲಾಡತೊಡಗಿದರು. ಫ್ಯಾಸಿಸಂನ ರಾಕ್ಷಸೀ ಸ್ವರೂಪ ಬೃಹದಾಕಾರವನ್ನು ತಾಳಿದ್ದು ಈ ಕಾರಣಗಳಿಂದಲೇ. 1927ರಲ್ಲಿ ಆಸ್ಟ್ರಿಯಾದ ಕಾರ್ಮಿಕರು ಸಶಸ್ತ್ರ ಹೋರಾಟಕ್ಕೆ ಸಜ್ಜಾದರು. ಸೋಷಿಲಿಸ್ಟರು ಸೈನಿಕರ ಜೊತೆ ಸೇರಿ ಅವರ ದಮನಕ್ಕೆ ಕಾರಣರಾದರು. ಈ ಕಾಲಘಟ್ಟದಲ್ಲಿ ಸೋಷಿಲಿಸ್ಟರು ಪ್ರಪಂಚದಾದ್ಯಂತ ಬೂರ್ಜ್ವಾಗಳ ಬೆನ್ನು ಹಿಡಿದರು; ಸಾಧ್ಯವಾದಲ್ಲೆಲ್ಲ ಕಾರ್ಮಿಕರ ಐಕ್ಯತೆಯನ್ನು ಒಡೆದರು; ಅವರ ನಾಯಕನಾದ ಕಾಟ್ಸ್‌ಕಿಯನ್ನು ಅನುಮೋದಿಸತೊಡಗಿ, ಆಗತಾನೇ ಉದಿತೋದಿತವಾಗುತ್ತಿದ್ದ ರಷ್ಯನ್ ಸಮಾಜವಾದಿ ರಾಷ್ಟ್ರದ ವಿರುದ್ಧ ಯಥೇಚ್ಛ ಅಪಪ್ರಚಾರವನ್ನು ನಡೆಸಿದರು. ತಮ್ಮ ಸಮಯ ಸಾಧಕ ನೀತಿಯನ್ನು ಬಿಂಬಿಸುವ ವಾದವೊಂದನ್ನು ಮುಂದಿಟ್ಟರು; ಬಂಡವಾಳಶಾಹೀ ಪದ್ಧತಿಯು ಕಾಲಾನುಕ್ರಮದಲ್ಲಿ ಸಮಾಜವಾದಕ್ಕೆ ತಿರುಗುತ್ತದೆ! ಆರ್ಥಿಕ ಪ್ರಜಾಪ್ರಭುತ್ವ ಸಮಾಜವಾದಕ್ಕೆ ಹಾದಿ !! ಎಂದೆಲ್ಲಾ ಹೇಳಿದರು.

1924ರಲ್ಲಿ ಇಂಗ್ಲೆಂಡ್‌ನಲ್ಲಿ ಲೇಬರ್ ಪಕ್ಷವು ಕನ್ಸರ್ವೇಟೀವ್ ಪಕ್ಷವನ್ನು ಸೋಲಿಸಿ ಅಧಿಕಾರಕ್ಕೆ ಬಂದದ್ದು ಬರೀ ಸಾಂಕೇತಿಕವಾದದ್ದು: ಇಂಗ್ಲೆಂಡಿನ ಟ್ರೇಡ್ ಯೂನಿಯನ್ ಕಾಂಗ್ರೆಸ್ ಗಣಿ ಕಾರ್ಮಿಕರ ಮಹಾ ಮುಷ್ಕರಕ್ಕೆ ಕರೆಕೊಟ್ಟಿದ್ದಿತು. ಇದಕ್ಕೆ ಅಮೇರಿಕಾದ ಮತ್ತು ಯೂರೋಪಿನ ಕಾರ್ಮಿಕ ವರ್ಗದ ಬೆಂಬಲವಿತ್ತು. ಸೋವಿಯತ್ ಯೂನಿಯನ್ನಿನ ಕಾರ್ಮಿಕ ಸಂಘಗಳು ಆರ್ಥಿಕ ಸಹಾಯವನ್ನು ಮಾಡುವಷ್ಟು ಮುಂದಾದವು. ಆದರೆ ಜರ್ಮನಿ, ಹಂಗೇರಿ ದೇಶಗಳ ಸೋಷಿಲಿಸ್ಟರು ಈ ಹೋರಾಟದ ವಿರುದ್ಧ ನಡೆಸಿದ ಮಸಲತ್ತಿನ ಮತ್ತು ಇಂಗ್ಲೆಂಡಿನ ಸೋಷಿಲಿಸ್ಟರಿಗೆ ಸಹಜವಾದ ಹ್ಯಾಮ್ಲೆಟ್ ನಮೂನೆಯ ಅನಿಶ್ಚತೆಯಿಂದ ಕಾರ್ಮಿಕರನ್ನು ಮತ್ತೆ ಇರಿದರು. ಪ್ರಧಾನಿ ಬಾಲ್ಡ್‌ವಿನ್‌ರ ಅಸ್ಪಷ್ಟ ಭರವಸೆಗಳ ಮೇಲೆ ಹೋರಾಟವನ್ನು ವಾಪಸ್ಸ್ ತೆಗೆದುಕೊಂಡರು. ಈ ಪರಿಸ್ಥಿತಿಯನ್ನು ಸದುಪಯೋಗಪಡಿಸಿಕೊಂಡು ಮಜೂರ ವಿವಾದ ಶಾಸನವನ್ನು ಮಾಲೀಕರು ಪಾರ್ಲಿಮೆಂಟಿನಲ್ಲಿ ಜಾರಿಗೊಳಿಸಿದರು.

ವಸಾಹತುಶಾಹೀ ಪ್ರಪಂಚದಾದ್ಯಂತ ಸಂಭವಿಸಿದ ಆರ್ಥಿಕ ಅವನತಿಯು ಅಸಂಖ್ಯ ಕಾರ್ಮಿಕ ಹೋರಾಟಗಳನ್ನು ಹೊತ್ತಿಸಿತು. ಇದನ್ನು ತಡೆಗಟ್ಟಲು ಬೂರ್ಜ್ವಾಗಳು ಫ್ಯಾಸಿಸಂನ ಪ್ರಬಲ ಅಸ್ತ್ರವನ್ನು ಬಳಸುತ್ತಾರೆ ಅಥವಾ ಸೋಷಿಲಿಸ್ಟ್ ಡೆಮೊಕ್ರಸಿಯ ಮಂತ್ರವನ್ನು ಪಠಿಸುತ್ತಾರೆ. ಇನ್ನು ಸೋಷಿಲಿಸ್ಟ್ ಡೆಮೊಕ್ರಾಟರು ಶಾಂತಿ ಸಮಯದಲ್ಲಿ ಸಮಾಜವಾದವನ್ನು ವರಿಸಿ, ಸಂಕ್ರಮಣ ಕಾಲದಲ್ಲಿ ಫ್ಯಾಸಿಸಂನ ಜೊತೆಗೆ ಹಗಲು ಹಾದರ ಮಾಡುತ್ತಾರೆ. 1929ರ ಸುಮಾರಿನಲ್ಲಿ ಬಂಡವಾಳಶಾಹಿ ಪ್ರಪಂಚದಾದ್ಯಂತ ಆರ್ಥಿಕ ಬಿಕ್ಕಟ್ಟು ತಲೆದೋರಿ ಬಂಡವಾಳಶಾಹೀ ಮತ್ತು ವಸಾಹತುಶಾಹೀ ರಾಷ್ಟ್ರಗಳೆರಡೂ ಈ ಬೆಳವಣಿಗೆಯಲ್ಲಿ ತಲ್ಲಣಿಸಿದವು ಹಾಗೂ ತತ್ತರಿಸಿದವು. ಈ ಬಗ್ಗೆ ಕಮ್ಯೂನಿಸ್ಟರು ನೀಡುತ್ತಾ ಬಂದಿದ್ದ ಎಚ್ಚರಿಕೆಗಳನ್ನು ಕೇಳಿಯೂ ಕೇಳದಂತಿದ್ದ ಸೋಷಿಲಿಸ್ಟರು ತಮ್ಮ ಭ್ರಾಂತಿನ ಜಾಲದಲ್ಲಿ ಸಿಲುಕಿಕೊಂಡರು. 1933ರ ಹೊತ್ತಿಗೆ ಆರ್ಥಿಕ ಉತ್ಪನ್ನ ಈ ದೇಶಗಳಲ್ಲಿ ನೆಲ ಕಚ್ಚಿತು. ನಿರುದ್ಯೋಗ ತಾಂಡವವಾಡಿತು. ಅಪಾರ ಸಂಪನ್ಮೂಲಗಳ ಮತ್ತು ಫೋರ್ಡ್‌ವಾದದ ತವರು ಮನೆಯಾದ ಅಮೇರಿಕಾದಲ್ಲಿ ಸ್ಥಿತಿ ಇನ್ನೂ ಹದಗೆಟ್ಟಿತ್ತು. ಸೋಷಿಲಿಸ್ಟರು ತಮ್ಮ ವಾದವಾದ ಉತ್ಪನ್ನ ವೇಗದ ಸಿದ್ಧಾಂತಕ್ಕೆ ಕಟ್ಟುಬಿದ್ದರು. ಅವರ ನೀತಿ ಏರುತ್ತಿದ್ದ ಜೀವನ ವೆಚ್ಚ ಮತ್ತು ಕುಸಿಯುತ್ತಿದ್ದ ಕಾರ್ಮಿಕ ವೇತನ ಈ ಎರಡನ್ನೂ ಸಮಗೊಳಿಸುವುದರಲ್ಲಿ ಸೋತಿತು. ಮಾಲೀಕರ ಬಿಕ್ಕಟ್ಟಿನ ಹೊರೆಯ ದೊಡ್ಡ ಭಾಗವನ್ನು ಕಾರ್ಮಿಕರ ಮೇಲೆ ಹೇರಲಾಯಿತು. ಕಮ್ಯೂನಿಸ್ಟರು ನಡೆಸಿದ ಹೋರಾಟಗಳ ಮೂಲಕ ಮಾತ್ರ ಅಲ್ಲಲ್ಲಿ ಇಷ್ಟಿಷ್ಟು ಪರಿಹಾರಗಳನ್ನು ಒದಗಿಸಲು ಶಕ್ಯವಾಯಿತು. ಬಂಡವಾಳಶಾಹೀ ಪದ್ಧತಿಯು ಹೀಗೆ ತಾನು ಹೊಸೆದ ನೇಣಿಗೆ ತನ್ನ ಗೋಣನ್ನೇ ಸಿಕ್ಕಿಸಿಕೊಂಡು ದಿಕ್ಕೆಟ್ಟ ಈ ಕಾಲದಲ್ಲಿ ಸೋಷಿಲಿಸ್ಟರು ಕಾರ್ಮಿಕ ಕ್ರಾಂತಿಯಾಗಿದ್ದ ರಷ್ಯಾದ ಕಡೆಗೆ ತಮ್ಮ ಕೂಕು ಬೆರಳುಗಳನ್ನು ತೋರಿಸುತ್ತಿದ್ದರು. ರಷ್ಯಾದ ಪಂಚವಾರ್ಷಿಕ ಯೋಜನೆಗಳು ಒಂದು ಪ್ರಚಾರದ ಆಟವೆಂದು ಕಟಕಿಯಾಡಿದರು. ಅದರಿಂದ ಸೋಷಿಲಿಸ್ಟರು ಯಾವ ಪಾಠವನ್ನೂ ಕಲಿಯಲಿಲ್ಲ. ರಷ್ಯಾದಲ್ಲಿ ಉತ್ಪಾದನೆಯು ಏರಿದುದರ ಜೊತೆಗೆ ಬಹುತೇಕ ಉದ್ಯಮಗಳಲ್ಲಿ ಕಾರ್ಮಿಕರ ಕೆಲಸ 6 ಗಂಟೆಗೆ ಇಳಿಯಿತು. ನಿರುದ್ಯೋಗ ಮಾಯವಾಯಿತು. ಆದರೆ ಇಂಗ್ಲೆಂಡ್, ಜರ್ಮನಿ, ಪೋಲೆಂಡ್ ಮೊದಲಾದ ಕಡೆಗಳಲ್ಲಿ ಬದಲಾದ ದೇಶಗಳು ಕಾರ್ಮಿಕ ಹೋರಾಟಗಳಿಂದ ನಡುಗುತ್ತಿದ್ದವು. ಈ ಸಂದರ್ಭದಲ್ಲಿ ಸೋಷಿಲಿಸ್ಟರು ಮಾಲೀಕರಿಗೆ ಹೊಸ ಚೈತನ್ಯವನ್ನು ತುಂಬಲು ಕೂಲಿ ಕಡಿತವನ್ನು ಕಾರ್ಮಿಕರ ಮೇಲೆ ಹೇರಿದರು. ಅಮೇರಿಕಾದ ಸಂಯುಕ್ತ ಸಂಸ್ಥಾನಗಳಲ್ಲಿ ಕಾರ್ಮಿಕರು ಹೀಗೆ ಕೂಲಿ ಕಡಿತವನ್ನು ಒಪ್ಪಿಕೊಂಡಾಗ ಅಮೇರಿಕನ್ ಫೆಡರೇಷನ್ ಆಫ್ ಲೇಬರ್‌ನ ಉಪಾಧ್ಯಕ್ಷ ಮ್ಯಾಥ್ಯೂಹೋಲ್‌ರವರು ಅದನ್ನು ಮಜೂರರ ರಾಜನೀತಿಜ್ಞತೆಯ ದ್ಯೋತಕವೆಂದು ಹಾಡಿ ಹೊಗಳಿದರು. ಈ ಬಿಕ್ಕಟ್ಟಿನ ಕಾಲದಲ್ಲಿ ನಡೆದ ಕಾರ್ಮಿಕರ ಹೋರಾಟಗಳಲ್ಲಿ ಸಶಸ್ತ್ರ ಪಡೆಗಳು ಸೇರಿಕೊಂಡಿದ್ದುದು ಈ ಹೋರಾಟಗಳ ತೀವ್ರತೆಯನ್ನು ಹೇಳುತ್ತವೆ.

ಉದಾ : 1931ರಲ್ಲಿ ನಡೆದ ಸ್ಪೇನಿಷ್ ಕ್ರಾಂತಿ ಮತ್ತು ಬ್ರಿಟಿಷ್ ನೌಕಾ ಪಡೆಯ ಮುಷ್ಕರ ಮತ್ತು ಚಿಲಿಯನ್ ನೌಕಾದಳದ ಆಂದೋಲನ.

ಜರ್ಮನಿಯಲ್ಲಿ ಆದ ಫ್ಯಾಸಿಸಂನ ವಿಜಯ ಒಂದು ಅರ್ಥದಲ್ಲಿ ಸೋಷಿಲಿಸ್ಟ್ ಡೆಮೊಕ್ರಾಟರ ತಪ್ಪು ಕಲ್ಪನೆ ಮತ್ತು ನೀತಿಗಳ ಫಲಿತಾಂಶವೇ ಆಗಿದೆ. ಸೋಷಿಲಿಸ್ಟ್ ಡೆಮೊಕ್ರಾಟರು ಮೊದಲಿನಿಂದಲೂ ಬೂರ್ಜ್ವಾಗಳಿಗೆ ಸಹವರ್ತಿಗಳಾಗಿದ್ದರು. ತಮ್ಮೆಲ್ಲಾ ಶಕ್ತಿಗಳನ್ನು ಜರ್ಮನಿಯನ್ನು ಕಮ್ಯೂನಿಸ್ಟರಿಂದ ಬಚಾವ್ ಮಾಡಲು ಬಳಸಿಕೊಂಡರು. ಸೋಷಿಲಿಸ್ಟರ ವಿದ್ರೋಹದ ಕಾರಣ 1918ರ ಹೊತ್ತಿಗೆ ಫ್ಯಾಸಿಸಂನ ಬೀಜ ಬಿತ್ತನೆಯಾದರೂ ಅದು ಹುಲುಸಾಗಿ ಬೆಳೆದದ್ದು ಹಿಟ್ಲರ್‌ನ ಕಾಲಕ್ಕೆ. 1919ರ ಚುನಾವಣೆಯಲ್ಲಿ ಹಿಟ್ಲರ್‌ನಿಗೆ ವಿದೇಶಿ ಬಂಡವಾಳಗಾರರ ಬೆಂಬಲವಿತ್ತು. ಆದರೂ ಹಿಟ್ಲರ್ ಸೋತನು. ಸೋಷಿಲಿಸ್ಟರು ಮತ್ತು ಕಮ್ಯೂನಿಸ್ಟರು ಒಟ್ಟಿಗೆ ಪಡೆದ ಮತಗಳಿಗಿಂತ ಕಡಿಮೆ ಮತಗಳನ್ನು ಪಡೆದಿದ್ದನು. ಈ ಮಧ್ಯೆ ಸೋಷಿಲಿಸ್ಟ್ ಡೆಮೋಕ್ರಾಟರದ್ದೇ ಆಗಿದ್ದ ವೀಮಾರ್ ಸರಕಾರವು ಆರ್ಥಿಕ ರಂಗದಲ್ಲಿ ನಿಷ್ಕ್ರಿಯತೆಯನ್ನು ತೋರಿಸಿತು. ಹಿಟ್ಲರ್‌ನು ಈ ಪರಿಸ್ಥಿತಿಯ ದುರುಪಯೋಗ ಪಡೆದು 1932ರಲ್ಲಿ ಚುನಾವಣೆಯಲ್ಲಿ ಗೆದ್ದದ್ದು ಸಹಜವೇ ಆಗಿದೆ. ಕಮ್ಯೂನಿಸ್ಟರ ಮತ್ತು ಸೋಷಿಲಿಸ್ಟರ ಐಕ್ಯರಂಗವಾಗಿದ್ದರೆ ಈ ಬೆಳವಣಿಗೆ ಆಗುತ್ತಿರಲಿಲ್ಲ. ಕಾರ್ಮಿಕ ವರ್ಗದಲ್ಲೂ ಬಂಡಾಯದ ಕಾವು ಹೊಗೆಯಾಡುತ್ತಿತ್ತು. ಸೋಷಿಲಿಸ್ಟರು ಮಾತ್ರ ಫ್ಯಾಸಿಸಂ ಕಾರ್ಮಿಕ ಸಮಾಜವಾದಕ್ಕಿಂತ ಕಡಿಮೆ ಕೇಡು ಎಂಬ ನೀತಿಗೆ ಬಲವಾಗಿ ಅಂಟಿಕೊಂಡರು. ಫ್ಯಾಸಿಸಂನ ನಂಜಿನ ಮರಕ್ಕೆ ನೀರೆರೆದರು.

ಹಿಟ್ಲರನು ಸೋಷಿಲಿಸ್ಟರ ಬಾಲಿಶ ಆಶಾವಾದವನ್ನು ತಿರು ಮುರುಗು ಮಾಡಿದವನು. ಕಾರ್ಮಿಕರು ಬೀದಿ ಬೀದಿಗಳಲ್ಲಿ ನಾಜಿಗಳಿಗೆ ಬಲಿಯಾದರು. ವೀಮಾರ್ ಸರಕಾರದವರು ಈಗಾಗಲೇ ಕೆಂಪು ರಂಗದ ಹೋರಾಟಗಾರರನ್ನು ಬಹಿಷ್ಕರಿಸಿದರು. ಇದೇ ಸೋಷಿಲಿಸ್ಟರು ಕ್ರಿಶ್ಚಿಯನ್ ಕೇಂದ್ರ ಪಾರ್ಟಿಯು ಸರ್ವಾಧಿಕಾರಕ್ಕೆ ನೆರವು ನೀಡಿದ್ದರು. ಹಿಂಡನ್‌ಬರ್ಗ್‌ನನ್ನು ಮತ್ತೆ ಅಧಿಕಾರಕ್ಕೆ ಏರಿಸುವ ತಂತ್ರ ಹೂಡಿದರು. ಇದೆಲ್ಲದರ ಹಿಂದೆ ಹಿಂಡನ್‌ಬರ್ಗ್ ಹಿಟ್ಲರಿಗಿಂತಲೂ ಸರಳ ಎಂದು ಸಜ್ಜನನೆಂದೂ ಆಗಿದ್ದಿತು. ಕಮ್ಯೂನಿಸ್ಟರು ಹಿಂಡನ್ ಬರ್ಗ್ ಮತ್ತು ಹಿಟ್ಲರ್‌ನನ್ನು ಸಮೀಕರಿಸಿದ್ದರು. ಕೊನೆಗೆ ಹಿಂಡನ್‌ಬರ್ಗ್ ನಾಜಿಗಳಿಗೆ ಪೂರ್ತಿ ಸೋತು ಹಿಟ್ಲರ್‌ನಿಗೆ ಛಾನ್ಸಲರ್ ಆಗಿ ಪಟ್ಟ ಗಟ್ಟಿದನು.

ಹಿಂಸೆ ಮತ್ತು ರಕ್ತಪಾತಗಳು ಇಡೀ ಜರ್ಮನಿಯನ್ನು ಕವಿದವು. ಧೀರ ಕಮ್ಯೂನಿಸ್ಟ್ ಮುಖಂಡ ಥೀಲ್ ಮಾನ್‌ರವರನ್ನು ಸೆರೆಮನೆಯಲ್ಲೇ ಕೊಲ್ಲಲಾಯಿತು. ಸೋಷಿಲಿಸ್ಟರು ಹಿಟ್ಲರ್ ಸರಕಾರದಲ್ಲಿ ಭಾಗಿಗಳಾಗಲು ಹಂಬಲಿಸಿದರು. ಹಿಟ್ಲರ್‌ನ ವಿಜಯವನ್ನು ಶಾಸನ ಬದ್ಧ ಮತ್ತು ಪ್ರಜಾಪ್ರಭುತ್ವ ಮಾರ್ಗಾನುಸಾರಿ ಎಂದು ಸಮರ್ಥಿಸಿದರು. ಅವನ ವಿಜಯಕ್ಕೆ ತಾವಿತ್ತ ಕಾಣಿಕೆಗಳನ್ನು ದೊಡ್ಡದಾಗಿಸಿ ಮೀಸೆ ತಿರುವಿದರು. ಸೋಷಿಲಿಸ್ಟ್ ನಾಯಕ ಲೀಪ್‌ಪರ್ಟ್ ಗ್ರಾಸ್ಮಾರ್ಕ್ ಹಿಟ್ಲರ್‌ನ ಗೆಲುವು ರಷ್ಯನ್ ಕಾರ್ಮಿಕ ಹೋರಾಟದ ಉಪಸಂಹಾರವೆಂದು ಘೋಷಿಸಿ ಹಿಟ್ಲರ್‌ನ ಮೇ ದಿನಾಚರಣೆಯಲ್ಲಿ ಪಾಲ್ಗೊಳ್ಳಲು ಕಾರ್ಮಿಕರಿಗೆ ಕರೆ ನೀಡಿದನು. ಹಿಟ್ಲರನು ನಿರ್ದಯದಿಂದ ಸೋಷಿಲಿಸ್ಟರ ಆಶೆಯ ಮಹಲನ್ನು ಉಡಾಯಿಸಿದನು. ಟ್ರೇಡ್ ಯೂನಿಯನ್‌ನನ್ನು ನೆಲಕ್ಕೆ ತುಳಿದನು. ಸೋಷಿಲಿಸ್ಟ್ ಡೆಮೊಕ್ರಾಟಿಕ್ ಪಾರ್ಟಿಯನ್ನು ನಿಷೇಧಿಸಿದನು. ಕೆಲವು ಸೋಷಿಲಿಸ್ಟರು ಮುಖಗೇಡಿಗಳಾಗಿ ಜೀವ ಉಳಿಸಿಕೊಳ್ಳಲು ಹೊರದೇಶಗಳಿಗೆ ಓಡಿದರೆ, ಇನ್ನು ಕೆಲವರು ಹಿಟ್ಲರ್‌ನೊಂದಿಗೆ ಸರೀಕಾಗಿ ಅವನ ಎಲ್ಲ ಕುತಂತ್ರಗಳಲ್ಲಿ ಸಮಭಾಗಿಗಳಾದರು.

ಹಿಂಸೆ ಮತ್ತು ರಕ್ತಪಾತಗಳು ಇಡೀ ಜರ್ಮನಿಯನ್ನು ಕವಿದವು. ಧೀರ ಕಮ್ಯೂನಿಸ್ಟ್ ಮುಖಂಡ ಥೀಲ್‌ಮಾನ್‌ರವರನ್ನು ಸೆರೆಮನೆಯಲ್ಲೇ ಕೊಲ್ಲಲಾಯಿತು. ಸೋಷಿಲಿಸ್ಟರು ಹಿಟ್ಲರ್ ಸರಕಾರದಲ್ಲಿ ಭಾಗಿಗಳಾಗಲು ಹಂಬಲಿಸಿದರು. ಹಿಟ್ಲರನ ವಿಜಯವನ್ನು ಶಾಸನ ಬದ್ಧ ಮತ್ತು ಪ್ರಜಾಪ್ರಭುತ್ವ ಮಾರ್ಗಾನುಸಾರಿ ಎಂದು ಸಮರ್ಥಿಸಿದರು. ಅವನ ವಿಜಯಕ್ಕೆ ತಾವಿತ್ತ ಕಾಣಿಕೆಗಳನ್ನು ದೊಡ್ಡದಾಗಿಸಿ ಮೀಸೆ ತಿರುವಿದರು ಸೋಷಿಲಿಸ್ಟ್ ನಾಯಕ ಲೀಪ್‌ಪಾರ್ಟ್ ಗ್ರಾಸ್ಮಾರ್ಕ್ ಹಿಟ್ಲರನ ಗೆಲುವು ಕಾರ್ಮಿಕ ಹೋರಾಟದ ಉಪ ಸಂಹಾರವೆಂದು ಘೋಷಿಸಿ ಹಿಟ್ಲರನ ಮೇ ದಿನಾಚರಣೆಯಲ್ಲಿ ಪಾಲ್ಗೊಳ್ಳಲು ಕರೆ ನೀಡಿದನು.

ಹಿಟ್ಲರ್ ಮುಸೊಲೋನಿಗಿಂತ ತ್ವರಿತ ಗತಿಯಲ್ಲಿ ಕೆಲಸ ಮಾಡಿದನು. ಮುಸೊಲೋನಿಯ ಸರ್ವಾಧಿಕಾರ ಹಿಟ್ಲರ್‌ನ ಸರ್ವಾಧಿಕಾರದಷ್ಟು ಬೆಳೆಯದಿದ್ದಕ್ಕೆ ಅಲ್ಲಿನ ಕಾರ್ಮಿಕ ವರ್ಗವು ಬಹು ಮಟ್ಟಿಗೆ ಸೋಷಿಲಿಸ್ಟರ ಪ್ರಭಾವದ ಆಚೆ ಉಳಿದದ್ದು, ಕಮ್ಯೂನಿಸ್ಟ್ ಪಾರ್ಟಿಯು ಹೋರಾಟ ನಡೆಯುತ್ತಲೇ ಇದ್ದದ್ದು ಕಾರಣಗಳಾಗಿವೆ. ಜರ್ಮನಿಯಲ್ಲಿ ಕಮ್ಯೂನಿಸ್ಟರು ಅಷ್ಟು ಬಲಿಷ್ಟರಾಗಿರಲಿಲ್ಲ.

ನಾಜಿಗಳು ಜರ್ಮನ್ ಕಾರ್ಮಿಕ ವರ್ಗದ ಮಾರ್ಕ್ಸ್‌ವಾದಿ ಪರಂಪರೆಯನ್ನು ಬೇರುಸಹಿತ ಕಿತ್ತು ಹಾಕಲು ಅನುವಾದರು. ತಮ್ಮ ಚಳುವಳಿಗೆ ಕ್ರಾಂತಿಯ ಬಣ್ಣ ಕೊಡುವ ಪ್ರಯತ್ನದಲ್ಲಿ ನಾಜಿ ಗುರುತಿನ ಬಾವುಟಗಳಿಗೆ ಕೆಂಪು ಬಣ್ಣವನ್ನು ಕೊಟ್ಟರು. ರಾಷ್ಟ್ರೀಯ ಸಮಾಜವಾದಿ ಜರ್ಮನ್ ಕಾರ್ಮಿಕ ಪಕ್ಷವೆಂದು ತಮಗೆ ತಾವೇ ನಾಮಕರಣ ಮಾಡಿಕೊಂಡರು. ಧಾರಾಳವಾಗಿ ಬಂಡವಾಳಶಾಹಿ ವಿರೋಧಿ ವಾಗ್ಝರಿಯನ್ನು ಹರಿಯಬಿಟ್ಟರು. ಮೇ ದಿನವನ್ನು ಆಚರಿಸಿದರು.

ಫ್ರಾನ್ಸಿನ ಘಟನೆಗಳೂ ಕೂಡ ಕಮ್ಯೂನಿಸ್ಟರ ಹೋರಾಟಗಾರಿಕೆಗೆ ಮತ್ತು ಸೋಷಿಲಿಸ್ಟರ ಓಡುಗಾಲುತನಕ್ಕೆ ನಿದರ್ಶನಗಳಾಗಿವೆ. ಫ್ರಾನ್ಸಿನ ಕಾರ್ಮಿಕ ವರ್ಗವು ಕಮ್ಯೂನಿಸ್ಟ್ ಪಕ್ಷದ ನೇತೃತ್ವದಲ್ಲಿ ಬೃಹತ್ ಫ್ಯಾಸಿಸ್ಟ್ ವಿರೋಧಿ ಪ್ರದರ್ಶನವೊಂದನ್ನು ಸಂಘಟಿಸಿತು. 40,000ಕ್ಕೆ ಮೀರಿದ ಸೈನಿಕರೂ ಮತ್ತು ಪೋಲೀಸರೂ ಅವರ ಮೇಲೆ ಹಲ್ಲೆ ಮಾಡಿದರು. 10 ಜನ ಕಾರ್ಮಿಕರು ಈ ಘಟನೆಯಲ್ಲಿ ಕೊಲೆಯಾದರು. ಪರಿಣಾಮವಾಗಿ ಕಮ್ಯೂನಿಸ್ಟರು ಮತ್ತು ಎಡ ನಾಯಕತ್ವದ ಕಾರ್ಮಿಕ ಐಕ್ಯ ಸಾರ್ವತ್ರಿಕ ಮುಷ್ಕರಕ್ಕೆ ಕರೆಕೊಟ್ಟರು. ಸೋಷಿಲಿಸ್ಟ್ ಡೆಮೊಕ್ರಾಟರು ಒಲ್ಲದ ಮನಸ್ಸಿನಿಂದ ಜನರ ಒತ್ತಡಕ್ಕೆ ಮಣಿದು ಮುಷ್ಕರಕ್ಕೆ ಒಪ್ಪಿದರು. ಮೊದಲು 24 ಗಂಟೆಗಳ ಮುಷ್ಕರಕ್ಕೆ ಒಪ್ಪಿ ಕೊನೆಗೆ ಜಾರಿಕೊಂಡು ಒಂದು ನಿಮಿಷದ ಮುಷ್ಕರ ನಡೆಸುವ ಕುತಂತ್ರವನ್ನು ಮಾಡಿದರು. ಆದರೆ ಕಮ್ಯೂನಿಸ್ಟ್ ಪಾರ್ಟಿ ಮತ್ತು ಯುವ ಕಮ್ಯೂನಿಸ್ಟ್ ಲೀಗ್‌ಗಳ ಐಕ್ಯ ಚಳುವಳಿ ಯಶಸ್ವಿಯಾಗಿ ದೊಡ್ಡ ಪ್ರದರ್ಶನಗಳು ನಡೆದು ಫ್ರಾನ್ಸ್‌ನಲ್ಲಿ ಫ್ಯಾಸಿಸ್ಟ್ ಶಕ್ತಿಗಳ ಸೋಲು ಸಾಧ್ಯವಾಯಿತು. ಈ ಘಟನೆ ಇಡೀ ಯುರೋಪಿನ ಕಾರ್ಮಿಕ ವರ್ಗಕ್ಕೆ ಮರೆಯಲಾಗದ ಪಾಠವಾಯಿತು. 1923 ರಿಂದ 34 ರವರೆಗೆ 26 ಸಲ ಕಮ್ಯೂನಿಸ್ಟರು ಸೋಷಿಲಿಸ್ಟರಿಗೆ ಐಕ್ಯರಂಗದ ಕರೆ ಕೊಟ್ಟರೂ ಸೋಷಿಲಿಸ್ಟರು ನಿರಾಕರಿಸುತ್ತಾ ಬಂದರು. ಆದರೆ ಸೋಷಿಲಿಸ್ಟ್ ನಾಯಕರನ್ನು ಧಿಕ್ಕರಿಸಿ ಅವರ ಹಿಂಬಾಲಕರು ಐಕ್ಯರಂಗದಲ್ಲಿ ಸೇರಿದರು.

ಇನ್ನು ಆಸ್ಟ್ರಿಯಾದಲ್ಲಿ ಆದ ಘಟನೆಗಳನ್ನು ನೋಡೋಣ. 1933ರಲ್ಲಿ ಕ್ರಿಶ್ಚಿಯನ್ ಮತ್ತು ಫ್ಯಾಸಿಸ್ಟ್ ಪಾರ್ಟಿಯ ನಾಯಕ ಮತ್ತು ಪ್ರಧಾನಿ ಡೋಲ್‌ಫಸ್ಸನು ಹಠಾತ್ತನೆ ಪಾರ್ಲಿಮೆಂಟನ್ನು ವಿಸರ್ಜಿಸಿದನು. ತನ್ನ ದಬ್ಬಾಳಿಕೆಯನ್ನು ಹೇರಿದನು. ಬಲವಾದ ಸಂಘಟನೆ ಇದ್ದರೂ ಸೋಷಿಲಿಸ್ಟರು ಇದರ ವಿರುದ್ಧ ಹೋರಾಡಲು ಹೆದರಿಕೊಂಡರು. ಪಾರ್ಟಿಯನ್ನು ನಿಷೇಧಿಸಿದರೆ ಮಾತ್ರ, ಟ್ರೇಡ್ ಯೂನಿಯನ್‌ನನ್ನು ಬಹಿಷ್ಕರಿಸಿದರೆ ಮಾತ್ರ ಹೋರಾಡುತ್ತೇವೆಂದು ಹೇಳಿಕೆ ಕೊಟ್ಟರು. ಡೋಲ್‌ಫಸ್ಸನು ಈ ಎಲ್ಲವನ್ನೂ ಮಾಡಿ ತೋರಿಸಿದಾಗ ತಮ್ಮ ನಿಲುವನ್ನು ಇನ್ನೂ ಸಡಿಲಗೊಳಿಸಿ ತಮ್ಮ ಪಾರ್ಟಿ ಹೆಸರಿಗೆ ಮಾತ್ರ ಅಸ್ತಿತ್ವದಲ್ಲಿದ್ದರೆ ಅದೇ ಮಹಾ ಪ್ರಸಾದವೆಂದರು. ಈ ಸಂದರ್ಭದಲ್ಲೂ ಕಾರ್ಮಿಕರ ಒಂದು ಸಣ್ಣ ವಿಭಾಗವಾದ ಕಾರ್ಮಿಕ ರಕ್ಷಣಾ ದಳ ಮಾತ್ರ ಬಂಡಾಯವೆದ್ದಿತು. ಮಾರ್ಕ್ಸ್‌ವಾದಿಗಳು ದಿಟ್ಟತನದಿಂದ ಒಂದು ದಿನ ಹೋರಾಡಿದರು. ಸರಕಾರವು ತನ್ನೆಲ್ಲ ಶಕ್ತಿಗಳಿಂದ ಅದನ್ನು ಹತ್ತಿಕ್ಕಿತು.

ಇಟಲಿಯ ಕಮ್ಯೂನಿಸ್ಟ್ ಫ್ಯಾಸಿಸ್ಟ್ ವಿರೋಧಿ ಹೋರಾಟವು ಚರಿತ್ರೆಯ ವೀರ ಆಖ್ಯಾಯಿಕೆಯಲ್ಲಿ ಸೇರಿ ಹೋಗಿದೆ. ಅಂಥೋನಿಯೋಗ್ರಾಮ್ಸ್ಕಿಯಂತಹ ಪಾರ್ಟಿಯ ನಾಯಕರು ಅಸು ನೀಗಿದರು. ಮುಸೋಲೋನಿ ಸೆರೆ ಹಿಡಿದ 1,40,000 ಕೈದಿಗಳಲ್ಲಿ ಶೇ. 80 ಕಮ್ಯೂನಿಸ್ಟರಾಗಿದ್ದರು.

ಇಟಲಿಯಲ್ಲಿ ಕೂಡ ಕಮ್ಯೂನಿಸ್ಟರ ಮತ್ತು ಸೋಷಿಲಿಸ್ಟರ ಇದೇ ಪ್ರವೃತ್ತಿಗಳು ಕಂಡು ಬರುತ್ತವೆ. ಕಮ್ಯೂನಿಸ್ಟರ ಫ್ಯಾಸಿಸ್ಟ್ ವಿರೋಧಿ ಹೋರಾಟವು ಚರಿತ್ರೆಯ ವೀರ ಆಖ್ಯಾಯಿಕೆಯಲ್ಲಿ ಸೇರಿ ಹೋಗಿದೆ. ಅಂಥೋನಿಯೋ ಗ್ರಾಮ್ಸ್ಕಿಯಂತಹ ಪಾರ್ಟಿಯ ನಾಯಕರು ಅಸು ನೀಗಿದರು. ಮುಸೊಲೋನಿ ಸೆರೆಹಿಡಿದ 1,40,000 ಕೈದಿಗಳಲ್ಲಿ ಶೇ. 80ರಷ್ಟು ಕಮ್ಯೂನಿಸ್ಟರಾಗಿದ್ದರು. ಈ ಹೋರಾಟವು ಮೊದಲು ಸೋಷಿಲಿಸ್ಟರ ಮತ್ತು ಕಮ್ಯೂನಿಸ್ಟರ ಸಹಕಾರದ ಮೇಲೆ ಶುರುವಾಯಿತು. ಎರಡನೆಯ ಮಹಾ ಯುದ್ಧದ ಕಾಲದಲ್ಲಿ ರಷ್ಯಾ ಈ ಹೋರಾಟವನ್ನು ಪ್ರವೇಶಿಸಿ ಅದಕ್ಕೆ ಹೊಸ ಜೀವಕಳೆಯನ್ನು ತಂದಿತು. 1942ರಲ್ಲಿ ವಿಶಾಲ ಫ್ಯಾಸಿಸ್ಟ್ ರಂಗದ ರಚನೆಯಾಯಿತು. ಕಮ್ಯೂನಿಸ್ಟ್, ಸೋಷಿಲಿಸ್ಟ್, ಕ್ರಿಶ್ಚಿಯನ್ ಡೆಮೊಕ್ರಾಟ್, ಲೇಬರ್ ಡೆಮೊಕ್ರಾಟಿಕ್ ಪಕ್ಷಗಳೆಲ್ಲಾ ಈ ರಂಗದಲ್ಲಿ ಕೂಡಿಕೊಂಡಿದ್ದವು. 1943ರಲ್ಲಿ ಚರಿತ್ರಾರ್ಹ ಸಾರ್ವತ್ರಿಕ ಮುಷ್ಕರವು ಪ್ರಾರಂಭವಾಯಿತು. ಉತ್ತರ ಇಟಲಿಯಲ್ಲಿ ಅದು ಬಂಡಾಯದ ಸ್ವರೂಪವನ್ನು ತಳೆದಿತ್ತು. ಅದೇ ವರುಷ ಮುಸೊಲೋನಿಯ ರಾಜಿನಾಮೆಯನ್ನು ಕಂಡಿತು. ಲೇಕ್ ಕೊಮೊದಲ್ಲಿ ಕಾರ್ಮಿಕರು ಮುಸೊಲೋನಿ ಮತ್ತು ಅವನ ಮಡದಿಯನ್ನು ನೇಣು ಹಾಕಿದರು. ಐಕ್ಯರಂಗ ಹೇಗೆ ವಿಜಯ ಗಳಿಸಬಹುದೆಂಬುದಕ್ಕೆ ಇಟಲಿಯ ಘಟನೆಗಳು ಮಾರ್ಗ ಸೂಚಿಗಳಾಗಿವೆ.

1941ರ ಮೇ ತಿಂಗಳು ಫ್ರೆಂಚ್ ಪ್ರತಿಭಟನಾ ಚಳುವಳಿಯು ಐಕ್ಯರಂಗವು ಮೂಲಭೂತವಾಗಿ ಕಮ್ಯೂನಿಸ್ಟರ ರಚನೆಯೇ ಆಗಿತ್ತು. ಕಮ್ಯೂನಿಸ್ಟರು, ಡಿಗಾಲ್ ವಾದಿಗಳು, ಸೋಷಿಲಿಸ್ಟರು ಮುಂತಾದ ಅನೇಕ ಗುಂಪುಗಳು ಮತ್ತು ಯುವಕ ಸಂಘಟನೆಗಳು ಇದರಲ್ಲಿ ಒಂದಾಗಿದ್ದರು. ಕಮ್ಯೂನಿಸ್ಟರು ಇಂತಹ ಕಾರ್ಯಾಚರಣೆಯನ್ನು ದೃಢವಾಗಿ ನಂಬಿದ್ದರು. ಆದರೆ ಡಿಗಾಲ್‌ವಾದಿಗಳು ಮತ್ತು ಸೋಷಿಲಿಸ್ಟರಿಗೆ ಜೀವ ತೊರೆದು ಹೋರಾಡುವ ಧೈರ್ಯವಾಗಲಿ ಇಚ್ಛೆಯಾಗಲಿ ಇರಲಿಲ್ಲ. ರಾಜಕೀಯವಾಗಿ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ಮಾತ್ರ ತೋರಿಕೆಯ ಪ್ರತಿಭಟನೆಯಲ್ಲಿ ತೊಡಗಿದ್ದರು. ನಾಜಿಗಳಂತೂ ಅತಿ ಕ್ರೂರ ಪ್ರತೀಕಾರವನ್ನು ತೋರಿಸಿದರು. ಅವರ ನೆತ್ತರ ದಾಹಕ್ಕೆ ಕಮ್ಯೂನಿಸ್ಟ್‌ಪಾರ್ಟಿಯ 7,50,000 ಜನ ಬಲಿಯಾದರು. 1944ರ ಚಳುವಳಿಯಲ್ಲಿ 5 ಲಕ್ಷ ಸಶಸ್ತ್ರ ಹೋರಾಟಗಾರರಿದ್ದು ಈ ಸೇನೆಯಲ್ಲಿ ಅಪಾರ ಮಹಿಳೆಯರೂ ಸೇರಿದ್ದರು. ಈ ಅಪೂರ್ವ ಸೇನೆಯನ್ನು ಕಟ್ಟಿದ ಹೆಗ್ಗಳಿಕೆ ಕಮ್ಯೂನಿಸ್ಟರದು ಮಾತ್ರ. ಪ್ಯಾರಿಸ್‌ನ ಬಿಡುಗಡೆ ಇದರಿಂದಲೇ ಆಯಿತೆಂದು ಬೇರೆ ಹೇಳಬೇಕಾಗಿಲ್ಲ.

ಲೇಬರ್ ಮತ್ತು ಸೋಷಿಲಿಸ್ಟ್ ಅಂತರ್‌ರಾಷ್ಟ್ರೀಯವು 1933 ರಲ್ಲಿ ಅಂದರೆ ಯುದ್ಧ ಪೂರ್ವದ ಕಾಲದಲ್ಲಿ ತನ್ನ ಅಧಿವೇಶನವನ್ನು ನಡೆಸಿತು. ಯುದ್ಧ ಕಾಲದಲ್ಲಿ ಈ ಪಾರ್ಟಿಗಳು ನಿಶ್ಚೇತವಾಗಿ ಬಿದ್ದುಕೊಂಡಿದ್ದವು; ಕೆಲವು ತಮ್ಮ ಮಿತ್ರ ರಾಷ್ಟ್ರಗಳ ಯುದ್ಧಕ್ಕೆ ಬೆಂಬಲ ಕೊಡುತ್ತಿದ್ದವು. ಜರ್ಮನಿಯಿಂದ ದೇಶ ಭ್ರಷ್ಟನಾದ ಸ್ಟ್ಯಾಂಫರ್ ಎಂಬ ದ್ರೋಹಿಯು ನ್ಯೂಯಾರ್ಕಿನಲ್ಲಿ ತೂರಿಕೊಂಡಿದ್ದನು. ನಾಚಿಕೆಗೇಡಿಯಾಗಿ ಹಿಟ್ಲರ್‌ನನ್ನು ಸಮರ್ಥಿಸುತ್ತಾ, ರಷ್ಯಾದ ವಿರುದ್ಧ ಎಲ್ಲಾ ಶಕ್ತಿಗಳೂ ಒಗ್ಗೂಡಬೇಕೆಂದು ವಾದಿಸುತ್ತಿದ್ದನು. ಈ ಹಿನ್ನಲೆಯಲ್ಲಿ ಸೋಷಿಲಿಸ್ಟರ ಮರು ಸಂಘಟನೆಯು 1945ರಲ್ಲಿ ಜರ್ಮನಿಯ ಫ್ರಾಂಕ್‌ಫರ್ಟ್‌ನಲ್ಲಿ ನೇರತು.

ಈ [illegible] ಬಂಡವಾಳಶಾಹಿಗಳ ಮೇಲೆ ಎಷ್ಟು [illegible] ಸೋಷಿಲಿಸ್ಟರ ಯೋಗ್ಯತೆಯನ್ನು ಬಂಡವಾಳಗಾರರು ಚೆನ್ನಾಗಿ [illegible].

(28ನೇ ಪುಟ ನೋಡಿ)

ಭಾರತದ ಕಾರ್ಮಿಕ ವರ್ಗದ ಸಂಕ್ಷಿಪ್ತ ಚರಿತ್ರೆ

(1ನೇ ಪುಟದಿಂದ)

ಒಂದು ಹೆಚ್ಚು ಹೋರಾಟವಿಲ್ಲದೆ, ಸಂವಿಧಾನಾತ್ಮಕ ಪರಿಹಾರ ದೊರಕಿಸಿಕೊಳ್ಳುವ ಸಂವಿಧಾನಾತ್ಮಕ, ಸುಧಾರಣಾವಾದಿ ದಾರಿ ಮತ್ತು ರಾಷ್ಟ್ರೀಯ–ರಾಜಕೀಯ ಚಳುವಳಿಗಳಲ್ಲಿ ಬೂರ್ಜ್ವಾ ವರ್ಗಕ್ಕೆ ಪೂರಕ, ಅಧೀನವಾಗಿರುವ ದಾರಿ; ಇನ್ನೊಂದು ಕ್ರಾಂತಿಕಾರಿ ವರ್ಗ ಹೋರಾಟ ಹಾಗೂ ಸ್ವತಂತ್ರ ಮುಂಚೂಣಿಯ ರಾಜಕೀಯ ಪಾತ್ರದ ದಾರಿ—ಒಂದನ್ನು ಆರಿಸಿಕೊಳ್ಳುವ ಬಗ್ಗೆ ತೀವ್ರ ಭಿನ್ನಾಭಿಪ್ರಾಯ ತಲೆದೋರಿತು. ಇದಲ್ಲದೆ 1928 ರ ಕಲ್ಕತ್ತ ಅಧಿವೇಶನದಲ್ಲಿ 30,000 ಕಾರ್ಮಿಕರ ಮೆರವಣಿಗೆ ನುಗ್ಗಿ ಪೂರ್ಣ ಸ್ವಾತಂತ್ರ್ಯ ಧ್ಯೇಯ ಅನುಸರಿಸುವಂತೆ ಒತ್ತಾಯಿಸಿದಲ್ಲದೆ, ಕಾಂಗ್ರೆಸ್‌ನಲ್ಲಿ ಎಡಪಂಥೀಯರ ಹೆಚ್ಚಳ ಸಾಮ್ರಾಜ್ಯಶಾಹಿಗಳನ್ನು ತಲ್ಲಣಗೊಳಿಸಿತು.

ಕೂಡಲೇ ಸಾಮ್ರಾಜ್ಯಶಾಹಿ ಸರ್ಕಾರ ಆಕ್ರಮಣ ಮಾಡಲು ನಿರ್ಧರಿಸಿತು. ಹಲವು ಕಾನೂನು ತಂದು ಕಾರ್ಮಿಕರ ಸಾರ್ವತ್ರಿಕ, ರಾಜಕೀಯ ಮುಷ್ಕರಗಳನ್ನು ನಿಷೇಧಿಸಿತು. ಬ್ರಿಟಿಷ್ ಮತ್ತು ಇತರ ವಿದೇಶ ಕಮ್ಯೂನಿಸ್ಟರ ಸಹಕಾರ, ಬೆಂಬಲ ದೊರಕದಂತೆ ಮಾಡಲು 'ಸಾರ್ವಜನಿಕ ಭದ್ರತೆ'ಗೆ ಅಪಾಯಕಾರಿಯಾಗಿರುವ ವಿದೇಶಿಯರನ್ನು ಬಂಧಿಸಿ ವಾಪಸು ಕಳಿಸಲು ಅಧಿಕಾರ ನೀಡುವ ಸುಗ್ರೀವಾಜ್ಞೆ ಹೊರಡಿಸಿತು. ಭಾರತದ ಸುಮಾರು 31ರ ಪ್ರಮುಖ ಸಕ್ರಿಯ ಕಮ್ಯೂನಿಸ್ಟರನ್ನು, ಕಾರ್ಮಿಕ ನಾಯಕರನ್ನು ಮೀರತ್‌ನಲ್ಲಿ ಸರ್ಕಾರ ಉರುಳಿಸಲು ಪಿತೂರಿ ನಡೆಸಿದ ಅಪಾದನೆ ಮೇಲೆ ಬಂಧಿಸಲಾಯಿತು. ಕಮ್ಯೂನಿಸ್ಟ್ ಚಳುವಳಿಯನ್ನು ಬೆಳೆಯುತ್ತಿರುವಾಗಲೇ ಹೊಸಕಿ ಹಾಕುವ ಪ್ರಯತ್ನ ವಿರುದ್ಧ ಫಲ ನೀಡಿತು. ಮೀರತ್ ಮೊಕದ್ದಮೆಯ ವಿಚಾರ ನಡೆಯುವಾಗ ಈ ಅಪಾದಿತರು ಸರ್ಕಾರದ ಖರ್ಚಿನಲ್ಲಿ ತಮ್ಮ ರಾಜಕೀಯ ಸಿದ್ಧಾಂತವನ್ನು ಕೋರ್ಟ್ ರೂಮುಗಳಿಂದ ದೇಶಕ್ಕೆ ತಿಳಿಸುವ ಅಮೋಘ ಕೆಲಸ ಮಾಡಿದರು. ತಮ್ಮನ್ನು ರಕ್ಷಿಸಿಕೊಳ್ಳುವ ಪ್ರಯತ್ನ ಮಾಡಲಿಲ್ಲ. ಇದಲ್ಲದೆ ದೇಶದಲ್ಲಿ, ಬ್ರಿಟನ್ ಹಾಗೂ ಇತರ ದೇಶಗಳಲ್ಲಿ ಇವರಿಗೆ ಭಾರಿ ಬೆಂಬಲ ದೊರೆಯಿತು. ಕಾಂಗ್ರೆಸ್ ಸಹ ಇವರ ಬಿಡುಗಡೆಗೆ ವಕೀಲರನ್ನು ನೇಮಿಸಿತು. ಕಮ್ಯೂನಿಸ್ಟ್ ಪಕ್ಷಕ್ಕೆ ಸಿಕ್ಕಿದ ಈ ಅಭೂತಪೂರ್ವ ಪ್ರಚಾರದಿಂದ ಹಲವು ಎಡ ಒಲವಿನ ರಾಷ್ಟ್ರೀಯವಾದಿಗಳು, ಭಯೋತ್ಪಾದಕ (Terrorist) ಗುಂಪುಗಳು ತಮ್ಮ ನಿಲವು ಬದಲಾಯಿಸಿ ಪಕ್ಷವನ್ನು ಸೇರಿದರು. ಅಪಾದಿತರಲ್ಲಿ 27 ಜನಕ್ಕೆ ತೀವ್ರ ಶಿಕ್ಷೆಯಾಯಿತು.

ಈ ದಮನದ ಕ್ರಮಗಳು ನಿರೀಕ್ಷಿತ ಫಲ ನೀಡಿದ್ದರಿಂದ ಹಾಗೂ ಸುಧಾರಣಾವಾದಿ ನಾಯಕರನ್ನು ತಮ್ಮ ಕಡೆ ಗೆದ್ದುಕೊಳ್ಳುವ ಪ್ರಯತ್ನವಾಗಿ ಬ್ರಿಟಿಷರು 1929ರಲ್ಲಿ ವಿಟ್‌ಲೀ ಕಮಿಷನ್ ನೇಮಿಸಿದರು. ಈ ಕಮಿಷನ್ ಕಾರ್ಮಿಕರ ಸ್ಥಿತಿಗತಿ ಪರಿಶೀಲನೆ ನಡೆಸಿ, ಸೂಕ್ತ ವರದಿ ಒಪ್ಪಿಸಬೇಕಾಗಿತ್ತು. ಈ ಕಮಿಷನ್‌ನಲ್ಲಿ ಚಮನ್ ಲಾಲ್ ಹಾಗೂ ಎಸ್. ಎಂ. ಜೋಶಿ ಎಂಬ ಸುಧಾರಣಾವಾದಿ ನಾಯಕರನ್ನು ನೇಮಿಸಲಾಯಿತು. ವಿಟ್‌ಲೀ ಕಮಿಷನ್‌ಗೆ ಬಹಿಷ್ಕಾರ, ಸಾಮ್ರಾಜ್ಯಶಾಹಿ ವಿರೋಧಿ ಲೀಗ್ ಹಾಗೂ ಎಡ ಒಲವಿನ ಅಂತರಾಷ್ಟ್ರೀಯದ ಸದಸ್ಯತ್ವ, ಜಿನೀವಾದಲ್ಲಿ ನಡೆಯುವ ILO ಗೆ ಪ್ರತಿನಿಧಿಗಳನ್ನು ಕಳಿಸದಿರುವುದು, ಸೈಮನ್ ಕಮಿಷನ್ ಬದಲು ಕಾಂಗ್ರೆಸ್ ನೇಮಿಸಿದ ಮೋತಿಲಾಲ್ ನೆಹ್ರೂ ಸಮಿತಿ ವರದಿಯ ತಿರಸ್ಕಾರದ ಬಗ್ಗೆ ಕಾರ್ಯಕಾರಿ ಸಮಿತಿ ತೆಗೆದುಕೊಂಡ ಬಹುಮತದ ನಿರ್ಧಾರ ವಿರೋಧಿಸಿ, ಸುಧಾರಣಾವಾದಿ ನಾಯಕರು 10ನೇ ಅಧಿವೇಶನದಲ್ಲಿ ಭಾಗವಹಿಸಲಿಲ್ಲ. ಈ ನಾಯಕರು ಇಂಡಿಯನ್ ಟ್ರೇಡ್ ಯೂನಿಯನ್ ಫೆಡರೇಷನ್ ಎಂಬ ಹೊಸ ಸಂಘಟನೆ ಕಟ್ಟಿದರು. ಹೀಗೆ ಎ. ಐ. ಟಿ. ಯು. ಸಿ. ಯಲ್ಲಿ ಪ್ರಥಮ ಒಡಕು ಸಂಭವಿಸಿತು.

11ನೇ ಅಧಿವೇಶನದಲ್ಲಿ ಕಮ್ಯೂನಿಸ್ಟ್ ನಾಯಕತ್ವದ ಮುಂಬಯಿಯ ಗಿರಣಿ ಕಾಮಗಾರ್ ಯೂನಿಯನ್‌ನ ಪ್ರತಿನಿಧಿ ಸಂಖ್ಯೆ ಬಗ್ಗೆ ಭಿನ್ನಾಭಿಪ್ರಾಯ ತಲೆದೋರಿ, ಕಮ್ಯೂನಿಸ್ಟರು ಇದರಿಂದ ಹೊರ ನಡೆದರು. ರೆಡ್ ಟ್ರೇಡ್ ಯೂನಿಯನ್ ಕಾಂಗ್ರೆಸ್ ಸಂಘಟಿಸಿದರು.

ಈ ಎರಡು ಒಡಕುಗಳು ಸಾಮ್ರಾಜ್ಯಶಾಹಿ ಆಕ್ರಮಣದ ಅವಧಿಯಲ್ಲಿ ಬಂದದ್ದರಿಂದ ಇಮ್ಮಡಿ ದುರದೃಷ್ಟಕರವಾಗಿದ್ದವು. ಮೊದಲನೇ ಒಡಕನ್ನು ತಡೆಯಲು ಕಮ್ಯೂನಿಸ್ಟರು ಎಲ್ಲಾ ಪ್ರಯತ್ನ ನಡೆಸಿ ವಿಫಲರಾದರು. ಎರಡನೆಯದ್ದು ಎಡ ಪಂಥೀಯರ ಒಳಗಿನ ಒಡಕಾಗಿತ್ತು. ಈ ಎರಡನೇ ಒಡಕಿಗೆ ಸುಭಾಷ್‌ಚಂದ್ರ ಬೋಸ್ ನಾಯಕತ್ವದ ಎಡ-ರಾಷ್ಟ್ರೀಯವಾದಿಗಳು ಕಾಂಗ್ರೆಸ್ ನಾಯಕತ್ವವನ್ನು AITUC ಟೀಕೆ ಮಾಡುವುದು ಸಹಿಸದೆ ಹೋದುದು, ಆಗ ಕಮ್ಯೂನಿಸ್ಟ್ ಪಕ್ಷದಿಂದ ಹೊರದಬ್ಬಲ್ಪಟ್ಟ ಎಂ. ಎನ್. ರಾಯ್ ಕಮ್ಯೂನಿಸ್ಟರ ಪ್ರಭಾವ ಕಡಿಮೆ ಮಾಡಲು ಈ ಒಡಕಿಗೆ ಎಲ್ಲ ಪ್ರಯತ್ನ ನಡೆಸಿದ್ದು ಮತ್ತು ಆ ಕಾಲದಲ್ಲಿ ಕಮ್ಯೂನಿಸ್ಟ್ ಇಂಟರ್‌ನ್ಯಾಷನಲ್ ಮತ್ತು ಭಾರತೀಯ ಕಮ್ಯೂನಿಸ್ಟರ ಪಂಥವಾದೀ (Sectarian) ರಾಜಕೀಯ ದೃಷ್ಟಿ ಕಾರಣವಾದವು.

ವಿಶ್ವ ಆರ್ಥಿಕ ಬಿಕ್ಕಟ್ಟಿನ ಅವಧಿಯಲ್ಲಿ ಹೋರಾಟಗಳು [1931—36]

1929 32ರ ಅವಧಿಯಲ್ಲಿ ಜಗತ್ತು ಹಿಂದೆ ಎಂದೂ ಕಂಡರಿಯದ ತೀವ್ರವ್ಯಾಪಕ ಆರ್ಥಿಕ ಬಿಕ್ಕಟ್ಟು ತಲೆದೋರಿತು. 1932 ರಷ್ಟು ಹೊತ್ತಿಗೆ ಬಂಡವಾಳಶಾಹಿ ಆರ್ಥಿಕತೆ ತಳಕ್ಕೆ ಮುಟ್ಟಿತ್ತು. ಮೂರು ವರ್ಷದಲ್ಲಿ ಒಟ್ಟು ಉತ್ಪಾದನೆ ಶೇಕಡಾ38 ರಷ್ಟು ಇಳಿದಿತ್ತು. ಎಂದಿನಂತೆ ಈ ಬಿಕ್ಕಟ್ಟಿನ ಎಲ್ಲ ಭಾರವನ್ನು ಕಾರ್ಮಿಕ ವರ್ಗದ ಮೇಲೆ ಹೇರಲು ಬಂಡವಳಿಗರು ಯತ್ನಿಸಿದರು. ದೊಡ್ಡ ಸಂಖ್ಯೆಯಲ್ಲಿ ಕೆಲಸದಿಂದ ವಜಾ ಮತ್ತು ವೇತನ ಕಡಿತ ವಿರೋಧಿಸಿ ಈ ಮೂರು ವರ್ಷಗಳಲ್ಲಿ 15 ಅಭಿವೃದ್ಧ ಬಂಡವಾಳಶಾಹಿ ದೇಶಗಳಲ್ಲಿ ಎಂಟೂವರೆ ಮಿಲಿಯ ಕಾರ್ಮಿಕರನ್ನೊಳಗೊಂಡ 19000 ಮುಷ್ಕರಗಳು ನಡೆದವು. ಕಾರ್ಮಿಕರ ಈ ಹೋರಾಟಗಳನ್ನು ಎದುರಿಸಲು, ಗುತ್ತೇದಾರಿ ಬಂಡವಾಳಶಾಹಿ ಅತ್ಯಂತ ಭೀಕರವಾದ ಪ್ರತಿಗಾಮಿತನ ತೋರಿಸಿತು. ಈ ಹೋರಾಟಗಳ ಎದುರು ಆಗತಾನೇ ತಲೆ ಎತ್ತುತ್ತಿದ್ದ ಫ್ಯಾಸಿಸಂನ್ನು ತನ್ನ ರಾಜಕೀಯ ಆಕ್ರಾಮಕ ಶಕ್ತಿಯಾಗಿ ಬಳಸಿತು. ಇದನ್ನು ಎದುರಿಸಲು ಕಮ್ಯೂನಿಸ್ಟ್ ಅಂತರಾಷ್ಟ್ರೀಯ ವ್ಯಾಪಕವಾದ ಐಕ್ಯರಂಗ ಎಲ್ಲ ದೇಶಗಳಲ್ಲಿ ರಚಿಸುವಂತೆ ಕರೆ ನೀಡಿತು.

ಈ ಅಂತರಾಷ್ಟ್ರೀಯ ಹಿನ್ನೆಲೆಯಲ್ಲಿ ಭಾರತದಲ್ಲಿ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟ ಕಿಚ್ಚಿನಂತೆ ಹಬ್ಬಿತು. ಚಿತ್ತಗಾಂಗ್ ಶಸ್ತ್ರಾಗಾರದ ಮೇಲೆ ಧಾಳಿ. ಪೆಶಾವರದಲ್ಲಿ ಗಢ್‌ವಾಲಿ ಸೈನಿಕರ ಆಜ್ಞೆ ಉಲ್ಲಂಘನೆ, ಷೋಲಾಪುರದಲ್ಲಿ ಕಾರ್ಮಿಕ ಮುಷ್ಕರ, ದಂಗೆ ಮತ್ತು ಪಟ್ಟಣದಲ್ಲಿ ಅಧಿಕಾರ ಸ್ಥಾಪನೆ, ಬಂಗಾಳ, ಮುಂಬಯಿಯಲ್ಲಿ ಕಾರ್ಮಿಕರ ಪ್ರದರ್ಶನಗಳು, ಸಾಮ್ರಾಜ್ಯಶಾಹಿಗಳ ಗಾಂಧೀಜಿ ಮತ್ತು ಕಾಂಗ್ರೆಸ್‌ನ ರಾಜಕೀಯ ಲೆಕ್ಕಾಚಾರಗಳನ್ನು ತಲೆಕೆಳಗು ಮಾಡಿತು. ಆದರೆ ಜನ ಸಾಮ್ರಾಜ್ಯಶಾಹಿಗಳ ಬರ್ಬರ ಕ್ರಮಗಳನ್ನು ಎದುರಿಸಬೇಕಾಯಿತು. ಗಾಂಧಿ-ಇರ್ವಿನ್ ಒಪ್ಪಂದ, ದುಂಡು ಮೇಜಿನ ಪರಿಷತ್ತುಗಳು ಆಗುತ್ತಿದ್ದಂತೆಯೇ 1,20,000 ಜನ ಸ್ವಾತಂತ್ರ್ಯ ಯೋಧರು ಜೈಲುಗಳಲ್ಲಿ ಕೊಳೆಯುತ್ತಿದ್ದರು. ಕಮ್ಯೂನಿಸ್ಟ್ ಪಕ್ಷವನ್ನು ಕಾನೂನು ಬಾಹಿರ ಮಾಡಲಾಯಿತು.

ವಿಶ್ವ ಆರ್ಥಿಕ ಬಿಕ್ಕಟ್ಟು ಭಾರತದಲ್ಲೂ ತನ್ನ ಪರಿಣಾಮ ಬೀರಿತು. ಹತ್ತಿ-ಬಟ್ಟೆ ಕೈಗಾರಿಕೆ ತೀವ್ರ ಹಿಂಜರಿತ ಅನುಭವಿಸಿತು. ಅರ್ಧದಷ್ಟು ಮಿಲ್‌ಗಳು ಮುಚ್ಚಿದವು. ಉಳಿದ ಕಾರ್ಮಿಕರಿಗೆ ಹನ್ನೆರಡುವರೆ ಶೇಕಡಾದಿಂದ, ಇಪ್ಪತ್ತೈದು ಶೇಕಡಾದವರೆಗೆ ಬೇರೆ ಬೇರೆ ಪ್ರದೇಶಗಳಲ್ಲಿ ವೇತನ ಕಡಿತ ಮಾಡಲಾಯಿತು. 1929–34ರ ಅವಧಿಯಲ್ಲಿ ಸೆಣಬು ಕೈಗಾರಿಕೆಯಿಂದ 83,000 ಕಾರ್ಮಿಕರನ್ನು ವಜಾ ಮಾಡಲಾಯಿತು. ರೈಲ್ವೆಯಲ್ಲಿ, ಪೋಸ್ಟ್ ಮತ್ತು ಟೆಲಿಗ್ರಾಫ್‌ಗಳಲ್ಲಿ ಕೂಡಾ ವೇತನ ಕಡಿತ, ವಜಾ ಜಾರಿಗೆ ಬಂತು.

ಕಾರ್ಮಿಕರು ಈ ಕ್ರಮಗಳಿಗೆ ಪ್ರತಿರೋಧ ಒಡ್ಡಿ ಮುಷ್ಕರಗಳನ್ನು ಹೂಡಿದರು. 1931 ರಲ್ಲಿ ಮುಖ್ಯವಾಗಿ ಹತ್ತಿ, ಸೆಣಬು ಕೈಗಾರಿಕೆಗಳಲ್ಲಿ ಮುಷ್ಕರಗಳು ನಡೆದವು. 1932 ರಲ್ಲಿ ಮದ್ರಾಸ್ ಮತ್ತು ಮರಾಠಾ ರೈಲ್ವೆಯಲ್ಲಿ ವಜಾ ವಿರುದ್ಧ ಮುಷ್ಕರಗಳು ನಡೆದವು. 1932 ರಲ್ಲಿ ಶೇಕಡಾ 60 ಮುಷ್ಕರಗಳು ವೇತನಕ್ಕೆ ಸಂಬಂಧಿಸಿದ್ದವು. (1921 ರ ನಂತರ ಇದು ಅತ್ಯಧಿಕವಾಗಿತ್ತು). 1933 ರಲ್ಲಿ ಸೇರಿದ ಹತ್ತಿ ಗಿರಣಿ ಕಾರ್ಮಿಕರ ಅಖಿಲ ಭಾರತ ಸಮಾವೇಶ ನಿರ್ಧರಿಸಿದಂತೆ 1934 ರಲ್ಲಿ ಹತ್ತಿ-ಗಿರಣಿಗಳಲ್ಲಿ ಸಾರ್ವತ್ರಿಕ ಮುಷ್ಕರಕ್ಕೆ ಕರೆ ನೀಡಲಾಯಿತು. ಮುಂಬಯಿಯಲ್ಲಿ 90,000, ನಾಗಪುರದಲ್ಲಿ 60,000 ಮತ್ತು ಸೊಲ್ಲಾಪುರದಲ್ಲೂ ಸಾವಿರಾರು ಕಾರ್ಮಿಕರು ಈ ಸಾರ್ವತ್ರಿಕ ಮುಷ್ಕರದಲ್ಲಿ ಭಾಗವಹಿಸಿದರು.

1931-34ರ ಅವಧಿಯಲ್ಲಿ ಕಾರ್ಮಿಕ ರಂಗದಲ್ಲಿ ಐಕ್ಯತೆ ಇಲ್ಲದೆ, ಮುಷ್ಕರಗಳಿಗೆ ಆ ಪರಿಸ್ಥಿತಿಯಲ್ಲಿ ಇರಬೇಕಾಗಿದ್ದ ತೀವ್ರತೆ, ವ್ಯಾಪಕತೆ ಬರಲಿಲ್ಲ. ಬಂಡವಾಳಶಾಹಿ ಆಕ್ರಮಿಕ ಧೋರಣೆಯನ್ನು ಹಿಮ್ಮೆಟ್ಟಿಸುವುದು ಸಾಧ್ಯವಾಗದೆ ಹೋಯಿತು. ಅತ್ಯಂತ ವ್ಯಾಪಕ ಕಾರ್ಮಿಕರ ವಜಾದ ಹಿನ್ನೆಲೆಯಲ್ಲಿ ಸಹ ಅನೈಕ್ಯತೆಯಿಂದ ರೈಲ್ವೆಯಲ್ಲಿ ಸಾರ್ವತ್ರಿಕ ಮುಷ್ಕರ ನಡೆಯಲಿಲ್ಲ. ಈ ಹಿನ್ನೆಲೆಯಲ್ಲಿ ಸಾಮಾನ್ಯ ಸದಸ್ಯರಿಂದ ಐಕ್ಯತೆಗೆ ಒತ್ತಾಯ ಬರತೊಡಗಿತು. ವ್ಯಾಪಕ ಐಕ್ಯರಂಗ ಕಟ್ಟುವ ರಾಜಕೀಯ ದೃಷ್ಟಿ ಕೋಣದಿಂದ ಕಮ್ಯೂನಿಸ್ಟರು ಐಕ್ಯತೆಗೆ ಪ್ರಯತ್ನ ಆರಂಭಿಸಿದರು.

ಎ. ಐ. ಟಿ. ಯು. ಸಿ. ಬಿಟ್ಟು ಹೋಗಿದ್ದ ಸುಧಾರಣಾವಾದಿ ನಾಯಕರು ಐಕ್ಯತೆ ಬಗ್ಗೆ ಉತ್ಸುಕರಾಗಿದ್ದರು. ಇವನ್ನು ಗಮನಿಸಿದ ಎ. ಐ. ಟಿ. ಯು. ಸಿ. ಕಾರ್ಯಕಾರಿ ಸಮಿತಿ ಕೆಲವು ನೀತಿಯ ಆಧಾರದ ಮೇಲೆ ಐಕ್ಯತೆ ಸಲಹೆಯನ್ನು ಮುಂದಿಸಿತು. ಅವರ ಆಹ್ವಾನದಂತೆ 14ನೇ ಅಧಿವೇಶನದಲ್ಲಿ (1935) ಎಡ ಕಾರ್ಮಿಕ ನಾಯಕರು ಭಾಗವಹಿಸಿ, ಪುನಃ ಐಕ್ಯತೆ ಸಾಧಿಸಲಾಯಿತು.

ಇದರ ಫಲವಾಗಿ 1935-36 ರಲ್ಲಿ ತೀವ್ರ ಹೋರಾಟಗಳು ನಡೆದವು. 26,500 ಕಾರ್ಮಿಕರು ಭಾಗವಹಿಸಿದ ಬಂಗಾಳ-ನಾಗಪುರ ರೈಲ್ವೆ ಮುಷ್ಕರ ಈ ಅವಧಿಯ ದೊಡ್ಡ ಮುಷ್ಕರ.

ಎ. ಐ. ಟಿ. ಯು. ಸಿ. ಯಿಂದ ಹೊರಗಿದ್ದ ಅವಧಿಯಲ್ಲಿ ಕಮ್ಯೂನಿಸ್ಟರು ಮಾರ್ಕ್ಸ್‌ವಾದಿ ಲೆನಿನ್‌ವಾದೀ ಕ್ರಾಂತಿಕಾರಿ ಪಾಠಗಳನ್ನು ಪ್ರಚಾರ ಮಾಡುವುದರಲ್ಲಿ, ಕಾರ್ಮಿಕರಲ್ಲಿ ರಾಜಕೀಯ ಪ್ರಜ್ಞೆ ಹುಟ್ಟಿಸಲು ತೀವ್ರ ಪ್ರಯತ್ನಗಳನ್ನು ಮಾಡಿದರು.

ಪ್ರಾಂತೀಯ ಸ್ವಯಮಾಡಳಿತದ ಅವಧಿ [1937–39]

1935 ರಲ್ಲಿ ಬ್ರಿಟಿಷ್ ಸರ್ಕಾರ ತಂದ ಗವರ್ನಮೆಂಟ್ ಆಫ್ ಇಂಡಿಯಾ ಆ್ಯಕ್ಟನ್ನು ಕಾಂಗ್ರೆಸ್ ತೀವ್ರವಾಗಿ ವಿರೋಧಿಸಿದರೂ, 1937 ರಲ್ಲಿ ನಡೆದ ಚುನಾವಣೆಯಲ್ಲಿ ಪ್ರತಿಭಟನೆಯೊಂದಿಗೆ ಭಾಗವಹಿಸಿ, ಹೆಚ್ಚಿನ ಪ್ರಾಂತ್ಯಗಳಲ್ಲಿ ಆರಿಸಿ ಬಂತು.

ಈ ಹೊತ್ತಿಗೆ ಆರ್ಥಿಕ ಪರಿಸ್ಥಿತಿ ಬಹಳ ಮಟ್ಟಿಗೆ ಉತ್ತಮಗೊಂಡಿದ್ದರೂ, ಕಾರ್ಮಿಕರಿಗೆ ಯಾವುದೇ ಥರದ ಪರಿಹಾರ ದೊರೆತಿರಲಿಲ್ಲ. ಈ ಅವಧಿಯಲ್ಲಿ ಯೂನಿಯನ್ ಕಾರ್ಯಾಚರಣೆ, ರಚನೆ ಅತ್ಯಂತ ತೀವ್ರಗತಿಯಲ್ಲಿ ನಡೆಯಿತು. ಕಾಂಗ್ರೆಸ್ ಪ್ರಾಂತೀಯ ಸರ್ಕಾರಗಳು ಅಧಿಕಾರಕ್ಕೆ ಬಂದದ್ದರಿಂದ

(21ನೇ ಪುಟ ನೋಡಿ)

ರಾಜಕೀಯ

ನನ್ನ ಜನರ ಕುರಿತು
ನಾನು ಮಾತನಾಡಿದರೆ
'ಇದೆಲ್ಲ ರಾಜಕೀಯ'
ಎಂದು ಬಾಯಿ ಕಟ್ಟಿಸಿದ
ಗೆಳೆಯನ
ಹೊಲಸು ರಾಜಕೀಯ ಗೊತ್ತಾಯಿತು

—ಜಿ. ನಾ.

ದಮನಕ್ಕೆ ಮಾರುತ್ತರ

ತಲೆ ಬಾಗಿ ಎದೆ ಬಗ್ಗಿಸಿ ನಡೆಯುತ್ತಿರುವ ಓ ಬಂಧು.
ಅಳಲಿ ಬಳಲಿ ಸೊರಗಿರುವವನೆ,
ಹೀಗಿದೆಕೆಂದರಿಯದೆಯೆ ಒಂದು ದಿನ ಸುಮ್ಮಗೆ ಅಸು ನೀಗುವವನೆ,
ಇನ್ನೊರ್ವರ ವಿರಾಮವನು ಕಂಡೇ ಸಂತಸಗೊಳಬೇಕಾದ ಓ ಹೋರಾಟಗಾರ, ನಿನ್ನ ಕಣ್ಣಳೊಳು ನಗೆಯ ಮಿನುಗನೆ.
ಕಾಣರಿಯದಿಹ ಎಲೆ ತಮ್ಮ.
ಆ ನಿನ್ನ ಮೊಗ ಭಯ ಪರಿತಾಪಗಳಿಂದ ತುಂಬಿದೆ.
ಏಳು, ಎದ್ದೇಳು :
ಇನ್ನಿದನ್ನು ಸಹಿಸಲಾಗದೆಂದು ಕೂಗು:
ಇನ್ನಿದೆಲ್ಲಾ ಸಾಧ್ಯವಾಗದೆಂದಾರ್ಭಟಿಸು !

— ಡೇವಿಡ್ ಡಿಯೊ
ಅನುವಾದ : ಜಿ. ರಾಮಕೃಷ್ಣ
(ಚಿಂತಕದಿಂದ)

ಭಾರತದ ಕಾರ್ಮಿಕ ವರ್ಗದ ಸಂಕ್ಷಿಪ್ತ ಚರಿತ್ರೆ

(19ನೇ ಪುಟದಿಂದ)

ದಮನ ಇನ್ನು ಅಸ್ತಿರುವುದಿಲ್ಲ ಎಂಬ ಭಾವನೆ ಸ್ವಲ್ಪಮಟ್ಟಿಗೆ ಇದಕ್ಕೆ ಕಾರಣವಾಗಿತ್ತು. ಈ ಅವಧಿಯಲ್ಲಿ ನಡೆದ ದೊಡ್ಡ ಹೋರಾಟಗಳಲ್ಲಿ ಎರಡು ಬಾರಿ ನಡೆದ ಎರಡುವರೆ ಲಕ್ಷ ಸೆಣಬು ಕಾರ್ಮಿಕರು ಭಾಗವಹಿಸಿದ ಸಾರ್ವತ್ರಿಕ ಮುಷ್ಕರ, ಕಾನ್‌ಪುರದ ಹತ್ತಿ ಗಿರಣಿ ಕಾರ್ಮಿಕರು ಎರಡು ಬಾರಿ ನಡೆಸಿದ 40,000 ಕಾರ್ಮಿಕರನ್ನೊಳಗೊಂಡ ಸಾರ್ವತ್ರಿಕ ಮುಷ್ಕರ, 1938 ರಲ್ಲಿ ಮುಂಬಯಿಯ ಕಾಂಗ್ರೆಸ್ ಸರ್ಕಾರ ತಂದ ಕೈಗಾರಿಕಾ ವಿವಾದಗಳ ಮಸೂದೆಯ ವಿರುದ್ಧ ನಡೆದ 90,000 ಕಾರ್ಮಿಕರನ್ನೊಳಗೊಂಡ ಸಾರ್ವತ್ರಿಕ ಮುಷ್ಕರ.

ಈ ಅವಧಿಯಲ್ಲಿ ಮುಷ್ಕರಗಳು ಮುಖ್ಯ ಕೈಗಾರಿಕಾ ಕೇಂದ್ರಗಳಲ್ಲದ ಪ್ರದೇಶಗಳಿಗೂ ಹರಡಿದವು. ನಾರಿನ ಕೈಗಾರಿಕೆ, ಮರಮುಟ್ಟು ಕಾರ್ಖಾನೆ, ಗುಡಿ ಕೈಗಾರಿಕೆಗಳು ಮುಂತಾದ ಸಣ್ಣ ಕೈಗಾರಿಕೆಗಳಿಗೂ ಮತ್ತು ರಿಕ್ಷಾ ಎಳೆಯುವವರು, ಜಟಕಾ ಹೊಡೆಯುವವರು ಇಂತಹ ಇತರ ಕ್ಷೇತ್ರಗಳಿಗೂ ಯೂನಿಯನ್ ರಚನೆ ಹಬ್ಬಿತು. ಈ ಅವಧಿಯ ಮುಷ್ಕರಗಳು ಆಕ್ರಮಿತ ಧೋರಣೆಯವಾಗಿದ್ದವು. ಬಿಕ್ಕಟ್ಟಿನ ಮೊದಲಿನ ಕೆಲಸದ ಪರಿಸ್ಥಿತಿ, ವೇತನ, ಪುನಃ ತರುವುದಲ್ಲದೆ ವೇತನ ಏರಿಕೆ, ಬೋನಸ್ ಬೇಡಿಕೆ ಮುಂದಿಡಲಾಯ್ತು. ವಜಾ ಮಾಡಿದವರ ಪುನಃಸ್ಥಾಪನೆಗೆ, ದಮನಕಾರಿ ನೀತಿ ವಾಪಸಿಗೆ ಮತ್ತು ಯೂನಿಯನ್‌ಗಳ ಮಾನ್ಯತೆಗೆ ಆಗ್ರಹ ಪಡಿಸಲಾಯ್ತು. ಹೆಚ್ಚಿನ ಮುಷ್ಕರಗಳು ಸಫಲವಾದವು.

ಕಾಂಗ್ರೆಸ್ ಸರ್ಕಾರಗಳ ಧೋರಣೆ, ಅದರ ವರ್ಗ ಸ್ವಭಾವಕ್ಕೆ ಅನುಸಾರವಾಗಿಯೇ ಇತ್ತು. ತಾನು ಆಳುತ್ತಿದ್ದ ರಾಜ್ಯಗಳಲ್ಲಿ ಮುಷ್ಕರ ನಡೆದಾಗ ಬ್ರಿಟಿಷ್ ಸರ್ಕಾರದ ಎಲ್ಲ ದಮನಕಾರಿ ಕ್ರಮಗಳನ್ನೂ ಚಾಚೂ ತಪ್ಪದೆ ಅನುಸರಿಸಿದವು. ಕಾಂಗ್ರೆಸ್ಸೇತರ ಸರ್ಕಾರ ಇದ್ದಲ್ಲಿ ಮಾತ್ರ (ಉದಾ : ಬಂಗಾಳದ ಸೆಣಬು ಕಾರ್ಮಿಕರ ಸಾರ್ವತ್ರಿಕ ಮುಷ್ಕರ) ಮುಷ್ಕರಕ್ಕೆ ಬೆಂಬಲ ನೀಡಿತು. ಇಷ್ಟು ಸಾಲದ್ದಕ್ಕೆ ಪಂಚಾಯಿತಿ ಕಡ್ಡಾಯ ಮಾಡುವ, ಮಾತುಕತೆಯಲ್ಲಿ ಭಾಗವಹಿಸದೆ ನಡೆಸುವ ಮುಷ್ಕರ ಕಾನೂನು ಬಾಹಿರವೆಂದು ಘೋಷಿಸುವ, ಯೂನಿಯನ್ ಮಾನ್ಯತೆ ಇವೆಲ್ಲವನ್ನು ಒಪ್ಪುವ ಷರತ್ತಿಗೆ ಅಳವಡಿಸುವ, ಕಾನೂನು ಬಾಹಿರ ಮುಷ್ಕರದಲ್ಲಿ ಭಾಗವಹಿಸಿದವರಿಗೆ ಬ್ರಿಟಿಷ್ ಕಾಯಿದೆಗಿಂತಲೂ ತೀವ್ರ ಶಿಕ್ಷೆ ವಿಧಿಸುವ ಕೈಗಾರಿಕಾ ವಿವಾದ ಮಸೂದೆಯನ್ನು ಮುಂಬಯಿ ಸರ್ಕಾರ ತಂದಿತು. ಇದು ಸ್ವಾತಂತ್ರ್ಯನಂತರದ ಕಾಂಗ್ರೆಸ್ ನೀತಿಯ ಮುನ್ನೋಟವಾಗಿತ್ತು.

1938ರ ಹದಿನಾರನೇ ಅಧಿವೇಶನದಲ್ಲಿ ಎ. ಐ. ಟಿ. ಯು. ಸಿ. ಸುಧಾರಣಾವಾದಿಗಳ ಎನ್. ಟಿ. ಯು. ಎಫ್. ನ್ನು ಸೇರಿಸಿಕೊಳ್ಳುವ ಐಕ್ಯತೆ ಸಲಹೆಗೆ ಅನುಮೋದನೆ ನೀಡಿ ಹಂತ ಹಂತವಾಗಿ, 1940 ರ ಹೊತ್ತಿಗೆ ಪೂರ್ಣ ಐಕ್ಯತೆ ಸಾಧಿಸಿದಂತಾಯ್ತು. ಇದೇ ಅಧಿವೇಶನದಲ್ಲಿ ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡುವ, ಕಮ್ಯೂನಿಸ್ಟ್ ಪಕ್ಷದ ಮೇಲಿನ ನಿರ್ಬಂಧ ತೆಗೆಯುವ ನಿರ್ಣಯ ಅಂಗೀಕರಿಸಿತು.

ಎರಡನೆ ಮಹಾಯುದ್ಧ ಮತ್ತು ವರ್ಗ ಹೋರಾಟ (1939–45)

1939 ರಲ್ಲಿ ಎರಡನೆಯ ಮಹಾಯುದ್ಧ ಆರಂಭವಾಯಿತು. ಬ್ರಿಟಿಷ್ ಸರ್ಕಾರ ಭಾರತ ಯುದ್ಧದಲ್ಲಿ ಭಾಗಿ ಎಂದು ಘೋಷಿಸಿತು. ಇದನ್ನು ಪ್ರತಿಭಟಿಸಿ ಕಾಂಗ್ರೆಸ್ ಸರ್ಕಾರಗಳು ರಾಜೀನಾಮೆ ಇತ್ತವು. 1942 ರಲ್ಲಿ ಪಶ್ಚಿಮದಲ್ಲಿ ರಷ್ಯಾದ ಮೇಲೆ ಜರ್ಮನಿ ಧಾಳಿ, ಪೂರ್ವದಲ್ಲಿ ಜಪಾನಿನ ವಿಜಯಭೇರಿಯಿಂದ ಹೊಸ ಪರಿಸ್ಥಿತಿ ಉದ್ಭವಿಸಿದಾಗ ಬ್ರಿಟಿಷ್ ರಾಷ್ಟ್ರೀಯ ಭಾವನೆಗಳನ್ನು ಸಮಾಧಾನ ಪಡಿಸಲು ಕ್ರಿಪ್ಸ್ ಕಮಿಷನ್ ಕಳಿಸಿತು. ಕ್ರಿಪ್ಸ್ ಸಂಧಾನ ವಿಫಲವಾದಾಗ, ಕಾಂಗ್ರೆಸ್ ಹತಾಷೆಯಿಂದ 'ಮಾಡು ಇಲ್ಲವೆ ಮಡಿ' ಮತ್ತು 'ಕ್ವಿಟ್ ಇಂಡಿಯಾ' ಕರೆಯನ್ನು ಯಾವುದೇ ತಯಾರಿ ಇಲ್ಲದೆ ಕೊಟ್ಟಿತು. ಕೂಡಲೇ ಕಾಂಗ್ರೆಸ್ ನಾಯಕತ್ವ(ಗಾಂಧೀಜಿಯೂ ಸೇರಿದಂತೆ)ವನ್ನು ಬಂಧಿಸಿದಾಗ, ಅಸಂಘಟಿತ, ತಯಾರಿ ಇಲ್ಲದ, ಹತಾಶೆಗೊಂಡ ಜನರ ಸಿಟ್ಟು ಕಟ್ಟೆಯೊಡೆದು, ಟೆಲಿಫೋನ್, ಟೆಲಿಗ್ರಾಫ್, ರೈಲ್ವೆಗಳನ್ನು ಸುಟ್ಟರು. ಹಾಗೂ ಇತರ ವಿಧ್ವಂಸಕ ಚಟುವಟಿಕೆಗಳಲ್ಲಿ ತೊಡಗಿದರು. ಪೋಲೀಸು, ಸೈನ್ಯದೊಂದಿಗೆ ಕಾದಾಡಿದರು. ಸುಮಾರು 10,000 ಜನ ಇದರಲ್ಲಿ ಮಡಿದರು. ಆದರೆ ಕೆಲವೇ ವಾರಗಳಲ್ಲಿ ಇದು ನಿಂತಿತು. ಕಮ್ಯೂನಿಸ್ಟ್ ಪಕ್ಷ 1942 ರವರೆಗೆ (ರಷ್ಯಾವನ್ನು ಜರ್ಮನಿ ಆಕ್ರಮಿಸುವವರೆಗೆ) ಯುದ್ಧ ವಿರೋಧಿ ಚಟುವಟಿಕೆಗಳಲ್ಲಿ ಕಾಂಗ್ರೆಸಿನ ಜತೆ ಭಾಗವಹಿಸಿತು. ಆದರೆ 1942ರ ನಂತರ ಯುದ್ಧದ ಸ್ವರೂಪ ಬದಲಾದಾಗ ರಾಷ್ಟ್ರೀಯ ಸರ್ಕಾರದ ಬೇಡಿಕೆಯೊಂದಿಗೆ, ಯುದ್ಧ ಸಿದ್ಧತೆಗೆ ಸರ್ಕಾರದೊಂದಿಗೆ ಸಹಕರಿಸಿತು. ಈ ನೀತಿ ಸರಿಯಾಗಿದ್ದರೂ ರಾಷ್ಟ್ರೀಯ ಸರ್ಕಾರದ ಬೇಡಿಕೆಗೆ ಸಾಕಷ್ಟು ಒತ್ತು ಕೊಡದಿದ್ದುದು, ಒಟ್ಟಾರೆ ಕಹಿ ಸನ್ನಿವೇಶದಲ್ಲಿ ಎಡ ರಾಷ್ಟ್ರೀಯ ವಾದಿಗಳು, ಪ್ರಗತಿಪರರು ಮತ್ತು ಕಾರ್ಮಿಕ ಬೆಂಬಲಿಗರು ಪಕ್ಷದಿಂದ ದೂರ ಸರಿದರು.

ಮೊದಲ ಯುದ್ಧದಂತೆ ಈ ಯುದ್ಧವೂ ಕಾರ್ಮಿಕರಿಗೆ ಸಂಕಷ್ಟಗಳನ್ನೂ, ಬಂಡವಾಳಿಗರಿಗೆ ಅಪಾರ ಲಾಭವನ್ನೂ ತಂದಿತು. ಮಾಲೀಕರು ಆಕ್ರಮಕ ನೀತಿ ಅನುಸರಿಸಿದರು. ಉತ್ಪಾದನೆ ಹೆಚ್ಚಿಸಲು ಮೂರು ಪಾಳಿಗಳ ಕೆಲಸ ಜಾರಿಗೆ ಬಂತು. ಹಲವು ಕಡೆ ದಿನದ ಕೆಲಸ ಅವಧಿ ಸಹ 10–12 ಗಂಟೆಗಳವರೆಗೆ ಏರಿತು. ಕೆಲಸದ ತೀವ್ರತೆ, ಮತ್ತು ಭಾರ ಏರಿಸಲಾಯಿತು. ಇದ್ದ ಬದ್ದ ನಿರ್ಬಂಧಗಳು, ಕೆಲಸದ ಪರಿಸ್ಥಿತಿಗಳನ್ನು ಸಡಿಲಿಸಲಾಯಿತು 17ರಿಂದ 50 ವರ್ಷದವರೆಗಿನ ಯಾರೇ ಆಗಲಿ ಕುಶಲಿ ಅಥವಾ ಅಲ್ಲದವರನ್ನು ರಾಷ್ಟ್ರೀಯ ಸೇವೆಯಾಗಿ ಎಲ್ಲಿ ಬೇಕಾದರೂ ಬಳಸಿಕೊಳ್ಳಬಹುದು. ಮತ್ತು ಇದನ್ನು ನಿರಾಕರಿಸಿದವರಿಗೆ ಶಿಕ್ಷಿಸುವ ಸುಗ್ರೀವಾಜ್ಞೆ ಬಂತು. ಕೆಲಸ ಬಿಡುವುದು, ಗೈರುಹಾಜರಿಯಾಗುವುದೂ ಶಿಕ್ಷಾರ್ಹ ಅಪರಾಧವಾಯಿತು. 3000 ಕಾರ್ಮಿಕರು ಈ ರೀತಿ ಶಿಕ್ಷೆಗೆ ಗುರಿಯೂ ಆದರು. ಕಾರ್ಮಿಕರ ಮುಷ್ಕರದ ಹಕ್ಕು ಕಿತ್ತುಕೊಳ್ಳಲಾಯಿತು. ಕಾರ್ಮಿಕರ ನಿಜ ವೇತನ ಹಲವು ಕೈಗಾರಿಕೆಗಳಲ್ಲಿ ಕಡಿಮೆಯಾಯಿತು. ಆದರೆ ಬಂಡವಾಳಿಗರ ಲಾಭ ಎಲ್ಲ ಕ್ಷೇತ್ರಗಳಲ್ಲಿ 2 ರಿಂದ 3 ಪಟ್ಟು ಏರಿತು.

ಈ ಅವಧಿಯ ಮುಖ್ಯ ಮುಷ್ಕರ 1939 ಅಕ್ಟೋಬರ್‌ನಲ್ಲಿ ನಡೆದ ಮುಂಬಯಿಯ ಕಾರ್ಮಿಕರ ಯುದ್ಧ - ವಿರೋಧಿ ಸಾರ್ವತ್ರಿಕ ಮುಷ್ಕರ. 90,000 ಕಾರ್ಮಿಕರು ಪಾಲುಗೊಂಡಿದ್ದ ಈ ಮುಷ್ಕರ ವಿಶ್ವ ಕಾರ್ಮಿಕ ಚಳುವಳಿಯಲ್ಲೇ ಪ್ರಥಮ ಮುಷ್ಕರವಾಗಿತ್ತು.

ಈ ಅವಧಿಯ ಎಲ್ಲ ಆರ್ಥಿಕ ಹೋರಾಟಗಳು ಏರುತ್ತಿರುವ ಬೆಲೆಗಳಿಗೆ ಪರಿಹಾರ ಕೊಡುವ ತುಟ್ಟಿಭತ್ಯೆ ನೀಡಬೇಕೆಂಬ ಬೇಡಿಕೆ ಮುಂದಿಟ್ಟವು. ಈ ಬೇಡಿಕೆಯ ಮೇಲೆ 1940ರಲ್ಲಿ ಮುಂಬಯಿಯಲ್ಲಿ 1,75,000 ಗಿರಣಿ ಕಾರ್ಮಿಕರ ಸಾರ್ವತ್ರಿಕ ಮುಷ್ಕರ ನಡೆಯಿತು. ಇದು ತುಟ್ಟಿಭತ್ಯೆಗೆ ಪ್ರಥಮ ಹೋರಾಟವಾಗಿತ್ತು. ಈ ಮುಷ್ಕರವನ್ನು ಬೆಂಬಲಿಸಲು ಆಮೇಲೆ ಸಾರ್ವತ್ರಿಕ ಮುಷ್ಕರಕ್ಕೆ ಕರೆ ನೀಡಲಾಯಿತು. ಮೂರು ಲಕ್ಷ ಕಾರ್ಮಿಕರು ಇದರಲ್ಲಿ ಭಾಗವಹಿಸಿದ್ದರು. ಸೆಣಬು ಕೈಗಾರಿಕೆಯಲ್ಲಿ ಶೇಕಡಾ 25 ಯುದ್ಧ-ಸಮಯದ ಭತ್ಯೆ ನೀಡಬೇಕೆಂದು ಹೋರಾಟಗಳು ನಡೆದವು. ಬೆಂಗಳೂರಿನಲ್ಲಿ ಬೋನಸ್, ವೇತನ ಏರಿಕೆ, ವಜಾ ಆದ ಕೆಲಸಗಾರರ ವಾಪಸು ತೆಗೆದುಕೊಳ್ಳುವ ಬಗ್ಗೆ ಹಾಗೂ ಕ್ವಿಟ್ ಇಂಡಿಯಾ ಚಳುವಳಿಯ ಬೆಂಬಲವಾಗಿ 75 ದಿನಗಳ ಸಫಲ ಮುಷ್ಕರ ನಡೆಯಿತು

1940 ರಲ್ಲಿ ನಡೆದ 18ನೇ ಎ. ಐ. ಟಿ. ಯು. ಸಿ. ಅಧಿವೇಶನದಲ್ಲಿ ಯುದ್ಧದ ಬಗ್ಗೆ ಕಾಂಗ್ರೆಸ್‌ನ ನೀತಿಯನ್ನೇ ಸುಮಾರಾಗಿ ಅನುಮೋದಿಸಲಾಯಿತು. ಈ ನೀತಿಯನ್ನು ವಿರೋಧಿಸಿ ಮತ್ತು ಬ್ರಿಟೀಷರೊಂದಿಗೆ ಪೂರ್ಣ ಸಹಕಾರ ಕೋರಿ ಎಂ. ಎನ್. ರಾಯ್ ಮತ್ತು ಬೆಂಬಲಿಗರು ಎ. ಐ. ಟಿ. ಯು. ಸಿ. ಬಿಟ್ಟು ಇಂಡಿಯನ್ ಲೇಬರ್ ಫೆಡರೇಷನ್ ಎಂಬ ಸಂಘಟನೆ ಕಟ್ಟಿದರು. 19ನೇ ಅಧಿವೇಶನ ಯುದ್ಧದ ಸ್ವರೂಪ ಬದಲಾದ ಮೇಲೆ 1942ರಲ್ಲಿ

(29ನೇ ಪುಟ ನೋಡಿ)

ಕರ್ಫ್ಯೂ

ಫ್ಯಾಕ್ಟರಿಯಲ್ಲಿ ಲಾಕೌಟು
ಕಾಲೊನಿಗೆ ಪೋಲೀಸು ಪಹರಿ
ರಾತ್ರಿ
ಮನೆ ಬಾಗಿಲು ಬಡಿದಾಗ ಕಿಟಕಿ
ಮಂದ ಬೆಳಕಲ್ಲಿ ಕಂಡೆ
ಒಮ್ಮೆ ಫ್ಯಾಕ್ಟರಿ ಮಾಲಿಕ
ಒಮ್ಮೆ ಬಾಡಿಗೆ ಗೂಂಡ
ಒಮ್ಮೆ ಪೋಲೀಸು
"ನಿನ್ನವಳು ಬೇಕು ನನಗೆ
ಚೌಕಾಶಿ ಬೇಡ ಹೊರಗೆ ಸೆಕ್ಷನ್ ನೂರನಲ್ವತ್ತನಾಲ್ಕು"
ನನ್ನೊಳಗಿನ ಸ್ವರವೆಲ್ಲ ಸೇರಿಸಿ ಕೂಗಿದೆ
ಶಾಂತಿಭಂಗದ ಆರೋಪದ ಮೇಲೆ ನನಗೆ ಗಡಿಪಾರು
ಕಾಲೋನಿಯಲ್ಲಿ
ಅಗ್ಗದ ಸೆಂಟಿನ
ರಕ್ತದ ವಾಸನೆ
ಚಂದ್ರನ ಮುಖದಲ್ಲಿ ಗಾಯದ ಕಲೆ
ಕರ್ಫ್ಯೂ ಕತ್ತಲಲಿ ನೆಲ ನರಳಿತು.

—ಪ್ರಮೋದ್

●

ಕಪ್ಪು ಮುಖದ ಕೆಂಪು ಜನ

ಕಬ್ಬಿಣ ಕಲ್ಲಿನ ಗುಡ್ಡದಲ್ಲಿ ಒಂದು ದಿನ
ಒಂದು ದಿನ ನಾ ಕಂಡೆ ನನ್ನ ಜನರನ್ನು
ಕಪ್ಪು ಮುಖವಿರುವ ಕೆಂಪು ಜನರನ್ನು
ಕಬ್ಬಿಣ ಕಲ್ಲಿನ ಬಣ್ಣವೆಲ್ಲ ಮೈಮೇಲಿತ್ತು
ಮೈಯಲ್ಲಿನ ಮೂಳೆಗಳೆಲ್ಲ
ಪಾರದರ್ಶಕದ ಹಾಗೆ
ಕಾಣಿಸುತ್ತಿತ್ತು
ಕೆಂಪು ಕೆಂಪಾಗಿ ಕಾಣಿಸುತ್ತಿತ್ತು
ಆದರೆ
ಮೈಯಲ್ಲಿ ಕೆಂಪು ರಕ್ತವೇ ಇರಲಿಲ್ಲ
ಎಲ್ಲಾ ಬಂಡವಾಳಗಾರರ ಜೇಬಿಗೆ
ಕೆಂಪು ರಕ್ತ ಕಪ್ಪು ಹಣವಾಗಿ ಸೇರಿತ್ತು
ನಾ ಕಂಡೆ ಒಂದು ದಿನ ಕೆಂಪು ಜನರನ್ನು
ಕೆಂಪು ಮೂಳೆಗಳೆ
ಕಾಣಿಸುವ ನನ್ನ ಜನರನ್ನು
ಒಂದೊಂದು ಮೂಳೆಯೂ
ಕೂಗಿ ಹೇಳುತ್ತಿತ್ತು
ನನ್ನ ಶ್ರಮಕ್ಕೆ ಬೆಲೆಯಿಲ್ಲ ಇಲ್ಲಿ
ಶ್ರಮಶಕ್ತಿಯ ಬೆಲೆ ನನಗೆ ಸೇರುವುದಿಲ್ಲ
ದೂರದಲ್ಲಿ ಕಂಡೆ
ಕೆಂಪು ಬೆಳಕಿನ
ಆಶಾಕಿರಣ
ನನ್ನ ಜನರ ಮುಕ್ತಿಗಾಗಿ ಬರುತ್ತಿದ್ದರು
ಬೆಂಕಿಯ ಚೆಂಡಾಗಿ
ಕಪ್ಪು ಮುಖದ ಕೆಂಪು ಜನರ ಮುಕ್ತಿಗಾಗಿ
ವಿಶ್ವದ ದುಡಿಯುವ ಜನರೆಲ್ಲಾ ಒಗ್ಗಟ್ಟಾಗಿ

— ಎಸ್. ರಾಮಚಂದ್ರನಾವಡ

ದತ್ತಾ ಸಾಮಂತ ಆರ್ಥಿಕವಾದದಲ್ಲಿ ಒಂದು ಪಾಠ

(13ನೇ ಪುಟದಿಂದ)

ರಣೆಗಳು ಬಹಳ ಪ್ರಚಾರ ಪಡೆದಿವೆ. ಆದರೆ ದೀರ್ಘಕಾಲ ಮುಷ್ಕರ ನಡೆದು ಅವು ಏನೂ ಫಲಕಾಣದ ಎಷ್ಟೋ ಉದಾಹರಣೆಗಳು ಅಷ್ಟೊಂದು ಬೆಳಕಿಗೆ ಬಂದಿಲ್ಲ. ಆದರೂ 1977ರ ಆರಂಭದಲ್ಲಿ ದತ್ತಾಸಾಮಂತರು ಮುಂಬೈಯ ಕಾರ್ಮಿಕರ ನಡುವೆ ಅಪಾರ ಬೆಂಬಲ ಗಳಿಸಿದರೆಂಬುದು ನಿಜ. ಇದನ್ನು ಅರ್ಥಮಾಡಿಕೊಳ್ಳಬೇಕಾದರೆ 1977ರ ಮೊದಲು ಮುಂಬೈ ಕಾರ್ಮಿಕ ರಂಗದ ಸ್ಥಿತಿಯ ಬಗ್ಗೆ ಪರಿಶೀಲಿಸುವುದಗತ್ಯ.

1972 ರಿಂದ 1977 ರವರೆಗೆ ಮುಂಬೈ ಕಾರ್ಮಿಕ ರಂಗದಲ್ಲಿ ಆಟಾಟೋಪ ನಡೆಸುತ್ತಿದ್ದದ್ದು ಶಿವಸೇನೆಯ ಸಂಘಟನೆಗಳು. ಇವೆಲ್ಲಾ ಅರೆಫ್ಯಾಸಿಸ್ಟ್ ಸಂಘಟನೆಗಳು. ಕಮ್ಯುನಿಸ್ಟ್ ನೇತೃತ್ವದ ಕಾರ್ಮಿಕ ಸಂಘಟನೆಗಳನ್ನು ಮುರಿಯುವ ಏಕೈಕ ಉದ್ದೇಶದಿಂದ ಸರಕಾರ ಮತ್ತು ಆಡಳಿತ ವರ್ಗಗಳು ಶಿವಸೇನೆಗೆ ಸಂಪೂರ್ಣ ಬೆಂಬಲ ಕೊಟ್ಟದ್ದರ ಪರಿಣಾಮವಾಗಿ ಈ ಅರೆಫ್ಯಾಸಿಸ್ಟ ಸಂಘಟನೆಗಳಿಗೆ ಮುಂಬೈ ಕಾರ್ಮಿಕ ರಂಗದಲ್ಲಿ ಕಾಲೂರಲು ಸಾಧ್ಯವಾಯಿತು. ಸಹಜವಾಗಿಯೇ ಕಾರ್ಮಿಕರು ಈ ಅರೆಫ್ಯಾಸಿಸ್ಟರ ಗೂಂಡಾಗಿರಿಗೆ ಯಾವುದೇ ರೀತಿಯಲ್ಲಾಗಲೀ ಉತ್ತರ ನೀಡಬಲ್ಲ ನಾಯಕನೊಬ್ಬನನ್ನು ಸ್ವಾಗತಿಸುವ ಸ್ಥಿತಿಗೆ ಬಂದಿದ್ದರು. ದತ್ತಾ ಸಾಮಂತರ ಭಯೋತ್ಪಾದಕ ತಂಡ ಆ ಕೆಲಸಮಾಡಿಕೊಟ್ಟಿತು. ಶಿವಸೇನೆಯನ್ನು ಪೋಷಿಸಿಕೊಂಡಿದ್ದ ಆಡಳಿತ ವರ್ಗಗಳು ಸಹಜವಾಗಿಯೇ ಭಯಭೀತಗೊಂಡವು. ಇದೇ ಭಯೋತ್ಪಾದಕ ವಿಧಾನದಿಂದ 300-400 ರೂ.ಯಷ್ಟು ವೇತನ ಹೆಚ್ಚಳ 'ಕೊಡಿಸುವುದು' ಆರಂಭದಲ್ಲಿ ದತ್ತಾ ಸಾಮಂತ್‌ಗೆ ಸಾಧ್ಯವಾಯಿತು. ಮೂರು ದಶಕಗಳ ಕಾಲ ಆರ್ಥಿಕವಾದದ ತಪ್ಪುದಾರಿಯಲ್ಲಿ ಟ್ರೈನಿಂಗ್ ಪಡೆದ ಕಾರ್ಮಿಕರಲ್ಲಿ 'ಹೆಚ್ಚು ಗಳಿಸಿಕೊಡುವವನಿಗೆ ನಮ್ಮ ಬೆಂಬಲ' ಎಂಬ ಕ್ಷುದ್ರಗ್ರಾಹಕ ಬುದ್ಧಿಯಿದ್ದರೆ ಆಶ್ಚರ್ಯವಿಲ್ಲ. ದತ್ತಾಸಾಮಂತ್ ಇದರ ಲಾಭ ಪಡೆದರು. ಆದರೆ ಈ ರೀತಿ ಲಾಭ ಪಡೆಯುವುದು ಸದಾ ಸಾಧ್ಯವಿಲ್ಲವೆಂಬುದು ಈಗ ಸ್ಪಷ್ಟವಾಗುತ್ತಿದೆ. ಇದು ಅವರ ಕಾರ್ಯವಿಧಾನದ ದೌರ್ಬಲ್ಯ ಮಾತ್ರವಲ್ಲ; ಆರ್ಥಿಕವಾದೀ ನಿಲುವಿನ ಮಿತಿಯೂ ಹೌದು. ಮೇಲೆ ಪಟ್ಟಿ ಮಾಡಿದ ನಂ. 3 ರಿಂದ 7ರ ವರೆಗಿನ ಅಂಶಗಳೆಲ್ಲಾ ಆರ್ಥಿಕವಾದದ ಲಕ್ಷಣಗಳೇ. ಈ ಮಿಲಿಟೆಂಟ್ ಆರ್ಥಿಕವಾದ ಕಾರ್ಮಿಕರನ್ನು ಯಾವ ಸ್ಥಿತಿಗೆ ತಂದು ನಿಲ್ಲಿಸಿದೆಯೆಂದರೆ ದತ್ತಾಸಾಮಂತರೆಂದರೆ ಮೊದಲು ಬೆಚ್ಚಿಬೀಳುತ್ತಿದ್ದ ಮಾಲಿಕರು ಈಗ ಅವರನ್ನೇ ಬಯಸುತ್ತಿವೆ. ಯಾಕೆಂದರೆ ಸಾಮಂತ ತಮಗೆ ನಷ್ಟ ಮಾಡಿಸುವುದಿಲ್ಲ, ಲಾಭವೇ ಮಾಡುತ್ತಾರೆ ಎಂಬುದನ್ನು ಅವರು ಮನಗಂಡಿದ್ದಾರೆ. ಆದ್ದರಿಂದ ಸಾಮಂತರ ವ್ಯವಹಾರ ಇನ್ನೂ ಸುಸೂತ್ರವಾಗಿ ಮುಂದುವರಿಯುತ್ತಿದೆ. ಬಂಡವಾಳಶಾಹಿಗಳು ಹಾಗೂ ಸರಕಾರ ಸಾಕು ಎಂದು ನಿರ್ಧರಿಸುವವರೆಗೆ ಅಥವಾ ಭ್ರಮಾಧೀನವಾಗಿರುವ ಕಾರ್ಮಿಕ ವರ್ಗ ಎಚ್ಚೆತ್ತುಕೊಳ್ಳುವವರೆಗೆ ಈ 'ಸಾಮಂತ್ ಪ್ರಕ್ರಿಯೆ' ಮುಂದುವರೆಯಬಹುದು. ಬಂಡವಾಳಶಾಹೀ ವ್ಯವಸ್ಥೆಯಲ್ಲಿ ಅದರ ಸೋಲು ಅನಿವಾರ್ಯ. ಆದರೆ ಅಷ್ಟರೊಳಗೆ ನಮ್ಮ ದೇಶದ ಕಾರ್ಮಿಕ ಚಳುವಳಿ ಎರಡು ಹೆಜ್ಜೆ ಹಿಂದೆ ಹೋಗಿರುತ್ತದೆ.

ಚಳುವಳಿಯಲ್ಲಿ ಹಿಂಜರಿತ

ನಿಜವಾದ ಅರ್ಥದಲ್ಲಿ ದತ್ತಾ ಸಾಮಂತರದ್ದು ಕಾರ್ಮಿಕ ಸಂಘಟನೆಯೇ ಅಲ್ಲ. ಅದು ಕೇವಲ ಮುಷ್ಕರ ಸಮಿತಿ ಎಂದು ಕೆಲವರ ವಿಶ್ಲೇಷಣೆ. ಅದೇನೇ ಇರಲಿ, ದತ್ತಾಸಾಮಂತರು ತಮ್ಮ ಕಾರ್ಯವಿಧಾನದಿಂದ ಕಾರ್ಮಿಕರ ಸಮರಶೀಲತೆಯನ್ನು ಸಂಕುಚಿತ ಸ್ವಾರ್ಥಪರ ಹೋರಾಟಗಳಲ್ಲಿ ಸಿಲುಕಿಸಿ ಭಾರತದ ಕಾರ್ಮಿಕ ಚಳುವಳಿಯಲ್ಲಿ ಹಿಂಜರಿತಕ್ಕೆ ಕಾರಣರಾಗಿದ್ದಾರೆಂಬುದರಲ್ಲಿ ಸಂಶಯವಿಲ್ಲ. ಸಾಮಂತ್ ತನಗೆ ಯಾವ ಸಿದ್ಧಾಂತವೂ ಇಲ್ಲ ಎನ್ನುತ್ತಾರೆ. ಆದರೆ ಗೋದ್ರೇಜ್ ಪ್ರಕರಣದಿಂದ ಹಿಡಿದು ಅವರ ಹೋರಾಟ ತೀವ್ರರೂಪ ಪಡೆದಾಗಲೆಲ್ಲಾ ಐಕ್ಯ ಕಾರ್ಯಾಚರಣೆ ನಡೆಸಿ ಅವರಿಗೆ ಬೆಂಬಲ ಸಂಘಟಿಸಿದ ಎಡಪಂಥೀಯರ ಪ್ರಯತ್ನಗಳನ್ನು ಉಪೇಕ್ಷಿಸಿದ್ದು ಮಾತ್ರವಲ್ಲ ಅವರ ಸಂಘಟನೆಗಳನ್ನು ಮುರಿಯಲು ಅವರು ಪ್ರಯತ್ನಿಸಿದರು. ಆದರೆ ಜನತಾ, ಕಾಂಗ್ರೆಸ್‌ನೊಂದಿಗೆ ಐಕ್ಯ ಕಾರ್ಯಾಚರಣೆಗೆ ಅವರ ಅಡ್ಡಿಯೇನಿರಲಿಲ್ಲ. ಆರ್ಥಿಕವಾದದ ನಿಜವಾದ ಉದ್ದೇಶವನ್ನು ಇದು ಬಹಿರಂಗಪಡಿಸುತ್ತದೆ. ಆದ್ದರಿಂದ ಎಡಪಂಥೀಯರು ದತ್ತಾಸಾಮಂತ್ ರೂಪದಲ್ಲಾಗಲೀ ಅಥವಾ ಇನ್ಯಾವುದೇ ರೂಪದಲ್ಲಾಗಲೀ ಆರ್ಥಿಕವಾದ ಇನ್ನೂ ಕಾರ್ಮಿಕರ ನಡುವೆ ಏಕೆ ಬೆಂಬಲ ಗಳಿಸುತ್ತದೆ ಎಂಬುದರ ಬಗ್ಗೆ ತೀವ್ರವಾಗಿ ಯೋಚಿಸಬೇಕು.

ಭಾರತದ ಕಾರ್ಮಿಕರಲ್ಲಿ ವರ್ಗಪ್ರಜ್ಞೆ ಮೂಡಲು ಅಥವಾ ಮೂಡದಿರಲು ಹಲವು ಚಾರಿತ್ರಿಕ ಕಾರಣಗಳಿರಬಹುದು. ಇಂಟಕ್ ಹಾಗೂ ಇತರರು ಈ ಬಗ್ಗೆ ಪ್ರಜ್ಞಾಪೂರ್ವಕವಾಗಿ ಪ್ರಯತ್ನಿಸಿರಬಹುದು. ಅದರೊಂದಿಗೆ ಸ್ವತಃ ಎಡಂಥೀಯರೇ ಆಗಾಗ ಈ ಆರ್ಥಿಕವಾದದ ಸುಳಿಯಲ್ಲಿ ಸಿಕ್ಕು ಜಡವಾಗಿದ್ದಾರೆ ಎಂಬುದೂ ವಾಸ್ತವ ಸಂಗತಿ. ಎಡಪಂಥೀಯ ಕಾರ್ಮಿಕ ಚಳುವಳಿಗೆ ಸೇರಿದ ಒಂದು ವಿಭಾಗದಲ್ಲಿ ಕಾಂಗ್ರೆಸ್‌ನ ಪ್ರಗತಿಶೀಲತೆಯ ಬಗೆಗಿದ್ದ ಭ್ರಮೆ, ಅದರಿಂದ ತುರ್ತುಪರಿಸ್ಥಿತಿ ಹಾಗೂ ಇತರ ಮಹತ್ವಪೂರ್ಣ ಸಂದರ್ಭಗಳಲ್ಲಿ ಕಂಡುಬಂದ ಗೊಂದಲ ಇದಕ್ಕೆ ಒಂದು ಉದಾಹರಣೆ. ವರ್ಷಗಳ ಕಾಲ ಶ್ರಮವಹಿಸಿ ಕಟ್ಟಿದ ಸಂಘಟನೆಗಳನ್ನು ಒಬ್ಬ ಸಾಮಂತ ಇದ್ದಕ್ಕಿದ್ದಂತೆ ಅವತರಿಸಿ ನಿಷ್ಕ್ರಿಯಗೊಳಿಸುವ ಪ್ರಕ್ರಿಯೆ ಇನ್ನು ಮುಂದಾದರೂ ನಡೆಯದಂತೆ ಎಡಪಂಥೀಯರು ಎಚ್ಚರ ವಹಿಸಬೇಕು. ಇದಕ್ಕಾಗಿ ಕಾರ್ಮಿಕರಲ್ಲಿ ವೈಜ್ಞಾನಿಕ ದೃಷ್ಟಿಕೋನ ಪರಿಸರದ ಬಗ್ಗೆ ಸಂಪೂರ್ಣ ಅರಿವು, ವರ್ಗಪ್ರಜ್ಞೆ ಮೂಡಿಸುವುದನ್ನು ಟ್ರೇಡ್ ಯೂನಿಯನ್ ಚಟುವಟಿಕೆಯ ಅನಿವಾರ್ಯ ಅಂಗವಾಗಿ ಪರಿಗಣಿಸಬೇಕು.

ಬಡವರ ಕೂಗು

ಬಡವರ ಮಕ್ಕಳು ಬಂದೆವು ನಾವು
ಕೆಂಬಾವುಟವ ಹಿಡಿದವರು.

ಇನ್‌ಕ್ವಿಲಾಬ್ ಜಿಂದಾಬಾದ್
ಎನ್ನುವ ಗೀತೆಯ ಗಾಯಕರು.

ಬೆವರನು ಸುರಿಸಿ ದುಡಿಯುತ ನಾವು
ಹೊಲದಲಿ ಹೊನ್ನನು ಬೆಳೆದವರು.

ಭೂಮಾಲಿಕರ ಕೈಗಳ ಕೆಳಗೆ
ದುಡಿಯುತ ನಾವು ದಣಿದವರು.

ಶೋಷಕರಿಂದ ಶೋಷಿತರಾಗಿ
ಕತ್ತಲೆಯಲ್ಲೇ ಬೆಳೆದವರು.

ವಂಚನೆ ಮೋಸ ಕಾಣುತ ಇಂದು
ನಿದ್ದೆಯಿಂದ ಎದ್ದವರು.

ರೈತನ ರಕ್ತದ ಓಕುಳಿಯಾಡುವ
ಲಂಚಾಸುರರ ಕಂಡವರು.

ಭ್ರಷ್ಟಾಚಾರರ ಹುಟ್ಟಡಗಿಸಲು
ಕಂಕಣ ತೊಟ್ಟು ಬಂದವರು.

ಅಧಿಕಾರಿಗಳ ಸೊಕ್ಕಡಗಿಸಲು
ಕೆಂಬಾವುಟವ ಹಿಡಿದವರು.

ಅತ್ಯಾಚಾರಗೈಯುವ ದುಷ್ಟರ
ಹೊಡೆದೋಡಿಸಲು ಬಂದವರು.

ಒಂದೇ ತಾಯಿಯ ಮಕ್ಕಳು ನಾವು
ಜಾತಿ ಮತಗಳ ಮರೆತವರು

ಕ್ರಾಂತಿ ಗೀತೆಯ ಹಾಡುತಲಿರುವ
ಹಿಂದು ಮುಸ್ಲಿಂ ಕ್ರೈಸ್ತರು.

—ಕೊಡಿಕಾನ ಅಬ್ದುಲ್

ಕೇಳ್ರೀ ಇವ್ರನ್ನ

ಹೊಟ್ಟೆಗೆ ಅನ್ನ ಇಲ್ಲದೆ
ಮಾನ ಉಳಿಸಾಕ ಬಟ್ಟೆ ಇಲ್ಲದೆ
ಮೈ ರಕ್ಷಿಸೋ ಮನೆ ಇಲ್ಲದೆ
ಅರೆ ಹೊಟ್ಟೆ ತಿಂದು ಬದುಕುವ
ಅರೆ ಮೇಲೆ ಮಲಗುವ
ಇವ್ರನ್ನ ಕೇಳ್ರೀ ?

ನಿಮಗ ಮಿಲಿಟರಿಸಂ ಬೇಕಾ?
ನಿಮಗ ಡಿಕ್ಟೇಟರ್ ಷಿಪ್ ಬೇಕಾ?
ನಿಮಗ ಡೆಮಾಕ್ರಸಿ ಬೇಕಾ?
ಇನ್ನೂ ಏನಾದ್ರೂ ಬೇಕಾ? ಅಂತ
ಹಾಂಗ ಉತ್ರಕ್ಕೂ ಸಲ್ಪ ನಿಲ್ರಿ

ಆಗಿವ್ರು ಹೇಳ್ತಾರ, ಏನಂತ !
ನಮಗ ಇನ್ಯಾವದೂ ಬ್ಯಾಡ,
ಹೊಟ್ಟೆ ತುಂಬ ಅನ್ನ
ಮೈತುಂಬಾ ಬಟ್ಟೆ
ಮಾಡಾಕ ಮೈತುಂಬಾ ಕೈತುಂಬಾ ಕೆಲಸ
ಇರಾಕ ಮನಿ ಕೊಡೋ ಸರಕಾರ
ನಮಗ ಬೇಕು ಅಂತ.

—ಹೆಚ್. ಶೇಷಗಿರಿರಾವ್

ಜೀತ ಪದ್ಧತಿ–ಒಂದು ಉಲ್ಲೇಖ

—ಡಾ|| ಜಿ. ರಾಮಕೃಷ್ಣ

ಶೂದ್ರಂ ತು ಕಾರಯೇದ್ದಾಸ್ಯಂ ಕ್ರೀತಮಕ್ರೀತಮೇವ ವಾ||

—ಮನುಸ್ಮೃತಿ

ಮನುಷ್ಯರನ್ನು ಖಾಸಗಿ ಆಸ್ತಿಯನ್ನಾಗಿ ಮಾಡಿಕೊಂಡು, ಅವರನ್ನು ಹೀರಿ ಹಿಪ್ಪೆಕಾಯಿಮಾಡಿ ಅವರ ವ್ಯಕ್ತಿತ್ವವನ್ನು ನಾಶಮಾಡುವ ಕೆಟ್ಟ ಪದ್ಧತಿಗಿಂತಲೂ ಹೀನ ಸಂಸ್ಕೃತಿ ಇನ್ನೊಂದಿರಲಾರದು. ಭಾರತೀಯ ಸಂಸ್ಕೃತಿಯ ಒಂದು ಅಂಗವಾಗಿ ಉಳಿದು ಬಂದಿರುವ ಜೀತ ಪದ್ಧತಿ ಇಂತಹದೊಂದು ಅನಿಷ್ಟ ಪದ್ಧತಿ.

ಈ ಜೀತ ಪದ್ಧತಿ ಇವತ್ತು ನಿನ್ನೆ ಹುಟ್ಟಿಕೊಂಡ ಪದ್ಧತಿಯು ಅಲ್ಲವೆಂಬುದಕ್ಕೆ ಬೇಕಾದಷ್ಟು ನಿದರ್ಶನಗಳಿವೆ. ಒಂದನ್ನು ಇಲ್ಲಿ ಉದಾಹರಿಸಬಹುದು : 1808ರಲ್ಲಿ, ಅಂದರೆ 167 ವರ್ಷಗಳ ಹಿಂದೆ, ಜೀತ ಮತ್ತು ದಾಸ್ಯ ಪದ್ಧತಿ ಹೇಗೆ ತಾಂಡವವಾಡುತ್ತಿದ್ದಿತೆಂದು ತೋರಿಸುವ ಒಂದು ದಾಖಲೆ ಅದು. ಶಿವಮೊಗ್ಗ ಜಿಲ್ಲೆಯ ಆದಿನಹಳ್ಳಿ ಹೋಬಳಿ ಹುಲಿಮನೆ ಗ್ರಾಮದ ಪಟೇಲ್ ಸುಬ್ಬಯ್ಯನವರ ಮನೆಯಲ್ಲಿದ್ದ ಕಡತದಲ್ಲಿ ದೊರೆತ ತಾಮ್ರ ಶಾಸನವೊಂದನ್ನು 1929ರಲ್ಲಿ ಮೈಸೂರು ವಿಶ್ವವಿದ್ಯಾನಿಲಯವು ಪ್ರಕಟಿಸಿತು. ಅದು ಹೀಗಿದೆ :— "ಸ್ವಸ್ತಿಶ್ರೀ ಜಯಾಭ್ಯುದಯ ಶಾಲಿವಾಹನ ಶಕ ವರುಷಂಗಳು 1730ನೇ ಪರಿವರ್ತಮಾನಕ್ಕೆ ಸಂದು ಸಲುವ ವಿಭವನಾಮ ಸಂವತ್ಸರದ ಆಶ್ವೀಜ ಶುಕ್ಲ 13 ರವಿವಾರದಲ್ಲೂ ಶ್ರೀಮತು ಹುಲಿಮನೆ ಕಾಳಿ ಸುಬ್ಬಣ್ಣನವರ ಮಗ ಶೇಷಯ್ಯನವರಿಗೆ ವೇದಮೂರ್ತಿಗಳಾದ ಯಿಕ್ಕೇರಿ ಶೇಷಾಚಾರ್ಯರ ಮಗ ಭೀಮಾಚಾರ್ಯನು ಬರೆಸಿ ಕೊಟ್ಟ ಹೊಲೆಯಾಳು ಹೆಣ್ಣಾಳು ಕ್ರಯ ಚೀಟಿಯ ಕ್ರಮವೆಂತೆಂದರೆ, ನಾನು ನನ್ನ ಅವಸರ ನಿಮಿತ್ತವಾಗಿ ನನ್ನ ಹೊಲೆಯಾಳು ಕನ್ನನ ಹೆಂಡತಿ ಚೌಡಿಯೆಂಬ ಹುಡುಗಿಯನ್ನು ನಿಮಗೆ ಕ್ರಯಕ್ಕೆ ಕೊಟ್ಟೆನಾಗಿ ಈ ಹೆಣ್ಣಾಳಿಗೆ ಬುದ್ಧಿವಂತರು ಕಂಡು ಕಟ್ಟಿದ ಕ್ರಯ ಮೂರು ವರಹವನ್ನು ತೆಗೆದುಕೊಂಡು ಈ ಹೆಣ್ಣಾಳು ಹುಡುಗಿಯನ್ನು ನಿಮಗೆ ಕ್ರಯ ಮೂಲಕ್ಕೆ ಮಾರಿದೆನಾಗಿ ಈ ಹೆಣ್ಣಿಗೆ ಆದಿ ಅಡಮು ಅಡ್ಡಿ ಸಡ್ಡಿಯೇನು ಉಂಟಾದ್ದನ್ನು ನಾನೇ ನೋಡಿಕೊಂಡೇನು ಎಂದು ಬರೆಸಿ ಕೊಟ್ಟ ಕ್ರಯ ಚೀಟು ಹಣ ಸಂದ ನಿಶಿಧಿಯಾಗಿದೆ. ಸಾಧನಯಿಂತಪ್ಪುದಕ್ಕೆ ಸಾಕ್ಷಿಗಳು ಬೇದೂರ ಸುಬ್ಬಯ್ಯ, ಬಾಳೆಹಳ್ಳಿ ಪಂಡ್ರಿ ದೊಡ್ಡಯ್ಯ." ಇದು "ವೇದಮೂರ್ತಿಗಳು" ಅನೂಚಾನವಾಗಿ ಅನುಸರಿಸಿಕೊಂಡು ಬಂದ ಕ್ರೂರಪದ್ಧತಿ. ಇಂತಹ ಎಷ್ಟು "ಚೌಡಿ"ಯರನ್ನು ಎಷ್ಟು "ಭೀಮಾಚಾರ್ಯ"ರುಗಳು "ಮೂರುವರಹ"ಗಳಿಗೆ ಮಾರಿ ತಮ್ಮ ನೀಚ ಸಂಸ್ಕೃತಿಯನ್ನು ಪಾಲಿಸಿಕೊಂಡರೆಂಬುದನ್ನು ಯೋಚಿಸಿದರೆ ಮೈ ಉರಿಯುವುದು ಸಹಜ. ಭಾರತದ ಜನತೆ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದ್ದು ಈ ಪುಣ್ಯಫಲಗಳನ್ನು ಮುಂದುವರೆಸಿಕೊಂಡು ಬರುವುದಕ್ಕೇ ಏನು ? ಪ್ರತಿಗಾಮಿಗಳ ಅಮಾನುಷ ವರ್ತನೆಗಳ ನಿದರ್ಶನಗಳಿಗೆ ಕಡಿಮೆಯೇ ?

ಅದೇ ಮೈಸೂರು ವಿಶ್ವವಿದ್ಯಾನಿಲಯದ ಪ್ರಕಟಣೆಯಲ್ಲಿ ಇನ್ನೂ ಕೆಲವು ಶಾಸನಗಳ ಪೂರ್ಣಪಾಠ ಕೊಡಲಾಗಿದೆ. ಭೂಮಿಯ ಒಡೆಯರು ದೇವರು ಮತ್ತು "ಮೇಲು ಜಾತಿ"ಯ ಹೆಸರಿನಲ್ಲಿ ಉಳುವವನಿಗೆ ಭೂಮಿಯ ಒಡೆತನ ತಪ್ಪಿಸುವುದರಲ್ಲಿ ಎಂತಹ ನಿಸ್ಸೀಮ ಉಪಾಯಗಳನ್ನು ಹೂಡಿದ್ದರೆಂದು ಈ ಕೆಲವು ಶಾಸನಗಳಿಂದ ಸ್ಪಷ್ಟವಾಗಿ ತಿಳಿಯುತ್ತದೆ. ಶಿಕಾರಿಪುರ ತಾಲ್ಲೂಕಿನ ಕಾಡೇಯನಂದಿ ಹಳ್ಳಿಯ ಹತ್ತಿರದ ಬಾಳು ಬೀಡು ದೇವಸ್ಥಾನದ ಹತ್ತಿರ ದೊರೆತ ಶಾಸನದಲ್ಲಿ "ಬುದ್ಧಿವಂತ" ಜನರು ಭಾರೀ ಜಮೀನ್ದಾರರ ಅಡಿಯಾಳುಗಳಾಗಿ ನುಡಿದದ್ದು ಹೀಗಿದೆ: "ದೇವರು ಮತ್ತು ಬ್ರಾಹ್ಮಣರಿಗೆ ಸೇರಿದ ಆಸ್ತಿಯನ್ನು ಪಡೆದುಕೊಂಡರೆ ಅಂತಹ ಪಾಪಿಗಳು ಚೀರಿ ಲೋಕದಲ್ಲಿ ಹದ್ದಿನ ಎಂಜಲನು ತಿಂದು ಜೀವಿಸುತ್ತಾರೆ." [ದೇವಸ್ವಂ ಬ್ರಾಹ್ಮಣಸ್ವಂ ಚ ಲೋಭೇನೋಪಹಿನಸ್ತಿ ಯಂ:। ಸ ಪಾಪಾತ್ಮಾ ಪರೇ ಲೋಕೇ ಗೃಧ್ರೋಚ್ಛಿಷ್ಟೇನ ಜೀವತಿ|| -73ನೇ ಶಾಸನ, ಪುಟ 29.]

ಈ ಜನ ಭೂಮಿಯನ್ನು ಪಡೆದದ್ದಾದರೂ ಹೇಗೆ? ಯಾವನೋ ಪಾಳೆಗಾರನಿಂದ ದಾನ ಪಡೆದದ್ದು! ಆ ಭೂಮಿಯಲ್ಲಿ ಬೇಸಾಯ ಮಾಡುವವನು ಅದರ ಒಡೆಯನಾಗಬೇಕೆಂದು ಇಚ್ಛಿಸಿದರೆ ಬೇಸಾಯ ಮಾಡದೆ ತಿಂದು ತೇಗುವ ಪರತಂತ್ರ ಜೀವಿಗೆ ಹಾನಿಯಾಗುತ್ತದಲ್ಲ. ಆದ್ದರಿಂದ ಈ ಜನ ಬಿತ್ತಿದ ಭಾವನೆ ಮತ್ತು ನೈತಿಕತೆ ಯಾವುದು? ಮೈಸೂರು ವಿಶ್ವವಿದ್ಯಾನಿಲಯದ 1929ರ ಪ್ರಕಟಣೆಯ 10ನೇ ಶಾಸನದಲ್ಲಿ ಅದಕ್ಕೂ ಉತ್ತರವಿದೆ : "ಸಗರಾದಿ ಅನೇಕ ರಾಜರುಗಳು ಭೂಮಿಯನ್ನು ದಾನ ಮಾಡಿದ್ದಾರೆ. ಆ ಭೂಮಿ ಯಾರಿಗೆ ಸೇರಿದೆಯೋ ಅವರೇ ಅದರ ಫಲ ಪಡೆಯಬೇಕು." (ಬಹುಭಿರ್ವಸುಧಾ ದತ್ತಾ ರಾಜಭಿಸ್ಸಗರಾದಿಭಿ:। ಯಸ್ಯ ಯಸ್ಯ ಯದಾ ಭೂಮಿಸ್ತಸ್ಯ ತಸ್ಯ ತದಾ ಫಲಮ್||)–ಇದು ಹೊಯ್ಸಳ ರಾಜನಾದ ಎರಡನೇ ಬಲ್ಲಾಳನು ಕ್ರಿ. ಶ. 1189 ರಲ್ಲಿ ಮಾಡಿದ ಭೂಮಿಯ ದಾನವನ್ನು ಉಲ್ಲೇಖಿಸುವ ಶಾಸನದ ಮಾತುಗಳು. ಮುಂದುವರಿದು ಶಾಸನ ಹೀಗೆ ತಿಳಿಸುತ್ತದೆ: "ಈ ಧರ್ಮಮಂ ಪ್ರತಿಪಾಲಿಸಿದವರಿಗೆ ವಾರಣಾಸಿಯಲ್ಲಿ ಸಹಸ್ರ ಗೋವುಗಳನ್ನು ಬ್ರಾಹ್ಮಣರಿಗೆ ಕೊಟ್ಟ ಫಲ, ಈ ಧರ್ಮಮಂ ಕೆಡಿಸಿದವರಿಗೆ ಸಹಸ್ರ ಗೋವುಗಳನ್ನೂ, ಕೋಟಿ ಬ್ರಾಹ್ಮಣರುಗಳನ್ನೂ ಕೊಂದ ದೋಷ" ಅಷ್ಟಕ್ಕೆ ಮುಗಿಯಲಿಲ್ಲ ಈ ಮೋಸದ ಕಥೆ. ಶಾಸನದ ಕಡೆಯಲ್ಲಿ ಹೀಗೆ ಹೇಳಲಾಗಿದೆ : "ತಾನು ಅಥವಾ ಇತರರು ದಾನ ಮಾಡಿದ ಭೂಮಿಯನ್ನು ಕಿತ್ತುಕೊಂಡರೆ ನರಕದಲ್ಲಿ 60,000 ವರ್ಷಗಳ ಕಾಲ ಕ್ರಿಮಿಯಾಗಿ ಬಾಳಬೇಕಾಗುತ್ತದೆ!"

ಭಾರತದ ಜನತೆ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದ್ದು ಈ ಪುಣ್ಯ ಫಲಗಳನ್ನು ಮುಂದುವರೆಸಿಕೊಂಡು ಬರುವುದಕ್ಕೇ ಏನು ?

ಇಂತಹ ಮೌಢ್ಯವನ್ನು ತುಂಬಿ ತಮ್ಮ ಶೋಷಣೆಯನ್ನು ನಿರಂತರವಾಗಿ ನಡೆಸಿಕೊಂಡು ಬಂದ ದಾರುಣಕತೆಯ ಫಲವೇ ಇಂದಿನ ಜೀತ ಪದ್ಧತಿ. ಈ ಜೀತದ ನರಕವನ್ನು ತೊರೆದು ಮಾನವತೆಯತ್ತ ನಡೆಯಲು ಭಾರತದ ದುಡಿಯುವ ಜನತೆ ಪಣತೊಟ್ಟಿದೆ. ಸ್ವಾತಂತ್ರ್ಯೋತ್ತರ ಭಾರತ ಜೀತ ಪದ್ಧತಿಯನ್ನು ರದ್ದುಪಡಿಸಲು ಕೆಲವು ಕ್ರಮಗಳನ್ನು ತೆಗೆದುಕೊಂಡಿದ್ದಾಗ್ಯೂ ಈ ಸಮಸ್ಯೆ ತನ್ನ ವಿವಿಧಸ್ವರೂಪಗಳಿಂದ ಇನ್ನೂ ಕಾಡುತ್ತಲೇ ಇದೆ. ಆದ್ದರಿಂದ ಜೀತಪದ್ಧತಿಯ ನಿರ್ಮೂಲನವನ್ನು ಕಾರ್ಯಗತಗೊಳಿಸಿ ಸಹಸ್ರಾರು ಮಂದಿ ಶೋಷಿತ ಕೆಲಸಗಾರರು ತಲೆಯೆತ್ತಿ ಬಾಳುವಂತೆ ಮಾಡಬೇಕಾದುದು ದುಡಿಯುವ ವರ್ಗದ ಜವಾಬ್ದಾರಿ.

[ಡಾ|| ಜಿ. ಆರ್. ರ ಈ ಲೇಖನವನ್ನು ಅವರ ಲೇಖನಗಳ ಸಂಗ್ರಹವಾದ ಮುನ್ನೋಟದಿಂದ ಆಯ್ದುಕೊಳ್ಳಲಾಗಿದೆ]

ಪಾತಾಳದಲಿ ಬಿದ್ದಿದೆ ಬದುಕು

ಹರಕು ಚಿಂದಿಗಳ ನಡುವೆ ಹೊಳೆವ
ಕೆಂಡದುಂಡೆಗಳ ಮೇಲೆ ಮಂಕುಬೂದಿ
ಮೂಳೆ ಚಕ್ಕಳಗಳೊಳಗೆ ಹರಿದ ವಿದ್ಯುತ್
ಪ್ರವಾಹಕ್ಕೆ ಕಿತ್ತುಬಿದ್ದಿದೆ ಫ್ಯೂಸು
ಬಂಜರನು ಬಸಿರಾಗಿಸಿದ ಕೈತುಂಬ
ಕಾಯಿಕಟ್ಟಿದೆ ನಕ್ಷತ್ರಗಳ ಗುಂಪು
ಹಡಗುಗಳ ಹೊತ್ತ ಬೆನ್ನುಗಳ ಮೇಲೆ ರಟ್ಟು
ಕಟ್ಟಿದ ರಕ್ತದೋಕುಳಿಯ ಗುರುತು
ಆಕಾಶದೆತ್ತರಕೆ ಬೆಳೆದ ಮಹಲುಗಳ
ಬುಡದೊಳಗೆ ಕಾಂಕ್ರೀಟಾದ ಬೆವರು ಹೊಳೆ
ತೆಂಗುಬಾಳೆಗಳು ತಲೆದೂಗುವ ಗಾಳಿಯಲ್ಲಿ
ಸುಯ್ಯೆಂದು ತೇಲಿಬರುದ ಬವಣೆ ಗೀತ
ಸೂರ್ಯಚಂದ್ರರ ನಡುವೆ ಎಳೆದ ಬರೆಗಳ ಹಾಗೆ
ಹಾಸು ಹೊಕ್ಕುಗಳಲ್ಲಿ ಸೇರಿಹೋದ ಜೇಡರ
ಪೀತಾಂಬರದ ಚಿತ್ರ ಚೀತ್ಕಾರ
ನೂರು ಕನಸುಗಳ ಸುಟ್ಟು ಬೆಂಕಿಯಾಗಿರುವ
ಕುಲುಮೆಯ ಮುಂದೆ ಬರಿ ಮೈಗೆ
ಬಿಸಿಯುಸಿರ ಅಪ್ಪುಗೆಯ ಬಂಧನ
ಕಾಳರಾತ್ರಿಗಳಲ್ಲಿ ಅಗ್ನಿವಾಗ ತೊಗಲು
ಹೀರಿ ಹಿಪ್ಪೆಯಾದ ಒಡಕು ಬಳೆಗಳ ನಾದ
ಒಣಕಡ್ಡಿಗಳಿಗೆ ಸುಗಂಧ ಅತ್ತರುಗಳನು
ಲೇಪಿಸುವ ಬಿಳಿ ಜಿರಲೆಗಳ ಸಾಲು
ಜೀವ ನಿರ್ಜೀವದ ನಡುವೆ ತೂಗುಯ್ಯಾಲೆ
ಯಲಿ ಪಾತಾಳದಲಿ ಬಿದ್ದಿದೆ ಬದುಕು ಕಿತ್ತು
ಒಗೆದ ಮಣಿಸರದಂತೆ; ಪೋಣಿಸುವ ದಾರಕ್ಕೆ
ಹುಡುಕಾಟ ನಡೆದಿದೆ ಈಗೀಗ ಇಲ್ಲಿ.

—ಸಿ. ವೀರಣ್ಣ

ಕನ್ನಡಿಗನೆ ಸಾಗಿ ಬಾ !

ಬಾ ಕನ್ನಡಿಗನೆ ಸಾಗಿ ಬಾ
ಭಾರತದ ಭಾಷೆಗಳ
ಭಾವೈಕ್ಯ ಮುರಿಯುವ
ಛಿದ್ರ ಶಕ್ತಿಗಳ ತಡೆಯೋಣ ಬಾ !

ಸಮಗ್ರತೆಯ ಸಿದ್ಧಾಂತಗಳ
ಕಿತ್ತೆಸೆಯ ಹೊರಟಿರುವ
ವಿದ್ರೋಹಿ ಶಿಬಿರಕ್ಕೆ
ಕಿಚ್ಚು ಹಚ್ಚೋಣ ಬಾ
ಕನ್ನಡದ ಕವಚ ತೊಟ್ಟು

ಹಿಮಾಚಲದಿಂದ
ಹಿಂದೂ ಸಾಗರದವರೆಗೆ
ನದಿಯಾಗಿ ಹರಿದಿದೆ
ನೂರೆಂಟು ಭಾಷೆಗಳು
ಸರಿಸಮತೆ ಸಾರುತ್ತ
ಸಮರ ಸಾಗರಕ್ಕೆ
ಬಾ ಕನ್ನಡಿಗನೆ ಸಾಗಿ ಬಾ

ಸಮಹಕ್ಕುಬೇಕೆಂದು ಸಾರಿ ಬಾ
ಕನ್ನಡದ ಸೇನೆಯನು
ಸಮರ ಸಾಗರದೊಡನೆ
ಸಂಯೋಗಗೊಳಿಸು ಬಾ

—'ಉದಯ'

ಕಾರ್ಮಿಕ ವರ್ಗದ ಮುಂದಿರುವ ಕರ್ತವ್ಯ

ಶ್ರೀ

(3ನೇ ಪುಟದಿಂದ)

ಯುದ್ಧದ ಅಪಾಯ, ಸಾಮ್ರಾಜ್ಯಶಾಹಿ ಪಿತೂರಿ

ಜಗತ್ತಿನ ಸಮಾಜವಾದಿ ವ್ಯವಸ್ಥೆಯನ್ನು ನಾಶ ಮಾಡುವುದಕ್ಕಾಗಿ, ಜಗತ್ತಿನ ಎಲ್ಲೆಡೆ ಶಾಂತಿಯನ್ನು ಕದಡಿ ತಮ್ಮ ಅಧಿಕಾರವನ್ನು ಚಲಾಯಿಸುವುದರ ಮೂಲಕ ಶೋಷಣೆಯನ್ನು ಮುಂದುವರಿಸಲು ಸಾಮ್ರಾಜ್ಯಶಾಹಿ ರಾಷ್ಟ್ರಗಳು ಹವಣಿಸುತ್ತಿವೆ. ಜಗತ್ತಿನ ಬಂಡವಾಳಶಾಹಿಗಳಿಗೆ ನೇತಾರನಾದ ಅಮೇರಿಕ ಸಾಮ್ರಾಜ್ಯಶಾಹಿಯು ಅತ್ಯಂತ ಆಕ್ರಮಣಕಾರಿ, ಯುದ್ಧಕೋರ ನೀತಿಗಳಿಂದ ಜಗತ್ತನ್ನು ಯುದ್ಧದ ಅಂಚಿಗೆ ತಳ್ಳುತ್ತಿದೆ. ಯುದ್ಧದ ವಾತಾವರಣವನ್ನೂ, ಅಸ್ಥಿರತೆಯನ್ನು ಉಂಟುಮಾಡಿ ತನ್ನ ಬೇಳೆ ಬೇಯಿಸಿಕೊಳ್ಳಲು ಅಮೇರಿಕ ಸಾಮ್ರಾಜ್ಯಶಾಹಿಯು ಪ್ರಯತ್ನಿಸುತ್ತಿದೆ. ಭಾರತ ದೇಶದ ಗಡಿನಾಡಿನಲ್ಲೂ, ಭಾರತ ದೇಶದ ಒಳಗೂ ಇದು ನಡೆದಿದೆ. ನೆರೆ ರಾಜ್ಯಗಳಿಗೆ ಪ್ರೋತ್ಸಾಹಿಸಿ ಯುದ್ಧದ ವಾತಾವಣವನ್ನುಂಟು ಮಾಡುವುದು, ದೇಶದೊಳಗೆ ಆಂತರಿಕವಾಗಿ ಛಿದ್ರಕಾರಿ ಶಕ್ತಿಗಳಿಗೆ ಪ್ರೋತ್ಸಾಹಿಸಿ ದುಡಿಯುವ ವರ್ಗದ ಮತ್ತು ಜನತೆಯ ಒಗ್ಗಟ್ಟನ್ನು ಹತ್ತಿಕ್ಕಲು ಅಮೆರಿಕನ್ ಸಾಮ್ರಾಜ್ಯಶಾಹಿಯು ಪ್ರಯತ್ನಿಸುತ್ತಿದೆ. ಇಂತಹ ಸಂದರ್ಭದಲ್ಲಿ ಜಗತ್ತಿನಾದ್ಯಂತ ಶಾಂತಿಯನ್ನು ಕಾಯುವುದಕ್ಕೆ ಮತ್ತು ದೇಶದಲ್ಲಿ ಸಾಮ್ರಾಜ್ಯಶಾಹಿಯು ನಡೆಸುತ್ತಿರುವ ಪಿತೂರಿಯನ್ನು ವಿರೋಧಿಸಿ ದುಡಿಯುವ ವರ್ಗದ ಮತ್ತು ಜನತೆಯ ಐಕ್ಯತೆಯನ್ನು ಕಾಪಾಡಿಕೊಂಡು ಮುನ್ನಡೆಯುವುದಕ್ಕಾಗಿ ಶ್ರಮಿಸುವುದು ಕಾರ್ಮಿಕ ವರ್ಗದ ಮೇಲಿರುವ ಅತ್ಯಂತ ದೊಡ್ಡ ಜವಾಬ್ದಾರಿಯಾಗಿದೆ. ಕಾರ್ಮಿಕ ವರ್ಗದ ಪಕ್ಷವು ಕಾರ್ಮಿಕ ವರ್ಗವನ್ನು ಈ ಕಾರ್ಯಾಚರಣೆಗೆ ಇಳಿಸಲು ಮುಂದಾಗಬೇಕು. ದೇಶದ ಎಲ್ಲ ಜನತೆಯನ್ನು ಸಾಮ್ರಾಜ್ಯಶಾಹಿ ವಿರೋಧ ಹೋರಾಟದಲ್ಲಿ ಭಾಗವಹಿಸುವಂತೆ ಮಾಡಿ, ಸಾಮ್ರಾಜ್ಯಶಾಹಿಯನ್ನು ಹಿಮ್ಮೆಟ್ಟಿಸುವುದಕ್ಕಾಗಿ ಕಾರ್ಮಿಕ ವರ್ಗ ಒಂದಾಗಿ ಕಾರ್ಯಾಚರಣೆಗಿಳಿಯಲೇಬೇಕು.

ಛಿದ್ರಕಾರಿ ಶಕ್ತಿಗಳು ಅಪಾಯ

ವರ್ಗ ಪ್ರಜ್ಞೆಯನ್ನು ಮೂಡಿಸುವುದು ಮತ್ತು ಐಕ್ಯತೆಯನ್ನು ಸಾಧಿಸಿ, ರಾಜಕೀಯವಾಗಿ ಮುನ್ನಡೆಸುವುದಕ್ಕೆ ಸಾಕಷ್ಟು ಬೆಳೆಯದಿರುವ ಭಾರತ ದೇಶದ ಕಾರ್ಮಿಕ ವರ್ಗದಲ್ಲಿ ಚಾರಿತ್ರಿಕ ಮತ್ತು ಸಾಮಾಜಿಕವಾಗಿ ಬೆಳೆದು ಬಂದಿರುವ ಅನೇಕ ಆಚಾರ–ವಿಚಾರಗಳು ಅಡ್ಡಿಯುಂಟು ಮಾಡುತ್ತಿವೆ. ಬೇರೆ ಬೇರೆ ಸಿದ್ಧಾಂತ ಮತ್ತು ರಾಜಕೀಯ ಪಕ್ಷಗಳ ಪ್ರಭಾವದಡಿಯಲ್ಲಿ ದೇಶದ ಕಾರ್ಮಿಕ ವರ್ಗ ವಿಭಜನೆಯಾಗಿದೆ. ಆದರೂ ಇತ್ತೀಚಿಗಿನ ದಿನಗಳಲ್ಲಿ ಕಾರ್ಮಿಕ ಆಗರ್ದ ಐಕ್ಯ ಹೋರಾಟ ಮತ್ತು ಕಾರ್ಮಿಕ ವರ್ಗ ರಾಜಕೀಯ ಹೋರಾಟಗಳಲ್ಲಿ ಭಾಗವಹಿಸುವುದು ಹೆಚ್ಚುತ್ತಿದೆ. 1982 ಜನವರಿ 19 ರಂದು ರಾಷ್ಟ್ರದಾದ್ಯಂತ ಕಾರ್ಮಿಕ ವರ್ಗವು ನಡೆಸಿದ ಸಾರ್ವತ್ರಿಕ ಮುಷ್ಕರ (ಹಲವು ರಾಜ್ಯಗಳಲ್ಲಿ ಪೂರ್ಣ ಬಂದ್ ಆಚರಿಸಲ್ಪಟ್ಟಿತ್ತು)ವು ಇದಕ್ಕೊಂದು ನಿದರ್ಶನ.

ಕಾರ್ಮಿಕ ವರ್ಗದ ಐಕ್ಯತೆ ಮತ್ತು ರಾಜಕೀಯಾ ಹೋರಾಟಗಳಲ್ಲಿ ಭಾಗವಹಿಸುವಿಕೆ ಹೆಚ್ಚುತ್ತಿದ್ದಂತೆಯೇ ಜಾತಿ, ಮತ, ಧರ್ಮ ದೇವರು, ಭಾಷೆ, ಪ್ರದೇಶ, ಕೋಮು ಭಾವನೆಗಳನ್ನು ಪ್ರಚೋದಿಸಿ ದುಡಿಯುವ ಜನಕೋಟಿಯ ಒಗ್ಗಟ್ಟನ್ನು ಮುರಿಯುವ ಪ್ರಯತ್ನ ಮತ್ತು ಹೋರಾಟದ ದಿಕ್ಕನ್ನು ಬದಲಾಯಿಸುವ ಪ್ರಯತ್ನ ನಡೆಯುತ್ತಿದೆ. ಬೇರೆ ರಾಜ್ಯ ಮತ್ತು ಪ್ರದೇಶಗಳ ಸಮಗ್ರ ಬೆಳವಣಿಗೆ, ಭಾಷೆಯ ಪ್ರಶ್ನೆಗೆ ವೈಜ್ಞಾನಿಕ ರೀತಿಯ ಪರಿಹಾರ, ಜಾತಿ ಮತ್ತು ಕೋಮುಭಾವನೆಗಳನ್ನು ಹೋಗಲಾಡಿಸಲು ನಿರ್ದಿಷ್ಟ ಕ್ರಮ – ಇವಾವುಗಳ ಬಗ್ಗೆಯೂ ಸ್ವಾತಂತ್ರ್ಯನಂತರ ದೇಶವನ್ನಾಳಿಕೊಂಡು ಬಂದಿರುವ ಸರಕಾರಗಳು, ಅದರಲ್ಲೂ ಮುಖ್ಯವಾಗಿ ಕಾಂಗ್ರೆಸ್ ಸರಕಾರ ಗಮನವೀಯದೆ ಕೇವಲಕೆಲವೇ ದೊಡ್ಡ ಬಂಡವಾಳಗಾರರ ಹಿತಾಸಕ್ತಿಗಳನ್ನು ಕಾಯುತ್ತಾ ಬಂದುದರ ಪರಿಣಾಮವಾಗಿ, ಈ ಎಲ್ಲ ಸಮಸ್ಯೆಗಳ ಆಧಾರಿತವಾಗಿ ಛಿದ್ರಕಾರಿ ಶಕ್ತಿಗಳು ಛಿದ್ರಕಾರಿ ಕೆಲಸ ನಡೆಸುತ್ತಿವೆ. ಈ ಎಲ್ಲ ಛಿದ್ರಕಾರಿ ಚಟುವಟಿಕೆಗಳ ಹಿಂದೆ ಸಾಮ್ರಾಜ್ಯಶಾಹಿಯ ಕೈವಾಡವಿದೆ.

ಇನ್ನೊಂದೆಡೆ ಕಾರ್ಮಿಕ ವರ್ಗ ತನ್ನ ಆರ್ಥಿಕ ಬೇಡಿಕೆಗಳಿಗಾಗಿ ಮಾತ್ರ ಹೋರಾಡುವ ಆರ್ಥಿಕ ವಾದವನ್ನು ಬಿಟ್ಟು ಆರ್ಥಿಕ, ಸಾಮಾಜಿಕ-ರಾಜಕೀಯ ಹೋರಾಟಗಳನ್ನು ಜೋಡಿಸಿಕೊಂಡು ಮುನ್ನಡೆಯುವುದರಲ್ಲಿ ಹಿಂದೆ ಬಿದ್ದಿರುವುದೂ ಛಿದ್ರಕಾರಿ ಶಕ್ತಿಗಳಿಗೆ ಅವಕಾಶವನ್ನಿತ್ತಿದೆ. ಅಸ್ಪೃಶ್ಯತೆಯಂತಹ ಅತ್ಯಂತ ಹೀನವಾದ ಶೋಷಣಾಪದ್ಧತಿ, ಜಾತೀಯತೆ ಮತ್ತು ಇನ್ನೂ ಅನೇಕ ಸಾಮಾಜಿಕ ಸಮಸ್ಯೆಗಳ ವಿರುದ್ಧ ಕಾರ್ಮಿಕ ವರ್ಗವು ಹೋರಾಡಲು ಮುಂದಾಗದಿದ್ದಲ್ಲಿ ದುಡಿಯುವ ಜನಕೋಟಿಯ ಒಗ್ಗಟ್ಟನ್ನು ಸಾಧಿಸಿ, ಕ್ರಾಂತಿಕಾರಿ ಮಾರ್ಗದಲ್ಲಿ ಮುನ್ನಡೆಯುವುದು ಸಾಧ್ಯವಾಗಲಾರದು. ಎಲ್ಲ ಶೋಷಿತ ಜನತೆಯ ಆರ್ಥಿಕ–ಸಾಮಾಜಿಕ ಸಮಸ್ಯೆಗಳ ಪರಿಹಾರಕ್ಕಾಗಿ ಹೋರಾಡುವುದಕ್ಕೆ ಕಾರ್ಮಿಕ ವರ್ಗ ಮುಂದಾಗುವಂತೆ ಮಾಡುವುದು ಕಾರ್ಮಿಕ ವರ್ಗದ ಪಕ್ಷದ ಅದ್ಯಕರ್ತವ್ಯವಾಗಿದೆ.

ದೇಶದಲ್ಲಿ ಎಡ ಪ್ರಜಾಪ್ರಭುತ್ವ ಶಕ್ತಿಗಳಿಗೆ ನೇತೃತ್ವ ನೀಡುತ್ತಿರುವ, ಕಾರ್ಮಿಕ ವರ್ಗದ ಸಾಮೂಹಿಕ ಕ್ರಾಂತಿಕಾರಿ ಪಕ್ಷವಾದ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷವು ಕಾರ್ಮಿಕ ವರ್ಗವನ್ನು ಒಗ್ಗೂಡಿಸಿ, ರಾಜಕೀಯ ಹೋರಾಟಗಳಿಗೆ ವ್ಯಾಪಕವಾಗಿ ಇಳಿಸುವುದಕ್ಕೆ ಮುಂದಾಗಿದೆ, ಈ ಜವಾಬ್ದಾರಿಯನ್ನು ಕರ್ನಾಟಕ ರಾಜ್ಯದಲ್ಲೂ ನೆರವೇರಿಸಲು ಪಕ್ಷವು ಮುಂದಾಗಬೇಕು.

●

ಆಕಾಶ ಕೆಂಪೇರಿತು ಏಳು

ರವಿ ಹುಟ್ಟುವ ಮುನ್ನ ಕೆಂಪು ಆಕಾಶ
ಚಂದ್ರ ಹುಟ್ಟುವ ಮುನ್ನ ಕೆಂಪು ಆಕಾಶ
ಪೂರ್ವ ಪಶ್ಚಿಮ ಎಲ್ಲೆಲ್ಲು
ಓಕುಳ ರಂಗಿನಲಿ ಹೊಸ ಪ್ರಯೋಗ

ಓ ಮಾನವ ! ನೀ ಕಗ್ಗತ್ತಲ ಬಸಿರಲ್ಲಿ ಮೊಳಕೆಯಾದರು
ಇದ್ದದ್ದು ಸಾಕು ಇನ್ನಿರಲಾರೆ ನಾ— ಎಂದು
ಒದ್ದಾಡಿ, ದುಮುಕಾಡಿ ಕುದಿಯುವ ಕೆಂಪು ರಕ್ತದ
ಮಡುವಿನಲಿ, ರೂಪಗೊಂಡು ಬಂದವನೇ....

ಚೆಲ್ಲಿದ ರಕ್ತವ ನೋಡದೇ— ನೀ
ಕೊಟ್ಟಂತ ಕಿರುಕುಳವ ಗಮನಿಸದೇ—ಆ ತಾಯಿ
ನಿನ್ನನ್ನು ತಬ್ಬಿ ಮುದ್ದಾಡಿ....

ನನಗೊಬ್ಬ ವೀರ ಹುಟ್ಟಿದ ಅವ ಬಂದಂತ
ಜಾಗದ ಕೊಳಕನ್ನು ತೊಳೆದು
ಜಗತ್ತಿನ ಬಾಯನ್ನು ಸಿಡಿದು, ಕೆಂಪು ನೀರಲ್ಲಿ ಮುಳುಗಿ
ಭೂಮಿಯ ಮೇಲೆ ಎದ್ದು ಬಂದಂತ ಧೀರ...

"ನನ್ನ ದಾಸ್ಯ...ಹೆಣ್ಣಿನ ದಾಸ್ಯ...ದೇಶದ ದಾಸ್ಯವನ್ನು
ಹೋಗಲಾಡಿಸಲು ಹೋರಾಡುವನು"
ಎಂದವಳು ಮನಸಿನ ಮೂಗ ಕನಸಿನಲಿ
ತೇಲುತ್ತಿರುವಾಗ ನೀ...
ರಣಕವಚ ಧರಿಸಿ ಬಂದವನೇ,

ಹಸುದನಕ್ಕೆ ಹಿಂಡಿಹಾಕಿ ಹಾಲನ್ನು ಕರೆವಂತೆ
ನಿನಗೊಬ್ಬ ಬೆಲೆ ಕೊಡಲು ಅವನ ಬಲೆಯಲ್ಲಿ ನೀನಿದ್ದು
ನುಚ್ಚು ನೂರಾಗಿ ಚದರಿ ಬಾಳುವ ಬಾಳೊಂದು ಬಾಳೆ ?

ನೀ ಸುರಿದ ಬೆವರು ಹಿಂಗಿದ ಕಪ್ಪು ಮೋಡ
ದಿಕ್ಕು ಬದಲ ದ ಮಳೆ,
ಇಂದು ಕೊರಗಿ ಕುಗ್ಗಿದಾ ಹೊಟ್ಟೆಗಳು
"ನಾಳೆಯ" ನಂಬಿಕೆಯಿಲ್ಲದ ಬೆಳೆಗಳು.

ಓ ಮಗನೇ...ನೀ ಒಂದು ಷಂಡ, ಹೇಡಿ
ಜನಿಸಿದಾ ಸೂರ್ಯ ನಿನ್ನ ಹಾಗೆ ಕೆಂಪಿನಲಿ
ಆದರೆ, ಅವ ಬೀರುವಾ ಕಿರಣಗಳಲಿ
ಜಗಜಗ ಹೊಳೆಯುತಿದೆ ನಿಜ !
ನಿಜ !! ಅನ್ಯಾಯುವ ಸುಡುವಂತ ನಿಜಗಳು !!!

ಕತ್ತಲಲಿ ನರಳುವಾ ಹುಳುವೇ, ಬೆಳಕು ಇರುಳು
ಹರಿಯುವುದು ಕೆಂಪಿನಿಂದಲೇ...
ನಿನ್ನ ಅರಿವು ಶೌರ್ಯ-ಅದರಿಂದಲೇ...
ಏಳು, ಎದ್ದೇಳು ನೀ ನಿನ್ನ ತಾಯಿಗೆ ಮಾಡುವ
ಕರ್ತವ್ಯದ ಕಾಲವು ಬಂದಿದೆ, ಏಳು ಎದ್ದೇಳು,
ಆಕಾಶ ಕೆಂಪಾಯಿತು ಎದ್ದೇಳು ಏಳು ;.

—ನಾವರಸನ್

"ವರ್ಗಯುದ್ಧದ ವೀರಯೋಧರು ಮತ್ತು ಉತ್ತರ ಕುಮಾರರು"

(17ನೇ ಪುಟದಿಂದ)

ಸೋಷಿಲಿಸ್ಟರ ನಿರರ್ಥಕ ಅಸ್ತ್ರ ಕೆಲವು ಕಾರ್ಮಿಕ ಪರವಾದ ಮಾತುಗಳು ಮತ್ತು ಘೋಷಣೆಗಳು. ಅವರ ನೀತಿಗಳೆಲ್ಲವೂ ಕಾರ್ಮಿಕ ವರ್ಗವನ್ನು ತುಳಿಯುವ ಮತ್ತು ಬಂಡವಾಳಶಾಹಿಗಳನ್ನು ಮೇಲೆತ್ತುವಂಥವೇ ಆಗಿದ್ದವು. ವಿಲ್ಸನ್‌ರೂವೆಸ್‌ಲ್ಟ್, ಬೈನೀಸ್, ಟ್ರೂಮನ್ ಮತ್ತು ಐಸನ್ ಹೋವರ್‌ಗಳ ಬಾಲಬಡುಕರಾಗಿದ್ದುದರಿಂದ ಸೋಷಿಲಿಸ್ಟರು ಸಾಮ್ರಾಜ್ಯಶಾಹೀ ಚಮಚಾಗಳಾಗಿರುವುದು ಆಶ್ಚರ್ಯವೇನು? ಯುರೋಪಿನ ಅನೇಕ ದೇಶಗಳಲ್ಲಿ ಒಂದನೇ ಮತ್ತು ಎರಡನೇ ಮಹಾ ಯುದ್ಧಗಳ ಕಾಲಘಟ್ಟದಲ್ಲಿ ಹೊತ್ತಿಕೊಂಡ ಸಮಾಜವಾದೀ ಕ್ರಾಂತಿ ಆಂದೋಲನಗಳಿಗೆ ತಣ್ಣೀರೆರಚಿದರು; ದ್ರೋಹ ಬಗೆದರು. ಮೂರನೇ ಶಕ್ತಿಯನ್ನು ಅವರು ಹುಡುಕತೊಡಗಿದ್ದು ಹಿಂದಿನ ತಂತ್ರಗಳ ಮುಂದುವರಿಕೆಯೇ ಆಗಿದೆ. ಈ ಮೂರನೇ ಶಕ್ತಿ ಅಮೇರಿಕಾದ ಸಾಮ್ರಾಜ್ಯಶಾಹಿಗೆ ಬೆಂಬಲ ಕೊಡುವ ನೆಪಮಾತ್ರ. ಯುರೋಪಿನ ಮತ್ತು ಏಷ್ಯಾದ ಅನೇಕ ಬಂಡವಾಳಗಾರರು ಮೂರನೇ ಶಕ್ತಿಯಲ್ಲಿ ಇದ್ದಾರೆ. ಬ್ರಿಟೀಷ್ ಲೇಬರ್ ಪಾರ್ಟಿಯ ಮಾರ್ಗಾನ್ ಫಿಲಿಪ್ಸ್ ಮುಂದಿಟ್ಟ ವಾದ ಇದಕ್ಕೆ ತಕ್ಕದಾಗಿದೆ. ಅದರ ಪ್ರಕಾರ ಅಮೇರಿಕಾದ ಸಾಮ್ರಾಜ್ಯಶಾಹೀ ನೀತಿ ಪ್ರಗತಿಪರವಾದದ್ದು ಮತ್ತು ಸ್ವಾರ್ಥರಹಿತವಾದದ್ದು. ಕಮ್ಯೂನಿಸಂನ ವಿರುದ್ಧ ಈ ಎಲ್ಲಾ ಶಕ್ತಿಗಳನ್ನು ಸಂಘಟಿಸಬೇಕೆಂದು ಕರೆಕೊಟ್ಟು ಮತ್ತೆ ಎರಡನೇ ಅಂತರ್ ರಾಷ್ಟ್ರೀಯ ಘೋಷಣೆಯನ್ನು ಪುನರುಚ್ಚರಿಸಿದನು.

1947ರ ಸುಮಾರಿನಲ್ಲಿ ಇಟಲಿಯಲ್ಲಿ ಆದ ಘಟನೆಗಳು ಸೋಷಿಲಿಸ್ಟ್–ಸಾಮ್ರಾಜ್ಯವಾದಿ ಜೋಡಿಗೆ ಸಾಕ್ಷಿಗಳಾಗಿವೆ. ಬ್ರಿಟಿಷ್ ಲೇಬರ್ ಪಾರ್ಟಿ ಮತ್ತು ಅಮೇರಿಕನ್ ಫೆಡರೇಷನ್ ಆಫ್ ಲೇಬರ್‌ನ ಏಜೆಂಟರು ಬಲವಾದಿ ಸರಘಾಟ್‌ನೊಂದಿಗೆ ಜೊತೆಗೂಡಿ ಸೋಷಿಲಿಸ್ಟ್ ಪಾರ್ಟಿಯನ್ನು ಒಡೆದರು. ಪಾರ್ಲಿಮೆಂಟಿನಲ್ಲಿ ಸೋಷಿಲಿಸ್ಟರ 50 ಸ್ಥಾನಗಳನ್ನು ಪ್ರತಿಗಾಮಿಯಾದ ಡಿಗಾಸ್ಪರಿಯ ಕಡೆಗೆ ವಾಲಿಸಿದರು. ಅಲ್ಲದೆ ಅದೇ ವರುಷ ಅಮೇರಿಕಾ ತನ್ನ ಒಳಿತಿಗಾಗಿ ಇಟಲಿಗೆ ಬೃಹತ್ ಸಾಲವನ್ನು ನೀಡಿತು. ಕಮ್ಯೂನಿಸ್ಟ ಮತ್ತು ಎಡ ಸೋಷಿಲಿಸ್ಟ್ ಮಂತ್ರಿಗಳು ರಾಜಿನಾಮೆ ಕೊಡಬೇಕಾಗಿ ಬಂತು. ಒಟ್ಟಿನಲ್ಲಿ ಇಟಲಿಯಲ್ಲಿ ಪ್ರಜಾಪ್ರಭುತ್ವವನ್ನು ಮುಗಿಸಿ ಅಮೇರಿಕಾ ಸಾಮ್ರಾಜ್ಯವಾದದ ಉಪಗ್ರಹವಾಗುವಂತೆ ಸೋಷಿಲಿಸ್ಟರು ಅನುವು ಮಾಡಿಕೊಟ್ಟರು.

1945ರಲ್ಲಿ ಬ್ರಿಟನ್ನಿನ ಜನರು ಲೇಬರ್ ಪಾರ್ಟಿಯನ್ನು ಚುನಾಯಿಸಿ ಅಧಿಕಾರಕ್ಕೆ ತಂದರು. ಇಂಗ್ಲೆಂಡಿನ ಕಾರ್ಮಿಕರು ತಾವು ಕೊಟ್ಟ ಪ್ರತಿಯೊಂದು ಮತವೂ ಸಮಾಜವಾದದ ಬುನಾದಿಯಾಗುವುದೆಂದು ನಂಬಿದ್ದರು. ಆದರೆ ಆ ಮತಗಳಿಂದ ಸಮಾಜವಾದದ ಸಮಾಧಿಯಾಯಿತು. ಚುನಾವಣೆಗೆ ಮುನ್ನ ಶೇ. 14ರಷ್ಟು ನಿರುದ್ಯೋಗವಿತ್ತು. ಲೇಬರ್ ಸರಕಾರವು ಆರ್ಥಿಕ ಸ್ಥಿತಿಯನ್ನು ಇನ್ನೂ ಹದಗೆಡಿಸಿತು. ಶೇ. 80ರಷ್ಟು ಕೈಗಾರಿಕೆಗಳು ಬಂಡವಾಳಗಾರರ ವಶದಲ್ಲೇ ಉಳಿದವು. ರಾಷ್ಟ್ರೀಕರಣಗೊಂಡ ಕೈಗಾರಿಕೆಗಳಲ್ಲಿ ಶೇ. 20ರಷ್ಟು ಬಂಡವಾಳಗಾರರ ಕೈಯಲ್ಲೇ ಉಳಿದು ಅವರು ಮೊದಲಿಗಿಂತ ಹೆಚ್ಚು ಲಾಭವನ್ನು ಗಿಟ್ಟಿಸತೊಡಗಿದರು. ಕಾರ್ಮಿಕರ ನಿಜವೇತನ ಭೂಮಿಗಿಳಿಯಿತು. ಆರ್ಥಿಕ ಕ್ಷೇತ್ರದಲ್ಲಿ ಬಂಡವಾಳಶಾಹೀ ಬಿಕ್ಕಟ್ಟು ಮುಂದುವರಿಯಿತು. ಚರ್ಚಿಲ್‌ನ ನೀತಿಯನ್ನೇ ಅನುಸರಿಸುತ್ತ ಸೋವಿಯತ್ ರಷ್ಯಾವನ್ನು ವಿರೋಧಿಸುತ್ತಾ ಮತ್ತು ಅಮೇರಿಕಾವನ್ನು ಎತ್ತಿಕಟ್ಟುತ್ತಾ ಲೇಬರ್ ಸರಕಾರ ಮುಂದುವರಿಯಿತು. ಫಲಿತಾಂಶ: ಇಂಗ್ಲೆಂಡ್ ಕೂಡ ಇಟಲಿ ಮತ್ತು ಫ್ರಾನ್ಸ್‌ಗಳಂತೆ ಅಮೇರಿಕನ್ ಸಾಮ್ರಾಜ್ಯಶಾಹಿಯ ಉಪಗ್ರಹವಾಯಿತು.

ಇಂಗ್ಲೆಂಡಿನ ಸೋಷಿಲಿಸ್ಟ್ ಡೆಮೊಕ್ರಾಸಿಯ ಮತ್ತೊಂದು "ಸಾಧನೆ" ಭಾರತದಲ್ಲಿ ಕ್ರಾಂತಿಯನ್ನು ತಡೆಗಟ್ಟಿದ್ದು. ಇದಕ್ಕೆ ಟೋರಿಗಳ ಪೂರ್ತಿ ಬೆಂಬಲವಿತ್ತು. ಭಾರತದ ಬಂಡವಾಳಗಾರರಿಗೆ ಉಳಿಸಬೇಕಾದ್ದಷ್ಟನ್ನು ಉಳಿಸಿ ರಾಷ್ಟ್ರೀಯ ಹೋರಾಟವನ್ನು ಶಸ್ತ್ರಾಸ್ತ್ರಗಳಿಂದ ತುಳಿಯಿತು. ಮಲಯಾದ ಸ್ವಾತಂತ್ರ್ಯ ಹೋರಾಟವನ್ನು ರಕ್ತದಲ್ಲಿ ಮುಳುಗಿಸಿದ 'ಕೀರ್ತಿ'ಯು ಬ್ರಿಟೀಷ್ ಲೇಬರ್ ಪಾರ್ಟಿಗೆ ಸೇರಬೇಕು. ಇದೇ ಕಾಲದಲ್ಲಿ ಫ್ರೆಂಚ್ ಮತ್ತು ಡಚ್ಚ್ ಸೋಷಿಲಿಸ್ಟ್ ಪಾರ್ಟಿಗಳು ಇಂಡೋನೇಷ್ಯಾ ಮತ್ತು ಇಂಡೋಚೈನಾಗಳಲ್ಲಿ ತಮ್ಮ ಸಾಮ್ರಾಜ್ಯಶಾಹಿ ಹಿಡಿಯನ್ನು ಭದ್ರಗೊಳಿಸಲು ಉಗ್ರ ಕ್ರಮಗಳನ್ನು ಕೈಗೊಂಡರು. ಇದನ್ನು ಸೋಷಿಲಿಸ್ಟ್ ಡೆಮೊಕ್ರಾಟರು ಬಾಯಿ ತುಂಬಾ ಕೊಂಡಾಡಿದರು. 1931ರಲ್ಲಿ ಜಪಾನ್ ಚೀನಾದ ಮೇಲೆ ಮಾಡಿದ ಆಕ್ರಮಣವನ್ನು ಜಪಾನ್ ಸೋಷಿಲಿಸ್ಟ್ ಪಾರ್ಟಿಯ ಕಾರ್ಯದರ್ಶಿ ಅಕಮಕ್ಸು ಸಮರ್ಥಿಸಿದ್ದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ಜಪಾನ್ ಸಮಾಜವಾದಿ ರಾಷ್ಟ್ರವಾಗಲು ತನ್ನ ಕೈಗಾರಿಕೆಗೆ ಬೇಕಾದ ಕಚ್ಚಾ ವಸ್ತುಗಳಿಗಾಗಿ ಯಾರು ಯುದ್ಧ ಮಾಡಿದರೂ ಸರಿ ಎಂಬ ನಿಲುವು ಇವರ ಹಿಂದಿತ್ತು. ಈ ಎಲ್ಲ ಘಟನಾವಳಿಗಳೂ ಸಾಮ್ರಾಜ್ಯಶಾಹೀ ಪದ್ಧತಿ ಮತ್ತು ಸೋಷಿಲಿಸ್ಟ್ ಡೆಮೊಕ್ರಸಿಯ ರಕ್ತ ಸಂಬಂಧವನ್ನು ವ್ಯಕ್ತಗೊಳಿಸುತ್ತವೆ.

ಈ ಘಟನೆಗಳ ಪ್ರಾಮುಖ್ಯತೆ ಇಡೀ ಜಗತ್ ವ್ಯಾಪ್ತಿಯಾದುದು. ಪ್ರತಿಯೊಂದು ದೇಶದಲ್ಲೂ ಸೋಷಿಲಿಸ್ಟರು ಕಮ್ಯೂನಿಸಂ ಮತ್ತು ಸಮಾಜವಾದಗಳು ಪರಸ್ಪರ ವಿರುದ್ಧವೆಂದು ಪ್ರಚಾರವನ್ನು ಮಾಡುತ್ತಾ, ಬಂಡವಾಳಗಾರರ ತೋಳುಗಳನ್ನು ಬಲಗೊಳಿಸುತ್ತಾ, ಕಾರ್ಮಿಕರ ಬೆನ್ನಿಗೆ ಶೂಲವಿಕ್ಕುತ್ತಾ ಬಂದಿದ್ದಾರೆ. ತಾವು ಅಧಿಕಾರದಲ್ಲಿ ಇಲ್ಲದ ಕಡೆ ಬಂಡವಾಳಶಾಹೀ ಆರ್ಥಿಕತೆ ಪುರೋಗಾಮಿ ಬಂಡವಾಳವಾದಘಂತಹ ನೆಪಗಳನ್ನು ಮುಂದಿಕ್ಕಿಕೊಂಡು ಬೂರ್ಜ್ವಾಗಳ ಹಿತಗಳನ್ನು ಕಾಯುವ ನಾಯಿಗಳಾಗಿದ್ದಾರೆ. ಉದಾಹರಣೆಗೆ ಭಾರತದಲ್ಲಿ ಗಾಂಧೀವಾದದೊಂದಿಗೆ ಕೈಮಿಲಾಯಿಸಿದ್ದಾರೆ. ಇನ್ನು ತಾವು ಅಧಿಕಾರದಲ್ಲಿರುವ ಕಡೆ ಬಂಡವಾಳಗಾರರ ಪರವಾದ ಇವರ ಸರಕಾರಗಳು ಮತ್ತೆ ಚುನಾಯಿತವಾಗುವವರೆಗೆ ಸೋಷಿಲಿಸಂನ ಹಣೆಪಟ್ಟಿಯನ್ನು ಕಟ್ಟಿಕೊಂಡು ಬಂಡವಾಳಗಾರರ ಉಸ್ತುವಾರಿ ಸರಕಾರಗಳಾಗಿ ಕೆಲಸ ಮಾಡಿದ್ದಾರೆ.

ಮತ್ತೊಂದು ಆಶ್ಚರ್ಯದ ಸಂಗತಿ ಎಂದರೆ ಇಂತಹ ಕ್ರಾಂತಿ ವಿರೋಧಿ ಶಕ್ತಿಗಳು ಕಮ್ಯೂನಿಸ್ಟ್ ಪಕ್ಷಗಳೊಳಗೂ ಹೇಗೋ ಹೇಗೋ ನುಸುಳಿಕೊಂಡು ಬರುವವು. ಇಂತವರು ಎಡ ಮತ್ತು ಬಲ ಸಮಯಸಾಧಕರು; ಪೇಟಿ ಬೂರ್ಜ್ವಾ ವರ್ಗ ಮತ್ತು ಮಧ್ಯಮ ವರ್ಗದಿಂದ ಬಂದದ್ದರಿಂದ ಆ ವರ್ಗಗಳ ನೀತಿಗೆ ಬದ್ಧರಾಗಿರುವರು. ಕ್ರಾಂತಿಯ ಅಗ್ನಿ ಪರೀಕ್ಷೆಯ ಕಾಲದಲ್ಲಿ ಕಾರ್ಮಿಕ ವಿರೋಧಿ ಶಕ್ತಿಗಳ ಪರವಾದ ವಿಚಾರಗಳಿಗೆ ವಾಲಿಕೊಂಡಿರುವವರು. ಇದಕ್ಕೆ ಉದಾಹರಣೆಯಾಗಿ ಅನೇಕ ಹೆಸರುಗಳ ದೊಡ್ಡದೊಂದು ಪಟ್ಟಿಯನ್ನೇ ಕೊಡಬಹುದು; ಲೆವಿ, ಬ್ರಾಂಡ್ಲರ್, ಕಲ್ ಹೀಮರ್, ರುಥ್ ಫೆಶ್ಚರ್, (ಜರ್ಮನಿ); ಫ್ರೊಸ್ಸಾರ್ಡ್ ಸೌವರಿನ್, ಮೊನಟ್ಟೆ, ರೋಸ್ಮರ್, ಡೊರಿಯಟ್, (ಫ್ರಾನ್ಸ್); ಲೊವ್‌ಸ್ಟೋನ್, ಜಟ್ಲೋವ್ ಮತ್ತು ಲ್ಯೋರ್ (ಅಮೇರಿಕಾ); ಬುಬ್ನಿಕ್ (ಜೆಕೊಸ್ಲೋವಿಯಾ); ಕೊನ್ನೆವಾ ಮತ್ತು ಬೋಸ್ಕಿ (ಪೋಲೆಂಡ್) ಟ್ರಾಟ್‌ಸ್ಕಿ, ಬುಕ್ಹಾರಿನ್ (ರಷ್ಯಾ); ಚೆನ್-ತು-ಸ್ಸಿ (ಚೈನಾ); ಭಾರತದಲ್ಲಿ ಕೂಡ ಅನೇಕ ವರ್ಷ ಕಮ್ಯೂನಿಸ್ಟರೆಂದು ಮೆರೆದ ಶ್ರೀಪಾದ ಅಮೃತ ಡಾಂಗೆಯವರು ಇಂತಹ ಸಮಯಸಾಧಕರಾಗಿ ಕೆಲಸ ಮಾಡಿದ್ದು ಮತ್ತು ಕಮ್ಯೂನಿಸ್ಟ ಪಾರ್ಟಿಯು ಅವರನ್ನು ಹೊರಕ್ಕೆ ದಬ್ಬಿದ್ದು ಎಲ್ಲರಿಗೂ ತಿಳಿದ ವಿಷಯ. ಇದೇ ಮಾತುಗಳು ಎಂ.ಎನ್. ರಾಯ್‌ರವರ ಬಗ್ಗೆಯೂ ಹೇಳಬಹುದು. ಎಲ್ಲಿ ಎಲ್ಲಿ ಯಾವಾಗ ಯಾವಾಗ ಇಂತಹ ಕಾರ್ಮಿಕ ವಿರೋಧಿ ಮತ್ತು ಬಂಡವಾಳಗಾರ ಪರ ನಾಯಕರು ತಲೆ ಎತ್ತುತ್ತಾರೊ ಅವರನ್ನು ಉಗಿದು ಹೊರಗೆ ಹಾಕುವುದು ನಿಷ್ಠಾವಂತ ಕಮ್ಯೂನಿಸ್ಟ್ ಪಕ್ಷಗಳ ಧೋರಣೆಯಾಗಬೇಕು.

ಸಾಧಾರ—

ವಿಲಿಯಂ ಜಡ್ ಫೋಸ್ಟರ್‌ರವರ
ಮೂರು ಅಂತರ್ ರಾಷ್ಟ್ರೀಯ
ಚರಿತ್ರೆ

ಏಕೀಕರಣ ಚಳುವಳಿ - ಕಮ್ಯುನಿಸ್ಟ್ ಪಕ್ಷದ ಪಾತ್ರ - ಭಾಷೆ ಪ್ರಶ್ನೆ

(15ನೇ ಪುಟದಿಂದ)

ಕರ್ನಾಟಕವನ್ನು ಆಳುತ್ತ ಬಂದಿದ್ದ ಕಾಂಗ್ರೆಸ್ ಮುಖಂಡರು ಕನ್ನಡವನ್ನು ಕಡೆಗಣಿಸುತ್ತಲೇ ಬಂದಿದ್ದರು. ನಾಯಿಕೊಡೆಗಳಂತೆ ಇಂಗ್ಲಿಷ್ ಮಾಧ್ಯಮದ ಶಾಲೆಗಳು ತಲೆ ಎತ್ತಿದ್ದವು. ಮಧ್ಯಮ ವರ್ಗ ಹಾಗೂ ನೌಕರದಾರರು ಮೇಲ್ವರ್ಗದ ಜನರಂತೆಯೇ ತಮ್ಮ ಮಕ್ಕಳನ್ನು ಇಂಗ್ಲಿಷ್ ಮಾಧ್ಯಮದ ಶಾಲೆಗಳಿಗೇ ಕಳುಹಿಸುತ್ತಾರೆ. ಕನ್ನಡ ಭಾಷೆ ಮತ್ತು ಮಾಧ್ಯಮದ ಕುರಿತು ಗಂಭೀರವಾಗಿ ವಿಚಾರಿಸಲು ಯಾರೂ ತಯಾರಿರಲಿಲ್ಲ. ಭಾಷಾ ಶಿಕ್ಷಣದಲ್ಲಿ ಗೊಂದಲ.

ದೇವರಾಜ ಅರಸು ಮುಖ್ಯ ಮಂತ್ರಿಯಾದಾಗ ಎಲ್ಲ ವಿರೋಧಗಳನ್ನು ಕಡೆಗಣಿಸಿ ಮೈಸೂರು ಹೆಸರು ಕಿತ್ತುಹಾಕಿ ಕರ್ನಾಟಕ ರಾಜ್ಯವೆಂದು ನಾಮಕರಣ ಮಾಡಿದರು. 1979ರಲ್ಲಿ ಸಂಸ್ಕೃತವನ್ನು ಹಿಂದೆ ಸರಿಸಿ ಕನ್ನಡ ಕಲಿಕೆ ಕಡ್ಡಾಯವಾಗಿ ಮಾಡಿದ್ದರು. 1980ರಲ್ಲಿ ಅವರ ಮಂತ್ರಿ ಮಂಡಲ ರಾಜೀನಾಮೆ ಕೊಟ್ಟನಂತರ ಅವರ ಸರಕಾರ ಕೈಗೊಂಡ ನಿರ್ಣಯ ಮೂಲೆಗುಂಪಾಯಿತು. ಗುಂಡೂರಾವ್ ಸರಕಾರ ಗೋಕಾಕ್ ಸಮಿತಿ ನೇಮಿಸಿ ತನ್ನ ಕಾಲ ಮೇಲೆ ಕಲ್ಲು ಹಾಕಿಕೊಂಡಿದೆ. ಕರ್ನಾಟಕದಲ್ಲಿ ನೆಲೆಸಿರುವವರೆಲ್ಲ ಕನ್ನಡವನ್ನು ಕಡ್ಡಾಯವಾಗಿ ಕಲಿಯಬೇಕೆಂದು ಹೇಳಲು ಅಥವಾ ಸಂಸ್ಕೃತವನ್ನು ಯಾವ ಸ್ಥಾನಕ್ಕೆ ಇಳಿಸಬೇಕೆಂದು ನಿರ್ಧರಿಸಲು ಗೋಕಾಕ್ ಸಮಿತಿ ಅಥವಾ ಯಾವುದೇ ಸಮಿತಿ ಆಗತ್ಯವಿರಲಿಲ್ಲ. ಇದನ್ನು ಸರಕಾರವೇ ನಿರ್ಣಯಿಸಬಹುದಿತ್ತು. ಜನ ಸಂಪರ್ಕ, ವ್ಯವಹಾರ, ನೌಕರಿ ದೃಷ್ಟಿಯಿಂದ ಕನ್ನಡ ಕಲಿಯಲೇ ಬೇಕಾಗುತ್ತದೆ. ಇದರ ಸಲುವಾಗಿ ಕನ್ನಡವನ್ನು ರಾಜ್ಯ, ಕೋರ್ಟು, ಸರಕಾರಿ ವ್ಯವಹಾರ ಭಾಷೆಯನ್ನಾಗಿ ಮಾಡುತ್ತಿದ್ದರೆ ಎಲ್ಲರೂ ಕನ್ನಡವನ್ನೇ ಕಲಿಯುತ್ತಿದ್ದರು. ಆಯಾ ರಾಜ್ಯಗಳ ಜನರ ಭಾಷೆ ಸರಕಾರಿ ಭಾಷೆಯಾಗಬೇಕೆಂದೂ, ಮಾತೃ ಭಾಷೆಯಲ್ಲೇ ಶಿಕ್ಷಣ ಕೊಡಬೇಕೆಂದೂ, ಇದರ ಜೊತೆಯಲ್ಲೇ ಅಲ್ಪ ಸಂಖ್ಯಾತ ಮಾತೃ ಭಾಷೆಗಳನ್ನು ಕಡೆಗಣಿಸಬಾರದೆಂದೂ, ಅವುಗಳಿಗೂ ಸಂರಕ್ಷಣೆ ಸಿಗಬೇಕೆಂದೂ ಮಾರ್ಕ್ಸವಾದಿ ಕಮ್ಯುನಿಸ್ಟ್ ಪಾರ್ಟಿ ತನ್ನ ಸ್ಪಷ್ಟ ಅಭಿಪ್ರಾಯ ವ್ಯಕ್ತ ಮಾಡಿದೆ.

ಭಾಷಾವಾರ ಪ್ರಾಂತ ರಚನೆಯಾಗಬೇಕು, ಆಯಾ ಪ್ರಾಂತಗಳ ಭಾಷೆ ಸರಕಾರ, ಕೋರ್ಟು ಭಾಷೆಗಳಾಗಬೇಕು. ವಿಶ್ವವಿದ್ಯಾಲಯ, ಪೋಸ್ಟ್‌ಗ್ರಾಜ್ಯುಯೆಟ್‌ವರೆಗಿನ ಎಲ್ಲ ಹಂತಗಳ ಶಿಕ್ಷಣ ಮಾಧ್ಯಮ ಮಾತೃ ಭಾಷೆಗಳಲ್ಲೇ ನಡೆಯತಕ್ಕದ್ದೆಂದೂ ಮಾರ್ಕ್ಸವಾದಿ ಕಮ್ಯುನಿಸ್ಟ್ ಪಾರ್ಟಿ ತನ್ನ ನಿಲುವೆಯನ್ನು ಸ್ಪಷ್ಟಪಡಿಸಿದೆ. ಈ ಎಲ್ಲ ಬೇಡಿಕೆಗಳ ಸಾಧನೆಗಾಗಿ ಹೋರಾಡುತ್ತ ಬಂದಿದೆ. ಕರ್ನಾಟಕ ರಾಜ್ಯದಲ್ಲಿ ಕನ್ನಡವನ್ನು ರಾಜ್ಯ ಭಾಷೆಯನ್ನಾಗಿ ಮಾಡಲು ಹೋರಾಟ ನಡೆದಿದೆ. ಇದರಲ್ಲೂ ಸಿ. ಪಿ. ಐ. (ಎಂ) ತನ್ನ ಜವಾಬ್ದಾರಿಯನ್ನು ಹೊತ್ತುಕೊಂಡಿದೆ. ಚಳುವಳಿಯನ್ನು ಮುಂದುವರಿಸುತ್ತದೆ.

ಮಹಾರಾಷ್ಟ್ರ, ಕೇರಳ, ತಮಿಳುನಾಡು, ಆಂಧ್ರ ಪ್ರಾಂತಗಳಂತೆ ಕರ್ನಾಟಕದ ಆಳುವ ಪಕ್ಷ 1956 ನವಂಬರ್ 1 ರಂದು ಮೈಸೂರು ರಾಜ್ಯವೆಂದು ಘೋಷಿಸಿದಾಗ ಸರಕಾರಿ ಭಾಷೆ, ಕೋರ್ಟು ಭಾಷೆ ಕನ್ನಡವೆಂದು ಸಾರಿ, ಕನ್ನಡ ಭಾಷೆಯ ಬೆಳವಣಿಗೆಗೆ ಬೇಕಾದ ಕ್ರಮ ಕೈಗೊಂಡಿದ್ದರೆ ಗೋಕಾಕ ಸಮಿತಿಯೂ ಅವಶ್ಯ ಬೀಳುತ್ತಿರಲಿಲ್ಲ, ಗೋಕಾಕ ಸಮಿತಿ ಪರ-ವಿರುದ್ಧ ಚಳುವಳಿ ನಡೆಸಿ, ಜಾತಿ ಭಾವನೆ ಬೆಳೆಸಿ ಮನಸ್ಸು ನೋಯಿಸಿಕೊಳ್ಳುವ ಅವಶ್ಯಕತೆ ಇರುತ್ತಿರಲಿಲ್ಲ. ಹೊಸ ರಾಜ್ಯಕ್ಕೆ ಕರ್ನಾಟಕವೆಂದು ಹೆಸರಿಡಲು ಕಾಂಗ್ರೆಸ್ ಮುಖಂಡರು ಅಂಜಿದ್ದರು. ಮೈಸೂರು ಒಕ್ಕಲಿಗರ ಮತ ಕಳೆದುಕೊಳ್ಳುತ್ತೇವೆಂಬ ಅಂಜಿಕೆಯಿಂದ ಮೈಸೂರು ಪ್ರಾಂತವೆಂಬ ಹೆಸ

(ಮುಂದಿನ ಪುಟ ನೋಡಿ)

ಏಕೀಕರಣ ಚಳುವಳಿ

(ಹಿಂದಿನ ಪುಟದಿಂದ)

ರನ್ನು ಬದಲಾಯಿಸಲು ಒಕ್ಕಲಿಗ ಮುಖಂಡರೂ ವಿರೋಧಿಸುತ್ತಿದ್ದರು. ಆಡಳಿತಾತ್ಮಕವಾಗಿ ಒಂದೇ ಪ್ರಾಂತ ಕಮಿಟಿ ರಚಿಸಲೂ ಹೆದರಿದರು. ಆದರೆ ಕಮ್ಯುನಿಸ್ಟ್ ಪಾರ್ಟಿ ಪ್ರಾರಂಭದಿಂದಲೂ ಕರ್ನಾಟಕ ಪ್ರಾಂತ ಕಮಿಟಿಯೆಂದೇ ಹೆಸರಿಟ್ಟಿತ್ತು. ಹಾಗೆಯೇ ಕರ್ನಾಟಕ ಪ್ರಾಂತ ರೈತ ಸಂಘ, ವಿದ್ಯಾರ್ಥಿ ಫೆಡರೇಶನ್, ಕರ್ನಾಟಕ ಪ್ರಾಂತ ಟ್ರೇಡ್ ಯೂನಿಯನ್ ಕಾಂಗ್ರೆಸ್‌ಗಳೆಂದೇ ಕೆಲಸ ನಡೆಸುತ್ತಿದ್ದವು.

ಅಧಿಕಾರ ಮತ್ತು ಜಾತಿಗಾಗಿಯೇ ದುಡಿಯುವ ಬಂಡವಾಳಶಾಹಿ ಕಾಂಗ್ರೆಸ್ ಪಕ್ಷ ಜನತೆಯ ಒತ್ತಾಯಕ್ಕಾಗಿಯೇ ಭಾಷಾವಾರ ಪ್ರಾಂತ ರಚನೆಯ ತತ್ವಕ್ಕೆ ಅರೆ ಮನಸ್ಸಿನಿಂದ ಒಪ್ಪಿಕೊಂಡಿತ್ತು. ನಿರ್ವಾಹವಿಲ್ಲದೆ ಜನತೆಯ ಚಳುವಳಿಗೆ ಅಂಜಿ ಮೈಸೂರು ಹೆಸರಲ್ಲಿ ರಾಜ್ಯ ಸ್ಥಾಪಿಸಿ, ಕನ್ನಡಿಗರ ಒತ್ತಾಯಕ್ಕೆ ಕರ್ನಾಟಕವೆಂದು ನಾಮಕರಣ ಮಾಡಿತು. ಕನ್ನಡ ಭಾಷೆ ರಾಜ್ಯ ಭಾಷೆಯಾಗಬೇಕೆಂದು ಬಲಿಷ್ಟ ಚಳುವಳಿ ನಡೆಯದೆ ಇದ್ದುದರಿಂದ, ಸರ್ಕಾರದ ಮೇಲೆ ಸಾಕಷ್ಟು ಒತ್ತಾಯ ತರಲಿಕ್ಕೆ ಸಾಧ್ಯವಾಗದ್ದರಿಂದ ಇಂಗ್ಲಿಷ್ ರಾಜ್ಯಭಾಷೆಯಾಗಿಯೇ ಉಳಿಯಿತು. ಈಗ ಅನಾವಶ್ಯಕವಾಗಿ ಎಲ್ಲ ಅಲ್ಪ ಭಾಷಿಕರಲ್ಲಿ ಮನಸ್ತಾಪ ಉಂಟು ಮಾಡಿ ಗೋಕಾಕ್ ಸಮಿತಿಯ ವರದಿ ಅನುಷ್ಠಾನಕ್ಕಾಗಿ ಚಳುವಳಿ ನಡೆಸುವಂತಾಗಿ ಬಂದಿರುವುದು ಗುತ್ತೇದಾರಿ ಪರ ಕಾಂಗ್ರೆಸ್ ಪಕ್ಷದ ನೀತಿ ಹಾಗೂ ಕನ್ನಡಿಗರ ಅಲಕ್ಷವೇ ಕಾರಣವೆಂದು ಹೇಳಿದರೆ ತಪ್ಪೇನಿಲ್ಲ. ಕನ್ನಡವೇ ರಾಜ್ಯ ಭಾಷೆ, ಕೋರ್ಟು ಭಾಷೆ ಆಗಬೇಕೆಂದು ಕಮ್ಯೂನಿಸ್ಟ್ ಪಾರ್ಟಿ ಮಾತ್ರ ಸದಾಕಾಲ ಪ್ರಯತ್ನ ಮಾಡುತ್ತಲೇ ಬಂದಿದೆ. ●

ನಂಬಿಕೆ

ಹೃದಯದ ತುಂಬ ಗಾಯಗಳು
ಮನದ ತುಂಬ ದುಗುಡಗಳು
ಗಾಯ, ದುಗುಡಗಳನ್ನು
ಘಾಡಗೊಳಿಸುತ್ತೇನೆ
ಹತಾಶೆಯಿಂದಲ್ಲ, ವಿಷಾದದಿಂದಲ್ಲ
ನಿನ್ನೆ, ಇಂದು, ನಾಳೆಗಳ
ಚಾರಿತ್ರಿಕ ಪ್ರಜ್ಞೆಯಿಂದ
ಮನುಷ್ಯತ್ವವನ್ನರಸುವ
ವೈಜ್ಞಾನಿಕ ನಂಬಿಕೆಯಿಂದ

—+—

ನೋವಿಗೊಳಗಿನಿಂದ
ಸಿಡಿದು ಬಂದೆ ನೀನು
ಕರಗಲಿಲ್ಲ ನೋವಿಗೆ
ಬದಲಾಗಿ
ಬಿಸಿಯಾದೆ
ಉರಿಯಾದೆ
ಸಿಗಿ ಸಿಗಿ ಕೆಂಡವಾದೆ

— ಜಿ. ನಾ.

ಭಾರತದ ಕಾರ್ಮಿಕ ವರ್ಗದ ಸಂಕ್ಷಿಪ್ತ ಚರಿತ್ರೆ

(21ನೇ ಪುಟದಿಂದ)

ನಡೆಯಿತು. ಆಗ ಯುದ್ಧದ ಬಗೆಗಿನ ಎರಡು ಕರಡು-ನಿರ್ಣಯ ಮಂಡಿಸಲಾಯಿತು. ಕಮ್ಯೂನಿಸ್ಟರು ಮಂಡಿಸಿದ ನಿರ್ಣಯ ಮುಕ್ಕಾಲು ಬಹುಮತ ಪಡೆಯದೆ ಮಂಜೂರಾಗಲಿಲ್ಲ. ಆದ್ದರಿಂದ ಎ. ಐ. ಟಿ. ಯು. ಸಿ. ಯುದ್ಧದ ಬಗ್ಗೆ ಹಳೆ ನೀತಿಯನ್ನೇ ಮುಂದುವರಿಸಿತು. ಯುದ್ಧ ಮುಗಿಯುವ ಹೊತ್ತಿಗೆ ನಡೆದ 21ನೇ ಅಧಿವೇಶನದಲ್ಲಿ ದೇಶದ ಸ್ವಾತಂತ್ರ್ಯ ಬಗ್ಗೆ ನಿರ್ಣಯ ಅಂಗೀಕರಿಸಲಾಯಿತು. ಡಾಂಗೆಯವರ ನೇತೃತ್ವದಲ್ಲಿ ಪ್ರತಿನಿಧಿಗಳನ್ನು ವರ್ಲ್ಡ್ ಫೆಡರೇಷನ್ ಆಫ್ ಟ್ರೇಡ್ ಯೂನಿಯನ್‌ನಲ್ಲಿ ಭಾಗವಹಿಸಲು ಕಳಿಸಲಾಯಿತು. ಮತ್ತು ಅದಕ್ಕೆ ಎ. ಐ. ಟಿ. ಯು. ಸಿ. ಸದಸ್ಯ ಸಂಸ್ಥೆಯಾಯಿತು. 1948ರ ಹೊತ್ತಿಗೆ ಐ. ಟಿ. ಯು. ಸಿ. ಸದಸ್ಯ ಸಂಖ್ಯೆ ಏಳು ಲಕ್ಷವಿತ್ತು.

ರಾಷ್ಟ್ರೀಯ ಚಳುವಳಿಯ ಕೊನೆಯ ಹಂತ (1945-47)

ಯುದ್ಧ ಮುಗಿಯುವ ಹೊತ್ತಿಗೆ ಕಾರ್ಮಿಕ ವರ್ಗ ಸುಸಂಘಟಿತ, ವರ್ಗ ಪ್ರಜ್ಞೆಯುಳ್ಳ, ಸಾಮ್ರಾಜ್ಯಶಾಹಿ ವಿರುದ್ಧ ಹೋರಾಡುವ ಸ್ವತಂತ್ರ ಶಕ್ತಿಯಾಗಿ ಬೆಳೆದಿತ್ತು. ಅಜಾದ್ ಹಿಂದ್ ಸೇನೆಯ ಅಧಿಕಾರಿಗಳ ವಿರುದ್ಧ ಮೊಕದ್ದಮೆ, ಮುಂತಾದುವು ಜನರನ್ನು ಪುನಃ ರೊಚ್ಚಿಗೆಬ್ಬಿಸಲು ಆರಂಭಿಸಿದವು. ಯುದ್ಧಾನಂತರ ಸಾಮ್ರಾಜ್ಯಶಾಹಿ-ವಿರೋಧಿ ಅಲೆ ಎದ್ದಿತು, ಅಜಾದ್ ಹಿಂದ್ ಸೇನೆಯ ಕಾರ್ಯಾಚರಣೆ ಸೈನ್ಯದಲ್ಲೂ ರಾಷ್ಟ್ರೀಯ ಭಾವನೆಯನ್ನು ಬಡಿದೆಬ್ಬಿಸಿದ್ದವು. 1946 ಫೆಬ್ರವರಿಯಲ್ಲಿ ಬ್ರಿಟೀಷರ ವಿರುದ್ಧ ರಿನ್ (RIN) ನೌಕಾ ಸೈನಿಕರು ಪೂರ್ಣ ಪ್ರಮಾಣದ ದಂಗೆ ಪ್ರಾರಂಭಿಸಿದರು. ಇದನ್ನು ಬಗ್ಗು ಬಡಿಯಲು ಬ್ರಿಟಿಷ್ ನೌಕಾ ಪಡೆ ತನ್ನೆಲ್ಲ ಬಲ ಪ್ರಯೋಗಿಸಲು ಸಿದ್ಧರಾದಾಗ ಶರಣಾಗದೆ, ಜನರಿಗೆ ಹರತಾಳ, ಮುಷ್ಕರಗಳಿಂದ ಬೆಂಬಲ ನೀಡುವಂತೆ ಕೇಳಿಕೊಂಡರು. ಕಾಂಗ್ರೆಸ್, ಮುಸ್ಲಿಂಲೀಗ್ ಮತ್ತು ಕಮ್ಯೂನಿಸ್ಟರಿಗೂ ಮನವಿ ಮಾಡಿಕೊಂಡರು. ಇದರಲ್ಲಿ ಕೇಂದ್ರೀಯ ನೌಕಾಸೇನೆ ಮುಷ್ಕರ ಸಮಿತಿಗೆ ಕಮ್ಯೂನಿಸ್ಟ್ ಪಕ್ಷ ಮತ್ತು ಕಾರ್ಮಿಕ ಸಂಘಟನೆಗಳಿಂದ ಮಾತ್ರ ಬೆಂಬಲ ದೊರಕಿತು. ಫೆಬ್ರವರಿ 22 ರಂದು ಪೂರ್ಣ ಹರತಾಳ, ಮುಷ್ಕರ ಆಚರಿಸಲಾಯಿತು. ಇದನ್ನು ಹತ್ತಿಕ್ಕಲು ನಡೆಸಿದ ದಮನ ಕಾರ್ಯದಲ್ಲಿ ಮೂರು ದಿನಗಳಲ್ಲಿ ಸುಮಾರು 250 ಜನ ಸತ್ತರು, ಕಲ್ಕತ್ತಾ, ಮದ್ರಾಸ್, ಕರಾಚಿಗಳಲ್ಲೂ ನೌಕಾ ಸೈನಿಕರ ಪರವಾಗಿ ಪ್ರದರ್ಶನಗಳು ನಡೆದವು.

ಈ ಎಲ್ಲ ಘಟನೆಗಳು ಬ್ರಿಟೀಷರನ್ನು ಮತ್ತು ಕಾಂಗ್ರೆಸ್ ನಾಯಕತ್ವದ ಬುಡವನ್ನೇ ಅಲ್ಲಾಡಿಸಿದವು. ಆದರೆ ರಾಷ್ಟ್ರೀಯ ಚಳುವಳಿಯ ದುರ್ಬಲತೆಗಳು ಗೊತ್ತಿದ್ದ ಬ್ರಿಟಿಷರು ದೇಶವನ್ನು ವಿಭಜಿಸುವ ಹಂಚಿಕೆ ಹಾಕುತ್ತಿದ್ದರು. ಇದಕ್ಕೆ ಹಲವು ಸಂಧಾನಗಳನ್ನು ನಡೆಸಿದರು. ಕೊನೆಗೂ ದೇಶವನ್ನು ವಿಭಜಿಸುವುದರಲ್ಲಿ ಸಫಲರಾದರು.

ತೀವ್ರ ರಾಜಕೀಯ ಬದಲಾವಣೆಗಳ ಹಿನ್ನೆಲೆಯಲ್ಲೂ ತೀವ್ರ ಆರ್ಥಿಕ ಹೋರಾಟಗಳು ನಡೆಯುತ್ತಿದ್ದವು. ಈ ಅವಧಿಯಲ್ಲಿ ಕಾಡುತ್ತಿದ್ದ ಸಮಸ್ಯೆಗಳೆಂದರೆ ಯುದ್ಧ ಸಮಯದಲ್ಲಿ ಸೇರಿಸಿಕೊಂಡಿದ್ದ ಕೆಲಸಗಾರರ ವಜಾ ಮತ್ತು ವೇತನದಲ್ಲಿ ಕಡಿತ. ;ಯುದ್ಧ ಮುಗಿದ ನಂತರ ಸುಮಾರು 1946 ರಲ್ಲಿ 1629 ಮುಷ್ಕರಗಳಲ್ಲಿ 19 ಲಕ್ಷ ಕಾರ್ಮಿಕರು ನಿರತರಾಗಿದ್ದರು. ಈ ಅವಧಿಯ ಅತ್ಯಂತ ದೊಡ್ಡ ಮುಷ್ಕರವೆಂದರೆ ಅಂಚೆ ಮತ್ತು ತಂತಿ ಇಲಾಖೆಯ ನೌಕರರ ಅನಿರ್ದಿಷ್ಟ ಮುಷ್ಕರ. ಚಮನ್‌ಲಾಲ್ ನಾಯಕತ್ವದ ಯೂನಿಯನ್ ಮತ್ತು ಕಾಂಗ್ರೆಸ್ ಈ ಮುಷ್ಕರವನ್ನು ವಿರೋಧಿಸಿತು. ಎ. ಐ. ಟಿ. ಯು. ಸಿ. ಇದಕ್ಕೆ ಬೆಂಬಲ ನೀಡಿತ್ತು. ಮುಂಬಯಿ, ಮದ್ರಾಸ್, ಬಂಗಾಳ, ಅಸ್ಸಾಂಗಳಲ್ಲಿ ಬೆಂಬಲಾರ್ಥ ಮುಷ್ಕರ ಸಹ ಸಂಘಟಿಸಿತು. ಈ ಮುಷ್ಕರದ ನಂತರ ಎಲ್ಲ ಯೂನಿಯನ್‌ಗಳು ಎ. ಐ. ಟಿ. ಯು. ಸಿ. ಗೆ ಸದಸ್ಯರಾದುವು.

1946ರಲ್ಲಿ ನಡೆದ ಮಧ್ಯಂತರ ಚುನಾವಣೆಗಳಲ್ಲಿ ಕಾಂಗ್ರೆಸ್ ಪಂಜಾಬ್, ಸಿಂಧ್ ಮತ್ತು ಬಂಗಾಳ ಬಿಟ್ಟು ಬೇರೆಲ್ಲಾ ಪ್ರಾಂತ್ಯಗಳಲ್ಲಿ ಜಯಗಳಿಸಿತು. ಕಮ್ಯೂನಿಸ್ಟ್ ಪಕ್ಷ ಈ ಚುನಾವಣೆಗಳಲ್ಲಿ ಭಾಗವಹಿಸಿ ಕಾಂಗ್ರೆಸ್ ಲೀಗ್ ನಂತರದ ಮೂರನೆಯ ದೊಡ್ಡ ರಾಜಕೀಯ ಶಕ್ತಿಯಾಗಿ ಮುಂದೆ ಬಂತು. ಈ ಸಮಯದಲ್ಲಿ ಇನ್ನೂ ಪ್ರತಿಗಾಮಿಯಾದ "ಕೈಗಾರಿಕೆ ವಿವಾದಗಳ ಮಸೂದೆ" ಮುಂಬೈಯ ಕಾಂಗ್ರೆಸ್ ಸರ್ಕಾರ ತಂದಿತು. ಇದನ್ನು ಎ. ಐ. ಟಿ. ಯು. ಸಿ. ತೀವ್ರವಾಗಿ ಖಂಡಿಸಿತು.

ಮುಷ್ಕರ ತಪ್ಪಿಸುವ ಕಾಂಗ್ರೆಸ್‌ನ ಕಾರ್ಮಿಕ ನೀತಿಗೆ ಎ. ಐ. ಟಿ. ಯು. ಸಿ. ತಾಳ ಹಾಕದಿದ್ದುದು, ಕಮ್ಯೂನಿಸ್ಟ್ ಪಕ್ಷದ ಬಲವರ್ಧನೆ ಕಾಂಗ್ರೆಸ್ ನಾಯಕರನ್ನು ಚಿಂತೆಗೀಡುಮಾಡಿತು. 1946 ಡಿಸೆಂಬರ್‌ನಲ್ಲಿ ಸೇರಿದ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಕಮ್ಯೂನಿಸ್ಟರನ್ನು ಕಾಂಗ್ರೆಸ್ಸಿನಿಂದ ಹೊರ ಹಾಕುವ ನಿರ್ಧಾರ ತೆಗೆದುಕೊಂಡಿತು. ಅಲ್ಲದೆ ಕಾಂಗ್ರೆಸ್ ಕಾರ್ಮಿಕ ನಾಯಕರ ಒಂದು ಅಧಿವೇಶನ ಕರೆದು ಇನ್ನೊಂದು ಸಂಘಟನೆ—ಇಂಡಿಯನ್ ಟ್ರೇಡ್ ಯೂನಿಯನ್ ಕಾಂಗ್ರೆಸ್-ಆರಂಭಿಸಿತು. ಎ.ಐ.ಟಿ.ಯು.ಸಿ. ವರ್ಗ ಹೋರಾಟವನ್ನು ಆಧರಿಸಿರುವುದು ಹಾಗೂ ಕಾಂಗ್ರೆಸ್‌ನ ಕಾರ್ಮಿಕ ನೀತಿಯನ್ನು ಒಪ್ಪದಿರುವುದು ಈ ಸಂಘಟನೆಯ ರಚನೆಗೆ ಕಾರಣ ಎಂದು ಹೇಳಲಾಯಿತು. ಈ ರೀತಿ ಬ್ರಿಟೀಷರಿಂದ ಅಧಿಕಾರ ವಹಿಸಿಕೊಳ್ಳುವ ಮೊದಲು ಕಾರ್ಮಿಕ ಚಳುವಳಿಯನ್ನು ಒಡೆಯುವುದರಲ್ಲಿ ಬೂರ್ಜ್ವಾ ನಾಯಕರು ಸಫಲರಾದರು.

ಸಾಮ್ರಾಜ್ಯಶಾಹಿ-ವಿರೋಧಿ ಮತ್ತು ರಾಷ್ಟ್ರೀಯ ಸ್ವಾತಂತ್ರ್ಯ ಚಳುವಳಿಯಲ್ಲಿ ಕಾರ್ಮಿಕ ವರ್ಗದ ಪಾತ್ರ ಅಮೋಘವಾದುದು. ಸುಳ್ಳು ಇತಿಹಾಸ ಹೇಳುವ ಪ್ರತಿಗಾಮಿಗಳು ಇದನ್ನು ಎಷ್ಟೇ ಲಘುವಾಗಿ ನೋಡಿದರೂ, ಇದು ಭಾರತದ ರಾಷ್ಟ್ರೀಯ ಸ್ವಾತಂತ್ರ್ಯ ಚಳುವಳಿಯಲ್ಲಿ, ಜನ ಹೋರಾಟದ ಚರಿತ್ರೆಯಲ್ಲಿ ಅಮೋಘ ಅಧ್ಯಾಯ.

[ಸ್ವಾತಂತ್ರ್ಯ ನಂತರದ ಅವಧಿಯ ವಿವರವನ್ನು ಇನ್ನೊಂದು ಸಂದರ್ಭದಲ್ಲಿ ಪರಿಶೀಲಿಸೋಣ] ●

ಕರ್ನಾಟಕದ ಬೆಳ್ಳಿಹಬ್ಬ

ಬೆಳ್ಳಿ ಹಬ್ಬವು ರಾಜ್ಯಕೆ ಶೋಭೆ
ಎಂಬೀ ಹಗರಣ ಹಣವಂತರಿಗೆ
ಬಡಮಕ್ಕಳ ಹೆಣ ಎತ್ತಲಿಕೆ

ಶಾಲೆಯ ಮಕ್ಕಳ ಬಿಸಿಲಲಿ ನಿಲ್ಲಿಸಿ
ಮಂತ್ರಿಗೆ ಸಲಾಮು ಹೊಡೆಯಲಿಕೆ
ಭಂಡಾರದ ಹಣವ ಸುಲಿಯಲಿಕೆ

ಬಹುಜನ ಅನ್ನದ ಮೇಲಿನ ಹಬ್ಬ
ಕೆಲವರ ಮೋಜಿನ ಆಟಿಕೆ ತುಪ್ಪ
ಕೂಳಿಲ್ಲದ ಜನರಾದರು ಬೆಪ್ಪ

ಸಾವಿರ ಲಕ್ಷದ ಲೆಕ್ಕದ ಹಣವು
ಪೋಲು ಮಾಡಿದ ತುತ್ತಿನ ಹಬ್ಬ
ಕರ್ನಾಟಕದ ಖಜಾನೆ ಚೊಕ್ಕ

ಆಡಂಬರದ ತುಳಿತಕೆ ಸಿಕ್ಕ
ಕನ್ನಡ ದೇವಿಯು ಅದಾವ ಲೆಕ್ಕ
ಹೆಸರಿಗೆ ಕರ್ನಾಟಕ ಮಾತೆ
ಕನ್ನಡ ಸಿರಿತನ ಕಾಣೆನುತೆ

ಲಾಠಿ, ಲೂಟಿ, ಬೆನ್ನಲಿ ಬೆತ್ತ
ಪೋಲಿಸ ರಾಜ್ಯವೇ ಸುತ್ತಮುತ್ತ
ಕಠೋರ ಶಬ್ದವು ಅವಾಚ್ಯ ಬೈಗಳು
ದಿನ ನಿತ್ಯದ ಹೊಸ ಗಾನಗಳು

ಲಾಠಿ ಏಟೇ, ಬಡವನಿಗೆ
ಅನ್ನವ ಬೇಡುವ ದಲಿತನಿಗೆ
ಕೆಲಸವು ದೊರಕದ ತರುಣನಿಗೆ
ನ್ಯಾಯವ ಬೇಡುವ ಕೈಗಳಿಗೆ

ಅತ್ಯಾಚಾರವೇ ನಿತ್ಯವಿಚಾರ
ಕನ್ನಡ ಪತ್ರಿಕೆ ತುಂಬುವ ಸಾರ
ಮೋಸದ, ಭಾಷಣ ಮುಂಬದಿಯಲ್ಲಿ
ಅಹಾಕಾರವು ಹಿಂಬದಿಯಲ್ಲಿ


ಕನ್ನಡ ಹೃದಯವೇ ಬೆಂಗಳೂರು
ಜನತೆಗೆ ಸುಲಿಯಲು ಬಲುಜೋರು
ಹಳ್ಳಿಯ ಹಣದಲ್ಲಿ ಇಲ್ಲಿಯ ಸೌಧ
ಆಳುವ ದೊರೆಗಳ ವಿಧಾನಸೌಧ

ಕಳ್ಳ ಖಧೀಮರು ಬೆಂಗಳೂರಲ್ಲಿ
ಮಂತ್ರಿವರೇಣ್ಯರ ರಕ್ಷಣೆಯಲ್ಲಿ
ಮೋಜಿನ ಜೀವನ ನಡೆಸುವರು
ಬೆಳ್ಳಿಯ ಹಬ್ಬವ ಮಾಡುವರು

ಕುಡಿಯಲು ಹಳ್ಳಿಗೆ ನೀರಿಲ್ಲ
ರೈತನ ಬೆಳೆಗೆ ಬೆಲೆ ಇಲ್ಲ
ರಸ್ತೆ, ಲೈಟು ಇಲ್ಲವೇ ಇಲ್ಲ
ಬೆಂಗಳೂರಿಗೆ ಟಿ. ವಿ. ಬಂತಲ್ಲ !

ಯಾರಿಗಾಗಿ ಈ ಸರಕಾರ
ಎಂಥಹ ಜನರ ದರಬಾರ
ನಿಜವನು ಅರಿಯುವ ಜನಹಾಳು
ಬೆಳ್ಳಿ ಹಬ್ಬದಿ ಈ ತೆರ ಗೋಳು

— ಮನೋಹರ ಜಸ್ಸು


Consolidate
National
Integration
Government of West Bengal
BEEVAS/ICA/2/81

WITH BEST COMPLIMENTS

FROM



Printed & Published by P. Ramachandra Rao by him on behalf of the Communist Party of India (Marxist) Karnataka State Committee· L-56 K. V. Temple Street Sultanpet, Bangalore-560 053 Editorial and managerial office :L-56, K. V. Temple Street ,Sultanpet, Bangalore-560 053. Phone-24154. Printed at Ravee Traders, No. 8/1, J. M. Lane, Balepet Cross, Bangalore-560 053. EDITOR : M. K. BHAT.